
ಕರ್ನಾಟಕ ಸರ್ಕಾರ



ಬೆಳ್ಳಿ ಚುಕ್ಕೆಗ

ಅರೆಭಾಷೆ ನಾಟಕ ಸಂಕಲನ

ಬೈತಡ್ಕ ಜಾನಕಿ ಬೆಳ್ಯಪ್ಪ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

ಬೆಳ್ಳಿ ಚುಕ್ಕೆಗ

ಅರೆಭಾಷೆ ನಾಟಕ ಸಂಕಲನ

ಬೈತಡ್ಕ ಜಾನಕಿ ಬೆಳ್ಯಪ್ಪ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

'BELLI CHUKKEGA' a collection of Drama Script in Arebhase language written by Bythadka Janaki Belliappa, Madikeri, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2017**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : 84

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಶ್ರೀ ಬಾಕಿಲ ಪಿ. ವಸಂತ
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀಮತಿ ಸಂಗೀತ ರವಿರಾಜ್
ಶ್ರೀ ಕುಡೆಕಲ್ ಸಂತೋಷ್

ಪ್ರಕಾಶಕರು : **ರಿಜಿಸ್ಟ್ರಾರ್**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272-223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಅಧ್ಯಕ್ಷರ ಮಾತ್

ಪ್ರಪಂಚಲಿ ಅಳಿವಿನ ಅಂಚಿಲಿ ಇರ್‍ವಂತ ಬಾಸೆಲಿ ಅರೆಬಾಸೆ ಕೂಡ ಒಂದು. ಬಾಸೆನ ಬೆಳ್ಸುವ ನಿಟ್ಟ್‌ಲಿ ಸರ್ಕಾರ ಅರೆಭಾಷೆ ಅಕಾಡೆಮಿ ಶುರು ಮಾಡ್ದೊ, ಬಾಸೆ ಬೆಳ್ಸ್‌ವಲ್ಲಿ ಪುಸ್ತಕಗಳ ಪಾತ್ರ ಬಾಳ ಮುಖ್ಯಾಂತ ಅನ್ಸಿದೆ.

ಸ್ವಾತಂತ್ರ ಪೂರ್ವಲಿ ಬ್ರಿಟಿಷರೊಟ್ಟಿಗೆ ಹೋರಾಡಿ ಹುತಾತ್ಮರಾದ "ಗುಡ್ಡೆಮನೆ ಅಪ್ಪಯ್ಯಗೌಡ", ವೀರರಾಣಿ "ಕಿತ್ತೂರು ಚೆನ್ನಮ್ಮ", ರಾಜಭಕ್ತಿ ಸ್ವಾಮಿನಿಷ್ಠೆ ಮೆರ್‌ದ "ವಣ್‌ಕೆ ಒಬವ್ವ", ಮೈಸೂರು ಸೀಮೆನ ಆಧುನಿಕತೆಗೆ ತಂದ ಮೈಸೂರು ಮಹಾರಾಣಿ "ಕೆಂಪನಂಜಮ್ಮಣಿ" ಒಡೆಯರ್ ಸಾಮಾಜಿಕ ಬದ್‌ಕಿಗೆ ಸರಿಯಾಗಿ ಇಂದ್‌ನ ಜೀವನಲಿ ಯುವಜನತೆ ಇದರ್‍ನೆಲ್ಲಾ ನಾಟಕ ರೂಪಕ್ಕೆ ತಂದ್ "ಬೆಳ್ಳಿಚುಕ್ಕೆ" ಅರ್ಥಪೂರ್ಣ ಆಗ್‌ಟ್ಟು.

ಅಕಾಡೆಮಿ ಗೌರವ ಪ್ರಶಸ್ತಿ ಪಡ್ಕಂಡ ಬೈತಡ್ಕ ಜಾನಕಿ ಬೆಳ್ಯಪ್ಪನವು ಬಾಷೆ ಮತ್ತೆ ಜನಪದ ಸಾಹಿತ್ಯಕ್ಕೆ ಒತ್ತ್‌ಕೊಟ್ಟ್ ನಮ್ಮ ಸಂಸ್ಕೃತಿಗೆ ಸಂಬಂದಿಸಿದಂಗೆ "ಹಸೆಮಣೆ", "ಅಕ್ಷಯ" ಪುಸ್ತಕ ಬರ್‍ದೊಳೊ ಹಂಗೆ ಇವ್ ಬರ್‍ದ "ಬೇರ್‌ಲಿ ಚಿಗ್‌ರ್" ಅಕಾಡೆಮಿಂದ ಪ್ರಕಟಣೆ ಆವುಟ್ಟು. "ಬೆಳ್ಳಿಚುಕ್ಕೆ" ಪುಸ್ತಕ ಬರ್‍ದ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವ್ಕೂ ಅರೆಭಾಷೆ ಅಕಾಡೆಮಿ ಪುಸ್ತಕ ಸಲಹೆ ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆ ತಿಳ್ಸ್‌ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

ಲೇಖಕಿನ ಮನ್ಸ್‌ಂದ

ಬರಿತಾಯಿದ್ದರೆ ಅದ್ ವಿಸ್ತಾರ ಆಗ್ತಾಯಿದ್ದದೆ. ಏನಾರ್ ಮಾಡೊಕುತೇಳಿ ಬೇರ್‌ಲಿ ಚಿಗ್‌ರ್ ಆಳಕ್ಕೆ ಹೋದಂಗೆ ಬಹಳ ವರ್ಷಗಳ ಹಿಂದೆ ಓದಿದ್ದ ಗೌಡದೊನಿ ಪುಸ್ತಕಲಿದ್ದ ಕ್ರಾಂತಿವೀರ ಅಪ್ಪಯ್ಯ ಗೌಡನ ಚರಿತ್ರೆ ಹೃದಯನ ತಟ್ಟ್‌ತ್ತಾಯಿತ್ತ್. ಅಕ್ಷಯ ಪುಸ್ತಕಲಿ ಇದರ ಬಗ್ಗೆ ನಾಟಕಯಿದ್ದ್ ಅದ್ ಆಕಾಶವಾಣಿ ಅರೆಭಾಷೆ ವಿಭಾಗಲಿ ಪ್ರಸಾರನು ಆಗುಟ್ಟು. ಹಿಂದೆ ಹುತಾತ್ಮರ ಬಗ್ಗೆ ಕವನ, ಲಾವಣಿ ಬರ್‌ದರೂ ಇನ್ನೂ ವಿಸ್ತಾರ ಆಗಿ ಬರೆಕುತೆಳಿ ಮನ್ಸ್‌ಲಿ ಇರ್‌ಕನ ನಾವ್‌ಗೆ ಸಿಕ್ಕಿದ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ಒಂದು ವಳ್ಳ ಕೊಡುಗೆ ಕೊಡುವ ಉದ್ದೇಶಂದ ನಾಟಕ ರಚನೆಗೆ ಹಿರಿಯರ್ ಬರ್‌ದ ಕೃತಿಗಳ್‌ನ ಮುಂದೆ ಮಡ್ಗಿ ಧೈರಾಗಿ ಈ ನಾಟಕನ ಬೊಳಿಗೆ ತಾಕೆ ಅಕಾಡೆಮಿ ಕೊಟ್ಟ ಅವಕಾಶನ ಬಳ್‌ಸಿಕೆ ಕಾರಣ ಆತ್.

ಹಿಂದೆನ ಕಾಲದ ಜೀವನ ಶೈಲಿನ ಕಣ್ಮುಂದೆ ತಂದ್ ನೀವು ನಾಟಕ ಬರ್ದೀ.. ಬರೆಕು ತೇಳಿ ಅಕಾಡೆಮಿ ಸದಸ್ಯರಾದ ಮಂದ್ರೀರ ಮೋಹನ್‌ದಾಸ್‌ನವು ಒತ್ತಾಯಿಸ್‌ತ್ತಾಯಿದ್ದ ಕಾರಣ ಮುಂದೆನ ಪೀಳಿಗೆ ತಿಳಿಯೊಕು ತೇಳ್‌ವ ಉದ್ದೇಶಂದ ಅವುಕೆ ನನ್ನ ವಂದನೆ ಸಲ್ಲಿಸ್ತಾವಳೆ. ಕಣ್ಮುಂದೆ ಅಲೆಯಾಗಿ ಬಂದ ನೇರ ಸತ್ಯ, ಪ್ರಾಮಾಣಿಕ, ರೈತ ಹೋರಾಟಗಾರರ್ ಹೆಂಗೆ ಹೋರಾಡ್ದೊ? ಮಳೆಗಾಲ ಕಾಡ್‌ದಾರಿಲಿ ಉಂಬುಳು ಕಾಟ (ಜಿಗಣೆ) ಪ್ರಾಣಿಗಳ ಭಯನ ಸಹಿಸಿಕಂಡ್ ಮರಗಳ ಗೆಲ್ಲ್‌ಲಿ ಕುದ್ದ್ ಬಿಲ್ಲ್ ಬಾಣ ಹೊಡ್ದ್ ಹೋರಾಡುವ ಸ್ವಾಭಾವಿಕ ವಾತಾವರಣ ಕಲ್ಪನೆನ ಬರ್‌ದರೆ, ಪುಟಗಟ್ಲೆ ಬಂದರೂ ಯುವಜನತೆಗೆ ಅರ್ತ ಆಗುವ ರೀತಿಲಿ ಸರಳವಾಗಿ ಸ್ವಲ್ಪನೆ ಆದರೂ ಗಂಭೀರ ರೀತಿಲಿ ಮುಕ್ತಾಯ ಮಾಡ್ಯೊಳೆ. ಸಮಯ ಅವಕಾಶ ಕಮ್ಮಿ ಇರುದಕ್ಕೆ ತಾಳ್ಮೆನುಯಿಲ್ಲದೆ ಬೊಳಿಗೆ ತರುವ ಪ್ರಯತ್ನ. ಬ್ರಿಟಿಷರೊಟ್ಟಿಗೆ ಹೋರಾಡ್ದ ಇತಿಹಾಸಲಿ ಪ್ರಥಮ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ, ರೈತದಂಗೆಲಿ ಅಪ್ಪಯ್ಯಗೌಡ, ಇದರೊಟ್ಟಿಗೆ ವಣ್‌ಕೆ ಓಬವ್ವ, ಸರೋಜಿನಿ ದೇವಿನಾಯ್ಡು, ಮೈಸೂರು ಮಹಾರಾಣಿ ಕೆಂಪನಂಜಮ್ಮಣ್ಣಿ ಒಡೆಯರ್ ವಂಶ ಹಂಗೆ ಗೂಡೆಗಳೆ ಸಿಕ್ಕುದುಲೆ ತೇಳುವ ನಾಟಕ ರೂಪಕಗಳ್‌ನ ಈ ಕೃತಿಯೊಳಗೆ ತುಂಬುಸಿ ""ಬೆಳ್ಳಿಚುಕ್ಕೆಗ" ತೇಳಿ ತಲೆಬರಹ ಕೊಟ್ಟೊಳೆ.!

ಕಲ್ಪನಾಶಕ್ತಿನ ಬಳ್ಸಿಕಂಡ್ ಎಲ್ಲಿಂದ ಸುರು ಮಾಡ್ದುತ ಗೊತ್ತಾಗದೆ ಅಪ್ಪಯ್ಯಗೌಡ ಸುಭೆದಾರ ಕೆಲ್ಸನ ಬುಟ್ಟ್ ಮನೆಗೆ ಬಂದಲ್ಲಿಂದ ಬರೆಕೆ ಸುರು

ಮಾಡಿ, ಗಲ್ಲಿಗೇರ್ಸಿಕೆ ಮುಟ್ಟ ದೃಶ್ಯ ಸವಿಸ್ತಾರ ಆಗಿ ಹಿರಿಯರ್ ಬರ್‌ದ ಕೃತಿಗಳ್‌ಂದ ಬಾರಿ ಪ್ರಯೋಜನ ಆತ್.

ಹಂಗೆ ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ ಪಡ್ದ ನಂಗೆ ಚೆನ್ನಮ್ಮನ ಬಗ್ಗೆ ಬರೆವ ಅವಕಾಶನು ಸಿಕ್ತ್. "ಕಿತ್ತೂರು ಉತ್ಸವ" ಪುಸ್ತಕ ಓದಿದ ಮ್ಯಾಲೆ ನಂಗೆ ಸಾಕಸ್ಟ್ ವಿಷಯ ಸಿಕ್ಕಿ, ಜನಪದ, ಲಾವಣಿ, ಕತೆ ನಾಟಕ ಕೋಲಾಟದ ಹಾಡ್‌ಗಳ್‌ನ ರಚಿಸಿಕೆ ಪ್ರಯತ್ನದೊಟ್ಟಿಗೆ ಕೋಲಾಟದ ರಚನೆ ಮಾಡುವ ಆಶಯ ಹೊಳ್ತ್.

ಸರ್ಕಾರ ಮಹಿಳೆಯರ ಉದ್ದಾರಕ್ಕಾಗಿ ಕೊಡುವ ಗೌರವ ಪ್ರಶಸ್ತಿನ ಮಹಿಳೆಯರಿಗೆ ಕೊಡ್ತಾಯಿರ್‌ವ ಈ ಸಂದರ್ಭಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದಿನ ಈ ನಾಟಕ ಮಡಿಕೇರಿ ಆಕಾಶವಾಣಿಲಿ ಪ್ರಸಾರನೂ ಆಗುಟ್ಟು.

ಅಂತೂ ರೈತದಂಗೆ ನಾಟಕ ಕನ್ಸ್‌ನ ಪೂರೈಸಿಕೆ ಒಪ್ಪಿಗೆ ನೀಡ್ದ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್, ಅಧ್ಯಕ್ಷರ್ ಸಮಿತಿ ಸದಸ್ಯರ ತಂಡ ಇವುಕೆ ನನ್ನ ಮನತುಂಬಿದ ನಮನ ಸಲ್ಲಿಸ್ತಾವಳೆ. ಹಂಗೆ ಅಚ್ಚ್‌ಕಟ್ಟಾಗಿ ಮುದ್ರಿಸಿ ಸಹಕರಿಸಿದ ಶ್ರೀ ಕೃಷ್ಣ ಕಂಪ್ಯೂಟರ್ಸ್ ಮಾಲೀಕರಿಗೂ ನನ್ನ ಧನ್ಯವಾದ.

1837ರ್‌ಲಿ ಕ್ರಾಂತಿವೀರನಾಗಿ ಸ್ವಾತಂತ್ರ ಹೋರಾಟಗಾರನಾಗಿ ಹೋರಾಡಿ ಮಡಿಕೇರಿ ಕ್ವಾಟೆಲಿ ಗಲ್ಲ್ ಶಿಕ್ಷೆ ಅನುಭವಿಸಿದ ಬಲಮುರಿ ಗ್ರಾಮದ ಸುಬೆದಾರ್ ಗುಡ್ಡೆಮನೆ ಅಪ್ಪಯ್ಯಗೌಡ ರೈತದಂಗೆ ಮುಖಂಡನ ಕತೆಗೆ "ಬೆಳ್ಳಿ ಚುಕ್ಕೆಗ" ತೇಳಿ ತಲೆಬರಹ ಕೊಟ್ಟ್ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ಅರ್ಪ್‌ಸಿನೆ.

ಬೈತಡ್ಕ ಜಾನಕಿ ಬೆಳ್ಯಪ್ಪ
ಮಡಿಕೇರಿ.
ಮೊ: 9008571899.

ಒಳಪುಟಲಿ

ವೀರನಾರಿ ಕಿತ್ತೂರು ಚೆನ್ನಮ್ಮ

ಟೀಚರ್ : ಮಕ್ಕಳೇ.. ಈ ಪಿರಿಯಡ್ ನಿಮಿಗೆ ಪಾಟಿಯಿಲ್ಲೆ. ಸದ್ದ್ ಮಾಡದೆ ಓದ್‌ತಾಯಿರಿ.

ಮಕ್ಕ : ಯಾಕೆ ಟೀಚರ್ ? ಒಂದು ಕತೆ ಹೇಳಿ ಟೀಚರ್.

ಟೀಚರ್ : ನಾನ್ ಐದ್ ನಿಮಿಸ ಬುಟ್ಟ್ ಬನ್ನೆ. ಯಾರೂ ಗಲಾಟೆ ಮಾಡ್‌ಬಡಿ.

ಮಕ್ಕ : ಆತ್ ಟೀಚರ್. ಟೀಚರ್ ಅತ್ತ ಹೋದಂಗೆ ಮಕ್ಕಳ ಗುಸು ಗುಸು ಸುರಾತ್. ಅಲ್ಲಾ ಇಡೀ ಪಿರಿಯಡ್ ಸುಮ್ಮನೆ ಹೆಂಗೆ ಕೂರ್‌ದು? ಅದ್‌ಕಿಂತ ಟೀಚರ್ ಬಂದ ಮ್ಯಾಲೆ ಕತೆ ಹೇಳಿಕೆ ಹೇಳೊನೊ.

ಎಲ್ಲವು : ಅದೇ ಸರಿ ಹೌದು ಹೌದು ಅದೇ ಸರಿ.

ವಿದ್ಯಾರ್ಥಿ : ಎಂತ ಕತೆ ಕೇಳ್ದು?

ವಿದ್ಯಾರ್ಥಿನಿ : ನಾವು ಸ್ವಾತಂತ್ರ ಹೋರಾಟಗಾರರ ಕತೆ ಕೇಳೊನೊ.

ಗೂಡೆ : ಸ್ವಾತಂತ್ರ ಹೋರಾಟಗಾರರ್‌ತೇಳ್ರೆ ಯಾರ್, ಯಾಗ ಟೀಚರ್‌ಗೆ ಸರಿಯಾಗಿ ಗೊತ್ತಿರ್‌ದು. ಅದ್‌ಕಾಗಿ ನಾವು ಕಿತ್ತೂರುರಾಣಿ ಚೆನ್ನಮ್ಮನ ಕತೆ ಕೇಳೊನ. ಆಗ ವಿದ್ಯಾರ್ಥಿಗಳಿಗೆ ವೇದಿಕೆ ಭಾಷಣ ಮಾಡಿಕೆ ತಿಳ್ಕಂಡಂಗೆ ಆದೆ.

ನಿರೂಪಣೆ : ಹತ್ತ್ ನಿಮಿಷ ಆತ್. ಹೆಜ್ಜೆ ಸದ್ದ್ ಕೇಳ್ತಾವುಟ್ಟು! ಟೀಚರ್ ಬರ್ತಾವಳೊ. ಬಂದೊ ಬಂದೊ ಯಾರೂ ಮಾತಾಡ್‌ಬಡಿ.

ಟೀಚರ್ ಪ್ರವೇಶ : ಮೌನಾಗಿ ಮಕ್ಕ ಕುದ್ದೊಳೊ. ವೆರಿಗುಡ್ ಮಕ್ಕಳೆ. ನೀವು ಶಿಸ್ತ್‌ನ ಪಾಲಿಸ್ತಾವಳರಿ. ಓದ್ತಾವಳರಿಯಾ?

ಮಕ್ಕ : ಇಲ್ಲೆ ಟೀಚರ್. ನಾವೆಲ್ಲ ಕೂಡಿ ಒಂದು ತೀರ್ಮಾನಕ್ಕೆ ಬಂದೊಳೊ. ಅದ್‌ತೇಳ್ರೆ ಇಂದ್ ನೀವು ನಮಿಗೆ ಸ್ವಾತಂತ್ರ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮನ ಕತೆ ಹೇಳೊಕು.

ಟೀಚರ್ : ಟೀಚರ್‌ಗೆ ಮಕ್ಕಳ ಬುದ್ಧಿವಂತಿಕೆ ನೋಡಿ ಕುಸಿ ಆತ್. ಹೌದು! ನೀವ್ಯಾಕೆ ಕಿತ್ತೂರು ರಾಣಿ ಚೆನ್ನಮ್ಮನ ವಿಸಯನೆ ತಕಂಡ್ ಕತೆ ಕೇಳ್ತಾವಳರಿ?

ವಿದ್ಯಾರ್ಥಿ(ಗೂಡೆ): ಯಾಕೆತೇಳ್ರೆ ಈಚೆಗೆ ಕರ್ನಾಟಕ ಸರಕಾರ ಕಿತ್ತೂರು ರಾಣಿ ಚೆನ್ನಮ್ಮನ ಹೆಸ್‌ರ್‌ಲಿ ವೀರ ಶೌರ್ಯ, ಕಲೆ, ಸಾಹಿತ್ಯ ಶಿಕ್ಷಣ ಕ್ರೀಡೆ ಇದರ್‌ಲೆಲ್ಲ ಹೆಸ್‌ರ್ ಪಡ್‌ದವುಕೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದಿನ ಪ್ರಶಸ್ತಿಗಳ್‌ನ ಕೊಟ್ಟವೆತೇಳಿ ಪ್ರತಿವರ್ಷ ಪೇಪರ್‌ಲಿ ಬಂದದೆ. ಇದ್ ಕರ್ನಾಟಕಲಿ ಪ್ರಸಿದ್ಧಿಲಿರ್‌ವ ಪ್ರಶಸ್ತಿಗಳ್‌ಲಿ ಒಂದು. ಇದ್ ಹೆಣ್ಣ್ ಮಕ್ಕಳಿಗೆ ವಿಸೇಸಾಗಿ ಇರುವಂತದ್ದ್. ಹಂಗಾಗಿ ವಿದ್ಯಾರ್ಥಿಗಳಿಗೆ ಅದರ್‌ಂದ ಉತ್ತೇಜನ ಸಿಕ್ಕಿದೆಂತೇಳಿ ನಾವು ತೀರ್ಮಾನ ಮಾಡ್ಕಂಡೊಳೊ. ಕ್ಲಾಸ್‌ಗಂಟೆ ಹೊಡೆಕನ ಮುಗಿವಂಗಿದ್ದರೆ ವಳ್ಳದ್ ಟೀಚರ್.

(ಕತೆ ಹೇಳಿಕೆ ಸುರು ಮಾಡುವೆ.)

ಟೀಚರ್ : ಕರ್ನಾಟಕದ ಇತಿಹಾಸದ ಪುಟಗಳ್‌ನ ಮೊಗ್‌ಚಿರೆ ನೂರಾರ್ ಹೆಣ್ಣ್‌ಮಕ್ಕ ಅವರ ಸೂರತನ ಧೀರತನ ಮೆರ್‌ಸಿದ ಕತೆಗ ಕಂಡ್ ಬಂದದೆ. ಹಿಂದೆ ಹೆಣ್ಣ್‌ಮಕ್ಕಳ ಕಾರ್ಯ ಬರಿ ಮನೆ ಮಾತ್ರ ಆಗಿತ್ತ್. ಹಿಂಗಿದ್ದರೂ ಸನ ಹೆಣ್ಣ್‌ಮಕ್ಕ ಮುಂದೆ ಬಂದ್ ವಿದ್ಯಾ ಬುದ್ಧಿ ಕಲ್‌ತ್ ಆಡಳ್‌ತ ನಡ್ಸಿದೊವು ಇತಿಹಾಸಲಿವಳೊ. ಯುದ್ದಕಲೆಲಿ ಬುದ್ಧಿತೋರ್ಸಿ ರಾಜ್ಯನ ಉಳ್ಸಿಕಂಡವು. ಸ್ವಾತಂತ್ರ ಹೋರಾಟಗಾರ್ತಿಗಾಗಿ ಕೀರ್ತಿ ಪಡ್‌ದೊವುವಳೊ.

ಗಂಡಸರೆದ್‌ರ್ ಕಚ್ಚೆ ಸೀರೆವುಟ್ಟ್ ಕೈಲಿ ಬಾಳ್‌ಕತ್ತಿ ಹಿಡ್ದ್ ರಾಜ್ಯನ ರಕ್ಷಣೆ ಮಾಡ್‌ದೊವು ಬಹಳಸ್ಟ್ ಹೆಣ್ಣ್‌ಮಕ್ಕ. ಅಂತವರ್‌ಲಿ ಸುರುಗೆ ಕಿತ್ತೂರು ವೀರರಾಣಿ ಚೆನ್ನಮ್ಮನ ಕಾಣ್ತಾಯಿದ್ದರೂ ಅವಳೊಟ್ಟಿಗೆ ಬೆಳವಡಿ ಮಲ್ಲಮ್ಮ ಕೆಳದಿಚೆನ್ನಮ್ಮ, ರಾಣಿ ಅಬ್ಬಕ್ಕ, ವಣ್‌ಕೆ ಓಬವ್ವ ಚರಿತ್ರೆಲಿ ಹೆಸ್‌ರ್ ಮಾಡ್ದವು.

ಮಕ್ಕ : ಹೋ!! ಮುಂದೆ ಹೇಳಿ ಟೀಚರ್.

ಟೀಚರ್ : ಬ್ರಿಟಿಷರ ಗುಲಾಮಗಿರಿ ಸಂಕಲೆಂದ ಬುಡ್‌ಗಡೆಗೊಳ್ಸಿಕೆ ಅವರ ಎದ್‌ರ್ ನಾಡ್‌ನ ಅಭಿಮಾನಂದ ಸ್ವಾಭಿಮಾನಿಗಳಾಗಿ ಬಾಳಿಕೆ ಯುದ್ಧಮಾಡಿಕೆ ಹುರ್‌ಪು ಕೊಟ್ಟವ್‌ಳು ಚೆನ್ನಮ್ಮ. ಕಿತ್ತೂರ್‌ನ ಜನಕೆ ಧೈರ್ಯ ಕೊಟ್ಟ್ ಧೈರ್ಯಂದ ಹೋರಾಡಿಕೆ ನಿತ್ತ ಚೆನ್ನಮ್ಮನ ರಣ ಚಂಡಿನಂಗೆ ಕಾಂಬತ್ತಿತ್ತ್ ತೇಳ್ವೆ. ದೇಶಾಭಿಮಾನಿಯಾಗಿ ಕಿತ್ತೂರ್‌ನ ಜನರ್‌ಲಿ ಸ್ವಾತಂತ್ರದ ಕಿಚ್ಚ್ ಹೊತ್ತ್‌ಸಿ ಬ್ರಿಟಿಷರೊಟ್ಟಿಗೆ ಹೋರಾಡ್‌ದವ್‌ಳು ಕಿತ್ತೂರ್‌ನ ವೀರ ರಾಣಿ ಚೆನ್ನಮ್ಮ.

ಮಕ್ಕ : ಕಿತ್ತೂರು ಮ್ಯಾಲೆ ಆಂಗ್ಲರಿಗೆ ಯಾಕೆ ಕಣ್ಣ್‌ಬೀತ್ ಹೇಳಿ ಟೀಚರ್.

ಟೀಚರ್ : ಅಷ್ಟೊತ್ತಿಗೆ ಆಂಗ್ಲರ್ ಭಾರತದ ಬ್ಯಾರೆ ಬ್ಯಾರೆ ಕಡೆ ಬಂದ್ ಸೇರಿ ಕುತಂತ್ರ ನಡ್ಸಿಕೆ ಸುರುಮಾಡಿದ್ದೊ. ಹಂಗೆ ಈ ಕಿತ್ತೂರು ರಾಜ್ಯನ ಅವರ ಸ್ವಾದೀನ ಪಡ್ಸಿಕೊಂಬಕೆ ಬಾರಿ ಬಾರಿ ಪ್ರಯತ್ನ ಪಡ್ತಾಯಿದ್ದೊ. ಕಾರಣ ನಮ್ಮ ದೇಸಲಿ ಯಾವ ರಾಜರಿಗಾದರೂ ಮಕ್ಕಯಿಲ್ಲದಿದ್ದರೆ ಆಂಗ್ಲರಿಗೆ ದೇಶನ ಸೀದಾ ಬುಟ್ಟ್ ಕೊಡಕಾಗಿತ್ತ್. ದತ್ತು ಮಕ್ಕ ಇದ್ದರೆ ಆ ರಾಜ್ಯನ ಆಂಗ್ಲರಿಗೆ ಕೊಡಕುತ ಅವರ ತಕರಾರ್.

ಮಕ್ಕ : ಹಂಗಾರೆ ಕಿತ್ತೂರು ದೊರೆಗಳಿಗೆ ಮಕ್ಕ ಇತ್ತ್‌ಲ್ಯಾ ಟೀಚರ್?

ಟೀಚರ್ : ಕಿತ್ತೂರುನ ವಿಷಯ ಹೇಳಿಕೆ ನಾನ್ ಮರ್‌ತ್ ಬುಟ್ಟೆ. ಕಿತ್ತೂರು ಹೆಸ್‌ರ್ ಬಾಕೆ ಮುಂದೆ ಆ ಊರಿಗೆ ಗೀಜಗನ ಹಳ್ಳಿತೇಳಿ ಹೆಸ್‌ರ್‌ಯಿತ್ತ್. ಅಲ್ಲಿ ಮರಕಾಡ್ ಜಾಸ್ತಿಯಿದ್ದದರ್‌ಂದ ಗೀಜಕ್ಕಿಗಳ ಕಾಟ ತಡಿಯಕೆ ಬೊತ್ತದಾತ್. ಆಗ ಮಲ್ಲಸರ್ಜ ದೊರೆನ ಹಿರಿಯರ್ ಆ ಊರ್‌ನ ಬ್ಯಾರೆಕಡೆ ಕಟ್ಟ್‌ಸಿದೊ.

ಹಂಗಾಗಿ ಕಿತ್ತ್‌ತಂದ ಊರಿಗೆ ಕಿತ್ತೂರು ಹೆಸ್‌ರ್ ಬಾತ್‌ತೇಳ್ವೆ. ಆ ಕ್ವಾಟೆ ಎತ್ತರ ಆಗಿ ನೋಡಿಕೆ ಬಾರಿ ಲಾಯ್ಕ ಕಾಂಬತಿತ್ತ್. ಅಲ್ಲದೆ ಬಾರಿ ಬಂದಬಸ್ತ್ ಆಗಿತ್ತ್. ಈ 800 ಹಳ್ಳಿಗಳ ಆ ನಾಡ್‌ನ ರಾಜ ಕಿತ್ತೂರ್‌ನ ಮಲ್ಲಸರ್ಜ ದೊರೆತೇಳಂವ. 1782ರ್‌ಂದ 1816ಕ್ಕೆ ಮುಟ್ಟ ಆಳ್‌ತ್. ಅವಂಗೆ ವೀರವ್ವ ಮತ್ತೆ ಚೆನ್ನಮ್ಮ ತೇಳುವ ಇಬ್ಬೊರು ಹೆಣ್ಣ್‌ಗಯಿದ್ದೊ ಅವು ಇಬ್ಬೊರುಸ ದೇಸಾಯರ ಮನೆತನಕ್ಕೆ ಸೇರ್‌ದವಾಗಿದ್ದೊ.

ವಿದ್ಯಾರ್ಥಿ : ಚೆನ್ನಮ್ಮನ ವಿಷಯ ಹೇಳಿ ಟೀಚರ್.

ಟೀಚರ್ : ಚೆನ್ನಮ್ಮ ಕಾಕತಿ ಧೂಳಪ್ಪ ದೇಸಾಯರ ಮಗ್‌ಳು ಸ್ವತಃ ಬಿಲ್ಲ್‌ವಿದ್ಯೆಲಿ ನಿಪುಣತಿ ಮತ್ತೆ ಪೊರ್ಲುನವ್‌ಳು ಬುದ್ಧಿವಂತಳು ಸಹ ಆಗಿತ್ತ್. ಅವ್‌ಳು ಸಣ್ಣದರ್‌ಂದಲೆ ವೀರತನ ಬಿಲ್ಲ್‌ವಿದ್ಯೆಲಿ ತುಂಬಾ ಉಸಾರ್‌ಯಿತ್ತ್. ಹಂಗೆ ಆ ರಾಜ ಅವಳ್‌ನ ಮೆಚ್ಚಿ ಮೊದುವೆ ಆಗಿತ್ತ್. ಅವ್‌ಳ ಜೀವನ 1792–1829ರವರೆಗೆಯಿತ್ತ್.

ವಿದ್ಯಾರ್ಥಿ : ಮತ್ತೆನಾತ್ ಟೀಚರ್?

ಟೀಚರ್ : ಅಷ್ಟೊತ್ತಿಗೆ ಮಲ್ಲಸರ್ಜ ದೊರೆ ಸತ್ತ್ ಹೋತು. ಮುಂದೆ ಅವನ ಮಂಜ ರುದ್ರಸರ್ಜನ ಸಿಂಹಾಸನಲಿ ಕೂರ್ಸಿ ಚೆನ್ನಮ್ಮ ರಾಜ್ಯಭಾರ ನೋಡಿಕೆ ಸುರುಮಾಡ್ತ್. ಅಂವ ಸಹ ಹೆಚ್ಚ್ ಕಾಲ ಬಾಳದೆ ಸತ್ತ್ ಹೋತು. ಅಷ್ಟೊತ್ತಿಗೆ ಅವುಕಿದ್ದ ಇಬ್ಬೊರು ಗಂಡ್ ಮಕ್ಕ ಸಣ್ಣವಯಸ್‌ಲೇ ತೀರಿ ಹೋದೊ.

ವಿದ್ಯಾರ್ಥಿ : ಹೋ.....

ಟೀಚರ್ : ಮತ್ತೆ ಶಿವಲಿಂಗ ತೇಳುವ ಒಬ್ಬನ ದತ್ತ್ ತಕಂಡ ಚೆನ್ನಮ್ಮ ಅವಂಗೆ ರುದ್ರ ಸರ್ಜತೇಳಿ ಹೆಸ್‌ರ್ ಕೊಟ್ಟ್ ರಾಜ್ಯಭಾರ ಮಾಡಿಕೆ ಸುರಾತ್. ಆ ವಿಷಯ ಆಂಗ್ಲರಿಗೆ ತಿಳ್ದ್ ಚೆನ್ನಮ್ಮಂಗೆ ಕಾಟ ಕೊಡಿಕೆ ಸುರುಮಾಡ್ದೊ.

ವಿದ್ಯಾರ್ಥಿ : ಕತೆ ಒಳಗೊಳಗೆ ಎಷ್ಟ್ ಕತೆ ಅಲಾ ಟೀಚರ್?

ಟೀಚರ್ : ಹೌದು ಇಲ್ಲರೆ ನಿಮಿಗೆ ಅರ್ಥ ಆದು ಹೆಂಗೆತೇಳಿ?

ಈಗ ಸುರಾತ್ ಕಿತ್ತೂರು ರಾಣಿ ಚೆನ್ನಮ್ಮನ ಕತೆ.

ಬ್ರಿಟಿಷರ್ ಕಾನೂನು ಪ್ರಕಾರ ನಿಮ್ಮ ರಾಜ್ಯನ ನಮಿಗೆ ಬುಟ್ಟ್‌ಕೊಡೊಕುತ ಕಿತ್ತೂರು ಮ್ಯಾಲೆ ಕಣ್ಣ್ ಇಸಿದೊ. ಬಂದ್ ಹೋಗೊವು ಬ್ರಿಟಿಷರ ಅನುಮತಿಯಿಲ್ಲದೆ ಪ್ರವೇಶ ಮಾಡದಂಗೆ ಅಪ್ಪಣೆ ಮಾಡ್ದೊ. ಅಲ್ಲದೆ ಚೆನ್ನಮ್ಮಂಗೆ ಆಗಾಗ ಕಿರುಕುಳ ಕೊಡಿಕೆ ಸುರುಮಾಡ್ದೊ ಶರಣಾಕೆ ಹೇಳ್ತಾಯಿದ್ದೊ. ಚೆನ್ನಮ್ಮ ಅವರ ಯಾವ ಕರಾರಿಗು ಸಹಿ ಹಾಕಿತ್‌ಲೆ. ಶರಣಾಕೆ ಬಗ್ಗಿತ್‌ಲೆ.

ಮಕ್ಕ : ಮತ್ತೇನಾತ್ ಟೀಚರ್?

ಟೀಚರ್ : 1824ರ ಅಕ್ಟೋಬರ್ 21ರ ಹೊತಾರೆ ಬ್ರಿಟಿಷ್ ಮಿಲಿಟರಿ ಅಧಿಕಾರಿ ಥ್ಯಾಕರೆ ಕಿತ್ತೂರು ಕಜಾನೆ ರಕ್ಷಿಸಿಕೆ ಇಬ್ಬರ್‌ನ ಕಳ್ಸಿದೆ. ಹಂಗೆ ಆ ಅಧಿಕಾರಿಗಳಿಗೂ ಮುಖ್ಯಸ್ತರಿಗೂ ಕಜಾನೆ ರಕ್ಷಣೆಗೆ ಬದ್ಧರಾಗಿರೊಕು ತಪ್ಪಿರೆ ಅವು ಕೊಡುವ ಕರಾರ್ ಪತ್ರಕ್ಕೆ ಸಹಿ ಹಾಕೊಕುತೇಳಿ ಆಜ್ಞೆ ಹೊರ್‌ಡಿಸಿತ್. ಅದ್‌ಕೆ ಅಧಿಕಾರಿಗ ಚೆನ್ನಮ್ಮನ ಒಪ್ಪಿಗೆಯಿಲ್ಲದೆ ಸಹಿ ಹಾಕಿಕೆ ಆದುಲೆತ ಹಟಹಿಡ್ದೊ. ಆಗ ಸೈನಿಕರ್ ಇಬ್ಬೊರು ವ್ಯವಸ್ಥಾಪಕರಿಗೆ ಸುಳ್ಳು ಆರೋಪ ಹೊರ್ಸಿದೊ ಮತ್ತೆ ಕಿತ್ತೂರ್‌ನ ಮುಕಂಡರ್‌ನ ಕೆಲ್ಸಂದ ತೆಗ್ದ್ ಹಾಕಿದೊ. ಆಗ ಪೂರ್ತಿ ಕಜಾನೆ ಆಂಗ್ಲರ ವಸ ಆತ್.

ಮಕ್ಕ : ಅಯ್ಯೊ ಹಂಗಾತ? ಪಾಪ ಚೆನ್ನಮ್ಮ.

ಟೀಚರ್ : ಹಿಂಗೆ ಬಾರಿ ದಬ್ಬಾಳಿಕೆ ಸುರಾಗಿ ಜನರ್‌ಗೆ ಹಿಂಸೆ ಕೊಡಿಕೆ ಸುರುಮಾಡ್ದೊ, ಈ ವಿಷಯನ ಚೆನ್ನಮ್ಮ ಬ್ರಿಟಿಷ್ ಸರ್ಕಾರಕ್ಕೆ ಪತ್ರದ ಮೂಲಕ ಬರ್ತ್. ಅದ್‌ಕೆ ಯಾವ ಉತ್ತರನೂ ಇಲ್ಲದಾಕನ ಸೈನಿಕರ್‌ನ ಯುದ್ಧಕ್ಕೆ ತಯಾರ್ ಮಾಡ್ತಾಯಿತ್ತ್. ಕಿತ್ತೂರು ಕೋಟೆ ಸುತ್ತ ಆಂಗ್ಲರ ಸೈನಿಕರ್ ಕಾಯ್ತಾಯಿದ್ದೊ. ಸಂದರ್ಭ ನೋಡಿ ಒಮ್ಮೆಗೆ ಕಿತ್ತೂರು ಸೈನಿಕರ್ ಆಂಗ್ಲರ ಮ್ಯಾಲೆ ಬಿದ್ದ್ ತಲೆ ಉರ್‌ಳಿಸಿದರ್‌ನ ಕಂಡ್ ಅವು ಹೆದರಿ ಒಡ್ದೊ. ಈ ವಿಷಯ ಆಂಗ್ಲ ಸರ್ಕಾರ ತಿಳ್ದ್ ಅವು ಬೊಂಬಾಯಿಂದ ಸೈನ್ಯ ಪಿರಂಗಿ ಮದ್ದ್‌ಗುಂಡುಗಳ ತಂದೊ. ಹಂಗೆ ಇಲ್ಲಿನ ಕೆಲವರ್‌ನ ಚೆನ್ನಮ್ಮನ ವಿರುದ್ಧ ಎತ್ತಿಕಟ್ಟಿ ಅವುಕೆ ಹಣ ಜಮೀನ್

ಕೊಟ್ಟ್ ವಳ್ಳದ್ ಮಾಡಿಕಂಡೊ.

ವಿದ್ಯಾರ್ಥಿ : ಆಗಲೆ ಬ್ರಿಟಿಷರ್ ಲಂಚ ಕೊಡ್‌ತಿದ್ದೊ ಅಲಾ ಟೀಚರ್?

ಟೀಚರ್ : ಕುತಂತ್ರಂದ ಆಕಡೆ ಈಕಡೆ ಜಗಳ ಹತ್ತುದೇ ಅವರ ಕೆಲ್‌ಸ. ಪರಿಣಾಮ ಕಿತ್ತೂರುನ ಸೈನಿಕರ್ ಬಳ್‌ಸುವ ಮದ್ದ್ ಗುಂಡು ಹೊಟ್ಟದಂಗೆ ಮಾಡಿ ಆಂಗ್ಲರ್ ಗೆಲ್ಲುವಂಗೆ ಕುತಂತ್ರ ಮಾಡ್ದೊ. ಸುರುಗೆ ಕಿತ್ತೂರು ಕ್ವಾಟೆ ಬಾಗ್‌ಲ್‌ನ ಒಡ್ದೊ. ಆಗ ಚೆನ್ನಮ್ಮ ಅವಳ ಸಂಗಡ ವೀರವ್ವ ಮತ್ತೆ ದತ್ತ್‌ಪುತ್ರನ ಕರ್‌ಕಂಡ್ ಅಂಗರಕ್ಷಕ ಬಾಳಾ ಸಾಹೇಬನೊಟ್ಟಿಗೆ ಬೈಲಹೊಂಗಲ ಕಡೆ ಗುಪ್ತ ಮಾರ್ಗ ಆಗಿ ಹೋಗ್ತಾಯಿರ್‌ಕನ ಅವಳ್‌ನ ಸೆರೆ ಹಿಡ್ದ್ ಬೈಲಹೊಂಗಲದ ಕಾರಾಗೃಹಲಿ ಇಸಿದೊ. ಅಲ್ಲಿ ಸಹ ಅವುಳಿಗೆ ಶರಣಾಕೆ ಹೇಳ್ತಾಯಿದ್ದೊ. ಕಾರಾಗೃಹದ ಸುತ್ತ ಸೈನಿಕರ್‌ನ ಕಾವಲ್ ನಿಲ್ಸಿದೊ. 1824ಕ್ಕೆ ಸೆರೆ ಆತ್ ಚೆನ್ನಮ್ಮ.

ಉಪಸಂಹಾರ : ನಾಡ್‌ನ ಅಭಿಮಾನಂದ ಹೋರಾಡ್‌ದ ಸೈನಿಕರಿಗೆ ಚೆನ್ನಮ್ಮ ಕೈತುಂಬ ಬಹುಮಾನ ಕೊಡ್ತ್. 1829ಕ್ಕೆ ಜೈಲ್‌ಲಿ ಚೆನ್ನಮ್ಮ ಸತ್ತ್‌ಹೋತು. ಮುಂದೆ ಅವಳ ಎದ್‌ರ್ ಪ್ರತಿಜ್ಞೆ ಮಾಡ್‌ದ ಸಂಗೊಳ್ಳಿರಾಯಣ್ಣನ 1830ರ್‌ಲಿ ಗಲ್ಲಿಗೇರ್ಸಿತ್ ಬ್ರಿಟಿಷ್ ಸರ್ಕಾರ! ಚೆನ್ನಮ್ಮನ ಸೆರೆಹಿಡ್ದ್ ಕಾರಾಗೃಹಲಿ ಕೂರ್ಸಿದ ಥ್ಯಾಕರೆನ ಅವಳ ಅಂಗರಕ್ಷಕ ಬಾಳಪ್ಪ ಬಂದೂಕ ಹಿಡ್ದ್ ಕೊಂದತ್. ಹಿಂಗೆ ಕಿತ್ತೂರ್‌ನ ಆಂಗ್ಲರ್ ಪೂರ್ತಿ ನಾಶಮಾಡಿ ಸಾಧ್ಯ ಆದಷ್ಟ್ ದೋಚಿ ಕಿತ್ತೂರ್‌ನ ಕಾಲಿ ಮಾಡ್ದೊ. ಆದರೆ ಸುರುಗೆ ಇವರ ಕುತಂತ್ರನ ತಿಳ್‌ದ ಚೆನ್ನಮ್ಮ ಕಿತ್ತೂರ್‌ನ ಸಂಪತ್ತ್‌ನೆಲ್ಲ ಎತ್ತ್ ಕುದುರೆಗಳ ಮ್ಯಾಲೆ ಹೊರ್‌ಸಿ ಧಾರವಾಡದ ಕೋಟೆಗೆ ಸಾಗ್‌ಸಿ ರಕ್ಷಣೆ ಮಾಡ್ತ್. ಇದ್ ಅವಳ ಕರುಣೆ ದೊಡ್ಡತನ ಅಭಿಮಾನನ ತೋರ್ಸಿದೆ. ನಾಡ್‌ನ ಅಭಿಮಾನ ಮೆರ್ಸಿದೆ.

ಮೊದಲ ಯುದ್ಧಲಿ ಸತ್ತ ಆಂಗ್ಲರ ಹೆಣ್ಣ್ ಮಕ್ಕ ಇನ್ನೂ ಅನೇಕರ್‌ನ ತಂದ್ ಚೆನ್ನಮ್ಮನ ಮುಂದೆ ನಿಲ್ಸ್‌ಕನ ಅವುಳು ವೈರಿಗಳ ಮಕ್ಕ ವೈರಿಗ ಆದುಲೆಂತೇಳಿ ಅವುಕೆ ಊಟೋಪಚಾರ ಕೊಡ್ಸಿ ಯುರೋಪು ದೇಶಕೆ ಕಳ್ಸಿಕೆ ಏರ್ಪಾಡ್ ಮಾಡ್ತ್.

ಹಿಂದೆನ ಸಲನೂ ಇದೇ ರೀತಿ ಆಕನ ಅವ್‌ಳು ಥ್ಯಾಕರೆಗೆ ನಿಮ್ಮ ಇಂಗ್ಲೀಷರ ಹೆಣ್ಮಕ್ಕ ಇಲ್ಲಿ ಸುರಕ್ಷಿತರಾಗಿ ವಳೊಂತೇಳಿ ತಿಳ್ಸ್‌ಕಾಕನ ಥ್ಯಾಕರೆಗೆ ಕುಸಿ ಆಗಿ ಅವುಳಿಗೆ ಹನ್ನೊಂದು ಹಳ್ಳಿಗಳ್‌ನ ಬಹುಮಾನಾಗಿ ಕೊಡ್ತ್. ಆಗ ಅವ್‌ಳು ಬೇಡಂತೇಳಿ ವಿದೇಶಿಯರಾದ ನೀವು ಭಾರತಬುಟ್ಟ್ ಹೋಕುತೇಳ್ದು ನಮ್ಮ ಗುರಿತೇಳಿ ತಿಳ್ಸಿತ್. ಮುಂದೆ ಚೆನ್ನಮ್ಮಂಗಾಗಿ ವೀರ ಯೋಧ ಸಂಗೊಳ್ಳಿ ರಾಯಣ್ಣ ರಾಜ್ಯನ ಉಳ್ಸಿಕಂಬಕೆ ಬಂದ್ ರಾಣಿಗೆ ಹೇಳ್ದ್–ನಾನ್ ಕಿತ್ತೂರ್‌ನ ಕಂಡಿತ ತಂದ್ ಒಪ್ಪಿಸಿನೆ. ಇಲ್ಲರೆ ರಣರಂಗಂದ ಬಾದುಲೆತೇಳಿ ಪ್ರತಿಜ್ಞೆ ಮಾಡ್ದೆ. ಮುಂದೆ ತನ್ನವರ್‌ಂದಲೆ ಮೋಸಹೋದ ಕಿತ್ತೂರ್‌ನ ಉಳ್ಸುವ ಪ್ರಯತ್ನಲಿ ಸಂಗೊಳ್ಳಿ ರಾಯಣ್ಣನ ಗಲ್ಲಿಗೇರ್ಸುವೆ.

ಹಿಂಗೆ ಕಿತ್ತೂರು ಬ್ರಿಟಿಷರ ದಬ್ಬಾಳಿಕೆಗೆ ತುತ್ತಾಗಿ ಅವ್‌ಸಾನ ಆತ್. ಇಂದಿಗೂ ವೀರ ಮರಣ ಹೊಂದಿದವರ ಸಮಾದಿಗ ಬೈಲಹೊಂಗಲ ಧಾರವಾಡಲಿ ಸಾಕಷ್ಟ್ ಕಾಂಬಕೆ ಸಿಕ್ಕಿದೆ. ಹಿಂಗೆ ಹೋರಾಡ್‌ದ ಹೆಣ್ ಮಕ್ಕಳ್‌ಲಿ ಕಿತ್ತೂರು ರಾಣಿ ಚೆನ್ನಮ್ಮ ಸುರುಗೆ ಬ್ರಿಟೀಷರ ಎದ್‌ರ್ ನಿತ್ತ್ ಹೋರಾಡ್‌ದವಳು ತೇಳಿ ಚರಿತ್ರೆ ಹೇಳ್ತ್‌ವುಟ್ಟು. ಕಿತ್ತೂರು ಕನ್ನಡ ನಾಡ್‌ಲಿ ಮೆರ್ತ್. ಕನ್ನಡತಿ ಚೆನ್ನಮ್ಮನ ಹೆಸರ್ ಉಳ್ತ್. ಚೆನ್ನಮ್ಮನ ಕತೆನ ಜನಪದ ಕವಿಗ ವಿಧವಿದವಾಗಿ ವರ್ಣಿಸುವೆ. ಜನಪದ, ಗೀಗಿಪದ, ಲಾವಣಿ, ಕತೆ, ನಾಟಕ, ಕೋಲಾಟ, ಹಿಂಗೆ ಹೇಳಲಾರದಷ್ಟ್ ಜನಪದಗಳ್‌ನ ಸೃಷ್ಟಿ ಮಾಡಿಕೆ ಕಿತ್ತೂರು ವೀರರಾಣಿ ಚೆನ್ನಮ್ಮ ಸ್ಫೂರ್ತಿ ಆತ್. ಮೊದಲ ಸ್ವಾತಂತ್ರ ಹೋರಾಟಗಾರ್ತಿಯಾಗಿ ಚರಿತ್ರೆಲಿ ಹೆಸರ್ ಮಾಡ್ತ್.

ಡಣ್ ಡಣ್ 4 ಸಲ ಗಂಟೆ ಬಾರ್ಸಿತ್.

ಮಕ್ಕ : ಅಸ್ಟ್ ಬ್ಯಾಗ ಗಂಟೆ ಆತಾ?

ಟೀಚರ್ : ಹೌದು ಮಕ್ಕಳೇ, ಇಲ್ಲಿರುವ ಜನಪದ ಹಾಡ್‌ಗಳನ ತಬಲಬಾರ್ಸಿ ಹಾಡಿಕಂಡ್ ಕಲ್ತರೆ ಅಲಾ? ಇನ್ನೊಂದು ದಿನ ಹಾಡಿಕೆ ಹೇಳಿಕೊಟ್ಟನೆ.

ಎಲ್ಲವು : ಹೌದು ಟೀಚರ್॥ ಆತ್ ಟೀಚರ್. ಈ ಕತೆ ಕೇಳಿ ನಾವೀಗ ಕಿತ್ತೂರ್‌ಲೆ ವಳೊಂತೇಳಿ ಆದೆ. ಹಂಗೆ ಆ ಊರ್‌ನ ನೋಡಕುತ ಆದೆ. ಟೀಚರ್, ಈ ವರ್ಸದ ನಮ್ಮ ಶಾಲೆನ ಪ್ರವಾಸನ ಕಿತ್ತೂರುಗೆ ಮಡ್ಲೊನ ಅಲಾ? ಟೀಚರ್.

ಟೀಚರ್ : ಹೌದು ನಂಗೂ ಅದೇ ಅನ್‌ಸ್ತಾವುಟ್ಟು - ನಾನ್ ಮುಖ್ಯೋಪಾಧ್ಯಾಯರ್‌ಲಿ ವಿಚಾರಿಸಿ ಅವರ ಅನುಮತಿ ಕೇಳ್ವೆ. ಮಕ್ಕಳಿಗೆ ಕುಸಿ ಆತ್.

ಕಿತ್ತೂರು ಮಲ್ಲಸರ್ಜದೊರೆನ ಸಮಯಲಿ

(ಪೇಶ್ವೆ, ಟಿಪ್ಪು ದಾಳಿ, ಬ್ರಿಟಿಷರ ಧಾಳಿ)	– 1782–1816
ಚೆನ್ನಮ್ಮ ಹುಟ್ಟಿದ್ದ್	– 1792
ಚೆನ್ನಮ್ಮನ ಸೆರೆಹಿಡ್ದದ್	– 1824
ಜೈಲ್‌ಲಿ	– 5ವರ್ಷ
ಸತ್ತದ್	– 1829
ಸಂಗೊಳ್ಳಿರಾಯಣ್ಣನ ಗಲ್ಲಿಗೇರ್ಸಿದ್	– 1830
ಗುಡ್ಡೆಮನೆ ಅಪ್ಪಯ್ಯಗೌಡ	– 1837
ಸಿಪಾಯಿದಂಗೆ	– 1857
ಭಾರತಕ್ಕೆ ಸ್ವಾತಂತ್ರ	– 1947

* * * * *

ಕಿತ್ತೂರು ಚೆನ್ನಮ್ಮ
(ಲಾವಣಿ ಪದ)

ಮೇಳ:

॥ ಯವ್ವ ಯವ್ವಾ॥ ॥ ಯವ್ವ ಯವ್ವಾ॥
॥ ಯವ್ವ ಯವ್ವಾ॥ ॥ ಯವ್ವ ಯವ್ವಾ॥

ಗೀಜಗನ ಹಳ್ಳಿನ ಕಿತ್ತ್‌ತಂದ್
ಕಿತ್ತ್‌ತಂದ ಊರಿಗೆ ಕಿತ್ತೂರುಂತೇಳಿ॥

ಹತ್ತ್ ಏಣಿ ಮ್ಯಾಲೆ ಹತ್ತಿ ಹತ್ತಿ
ಕಿತ್ತೂರು ಕ್ವಾಟೆನ ಕಟ್ಟಿಸಿದೊ॥

ಕಿತ್ತೂರು ಮಲ್ಲಸರ್ಜ ವೀರರಾಜ
ಮುತ್ತು ಮಾಣಿಕ್ಯದ ಒಡೆಯ॥

ರುದ್ರವ್ವ ಚೆನ್ನವ್ವ ಇಬ್ಬೊರು ಹೆಣ್ಣ್‌ಗ ಅವಂಗೆ
ಕಿತ್ತೂರು ನಾಡ್ ಸಂಸ್ಕೃತಿ ಮೆರ್‌ಸಿದೊ॥

ಮಂಜ ಶಿವಲಿಂಗ ರುದ್ರಸರ್ಜಾ
ಕಿತ್ತೂರು ಗಾದಿಯೇರಿ ತೀರ್‌ದ ಸುದ್ದಿ ತಿಳ್ದ್

ಶಿವಲಿಂಗಪ್ಪನ ದತ್ತ್‌ತಂದ ಚೆನ್ನವ್ವ
ಮಲ್ಲಸರ್ಜನಾಮ ಕೊಟ್ಟ್ ರಾಜ್ಯಭಾರ ಮಾಡ್‌ತಿತ್ ಅವ್‌ಳು
॥ಯವ್ವ ಯವ್ವಾ॥॥ಯವ್ವ ಯವ್ವಾ॥

ದತ್ತ್ ಸುದ್ದಿಕೇಳಿ ಥ್ಯಾಕರೆ ಸಾಹೇಬ ಎಂಟ್‌ನೂರಹಳ್ಳಿ
ಕಿತ್ತೂರಮ್ಯಾಲೆ ಯುದ್ದನೆ ಸಾರ್ತ್ ಅಂವ॥

ನಾಡ್‌ನ ಸ್ವಾತಂತ್ರಕಾಗಿ ಯುದ್ದೋತ್ಸವ ಮಾಡ್ತ್ ಅವಳ್
ಚೆನ್ನವ್ವ ವಿಧವೆನ ಸಂಕಟಮರ್ತ್॥

ಪುಂಡ ಬ್ರಿಟಿಷರ ದಂಡ್‌ನ ತಡಿಯಕೆ
ಚೆನ್ನವ್ವ ಗಂಡ್‌ಗಲಿಯಾಗಿ ಮೆರ್ತ್॥
ರಣಚಂಡಿನಂಗೆ ಯುದ್ದನ ಮಾಡಿಕೆ
ಥ್ಯಾಕರೆ ಸಾಹೇಬನ ಮ್ಯಾಲೆ ಕುದುರೆ ಹತ್ತಿ ಹಾರ್ತ್ ಅವ್‌ಳು।

ವೀರಕಚ್ಚೆ ಹಾಕಿ ಗಂಡ್‌ವುಡ್‌ಗೆ ತೊಟ್ಟ್
ರಕ್ಷಕವಚ ಧರ್‌ಸಿ ಕತ್ತಿನ ಬೀಸಿಕಂಡ್ ॥ಯವ್ವ ಯವ್ವಾ॥ ॥ಯವ್ವ ಯವ್ವಾ॥

ಕುದುರೆ ಹತ್ತಿ ಹೊರ್‌ಟತವ್ವ ರಣರಂಗಕ್ಕೆ
ಚಂಡಿ ಚಾಮುಂಡಿ ಕಂಡಿತ ಅವಳಂಗೆ॥

ರಣರಂಗಲಿ ಪುಂಡರ್‌ನ ಅಳ್‌ಸಿಕೆ
ಆಂಗ್ಲ ಗಂಡ್‌ಸರ ತಲೆ ಹಾರ್‍ಸಿತ್ ಅವಳು॥

ವೈರಿಗೆ ಕತ್ತಿನ ಬೀಸಿದರ್‌ನ ಕಂಡ್
ವೈರಿ ನಿತ್ತ್ ನೋಡಿ ದಂಗ್ ಬಡ್ದ್‌ಹೋತವ್ವ
॥ ಯವ್ವ ಯವ್ವಾ॥ ॥ ಯವ್ವ ಯವ್ವಾ॥

ಸ್ವಜನ ಪಿತೂರಿ ಚೆನ್ನವ್ವಂಗೆ ಮುಳುವಾತ್॥
ಕಿತ್ತೂರ್‌ನ ಸಂಪತ್ತ್ ಹೊಳೆನ್ಹಂಗೆ ಹರ್‌ದೋತು॥

ವೀರರಾಣಿ ಚೆನ್ನವ್ವ ವೈರಿಗಳ ಧೈರ್‍ಯಲಿ ಎದ್‌ರಿಸಿತ್.
ವೀರ ಯೋದರ್‌ಗೆ ತುಂಬು ಉತ್ಸಾಹನೆ ತುಂಬಿತ್॥

ನೀಡ್ತ್ ಅವ್‌ಳ್ ಅಡಂಗ್ ತಾಣಲಿ ಅಡ್‌ಂಗಿಕೆ
ಕೊನೆಗೆ ಮುಟ್ಟ ಪುಂಡರ್‌ನ ಅಳ್‌ಸಿಕೆ॥

ಯುದ್ಧಲಿ ಹೋರಾಡಿ ವೈರಿಗಳ ಕೊಂದವುಕೆ
ಬಹುಮಾನ ಬಾರಿ ಬಾರಿ ಕೊಡ್ತ್ ಅವ್‌ಳು ಚೆನ್ನವ್ವ
॥ ಯವ್ವ ಯವ್ವಾ॥ ॥ ಯವ್ವ ಯವ್ವಾ॥

ಚೆನ್ನವ್ವನ ಸಾಹಸ ಕಂಡ್ ಥ್ಯಾಕರೆನ ಪಿತೂರಿ
ವೀರನಾರಿ ಕಿತ್ತೂರ ಚೆನ್ನವ್ವ ಸೆರೆಯಾತವ್ವ

ಅದ್‌ಕೇಳಿ ಚೆನ್ನವ್ವನ ಚಿತ್ತರದ ಬೊಂಬೆಗ ಅತ್ತೊ
ಕಿತ್ತೂರ ಹಸ್ ಎಮ್ಮೆ ಕಣ್ಣೀ...ರ್ ಸೊರ್‍ಸಿದೊ॥
ಅತ್ತೆ ಚೆನ್ನವ್ವ ಸೊಸೆ ವೀರವ್ವರ್‌ನ ಬೈಲಹೊಂಗಲ
ಸೆರೆಲಿ ಕೂಡಿಹಾಕಿ ಸುತ್ತ ಕಾವಲ್ ಇರಿಸಿದೊ॥
ಕನ್ನಡಿನಂಗೆ ಹೊಳ್‌ದ ಕಿತ್ತೂರ ಅರಮನೆ
ವೈರಿಗಳ ತಂತ್ರಕ್ಕೆ ಬಲಿಯಾತವ್ವ, ಬಲಿಯಾತವ್ವ
॥ ಯವ್ವ ಯವ್ವಾ॥ ॥ ಯವ್ವ ಯವ್ವಾ॥

ಎಂಟ್‌ನೂರ ಹಳ್ಳಿ ಕಿತ್ತೂರ ಒಡೆತನ
ಕನ್ನಡನಾಡ್‌ಲಿ ಕಿತ್ತೂರ ಸಂಸ್ಕೃತಿ ಮೆರ್‌ದೋತು॥

ಕನ್ನಡ ಸಂಸ್ಕೃತಿ ನಾಡ್ ನುಡಿ ವೈಭವ
ಕನ್ನಡ ನಾಡ್ ನೆಲದ ಸಂಸ್ಕೃತಿ ಮೆರ್‌ದೋತು॥

* * * * * *

ಜಾನಪದ ಶೈಲಿ

ಕಿತ್ತೂರ ವೀರರಾಣಿ ಚೆನ್ನವ್ವನ ನೆನ್‌ದರೆ
ಜನಪದರು ದೇವಿನ ಕಂಡಂಗೆ॥ ಹೇಳುವೆ
ಕಿತ್ತೂರು ಕೀರ್ತಿನ ಉಳ್‌ಸೀತ್॥

ಮಲ್ಲಸರ್ಜನ ರಾಣಿ ಚೆನ್ನವ್ವಸುಂದರಿ
ಅರಮನೆ ಮಹಲೊಳಗೆ ರತ್ನದಂಗೆ॥ ಚೆನ್ನವ್ವ
ನೆಗಾಡ್‌ರೆ ಆರತಿ ಬೆಳ್‌ಕ್‌ನಂಗೆ॥

ಕಿತ್ತೂರ ಚೆನ್ನವ್ವ ಸುತ್ತೂರ ಒಡತಿ ಆಗಿ
ಕತ್ತಿ ಕವಚಗಳ ಉಡ್‌ಪ್ ಧರ್ಸಿ॥ ಅಬ್ಬರಂದ
ಹತ್ತಿ ಕುದ್‌ರೆ ಜಿಗ್ತ್ ಅವ್ರುಳ್ ರಣರಂಗಕೆ॥
ಸೆರೆಸಿಕ್ಕ ವೈರಿಗಳ ಹೆಣ್ಣ್‌ಮಕ್ಕಳ್‌ನ
ಕರುಣೆಂದ ಜೋಪಾನ ಮಾಡ್ತವ್‌ಳು॥ ಚೆನ್ನವ್ವ
ರಕ್ಷಿಸಿ ಯುರೋಪ ದೇಶಕೆ ಕಳ್‌ಸಿತ್॥

ಕೀರ್ತಿನ ಪಡ್ತ್ ಅವ್‌ಳ್ ವೀರನಾರಿ ಚೆನ್ನವ್ವ
ನಾಡ್ ಅಭಿಮಾನಂದ ಸಂಗೊಳ್ಳಿ ॥ರಾಯಣ್ಣ
ಗಲ್ಲ್‌ಶಿಕ್ಷೆ ಪಡ್ದ್ ಅಂವ ಸ್ಥಿರ ಆತಲ್ಲಿ॥

ಕನ್ನಡತಿ ವೀರನಾರಿ
(ಕೋಲಾಟ)

ಬೆಡಗ್‌ನ ಬಣ್ಣದ ಕನ್ನಡದಕೋಲೆ
ಚಿನ್ನದ ರನ್ನದ ಬಣ್ಣದ ಸಿರಿಕೋಲೆ ॥ಸಿರಿಕೋಲೆ॥

ಕನ್ನಡತಿ ಕಿತ್ತೂರ ವೀರರಾಣಿ ಚೆನ್ನವ್ವ
ನಾಡಾಭಿಮಾನ ಮೆರ್ಸಿತ್ ರಕ್ಷಣೆಗೆ ॥
ಕಿತ್ತೂರ ಸಂಪತ್ತ್ ಎತ್ತ್ ಒಂಟೆಗಳ ಮ್ಯಾಲೆ
ಮೂಟೆಕಟ್ಟಿ ಸಾಗ್ಸಿತ್ ಧಾರ್‌ವಾಡದ ಕೋಟೆಗೆ ॥ಬೆಡಗ್‌ನ॥

ವೀರನಾರಿ ಕಿತ್ತೂರ ರಾಣಿ ಚೆನ್ನವ್ವ
ಕವಚದ ಉಡುಪು ಕೈಲಿ ಬಾಳ್‌ಕತ್ತಿ
ಆಂಗ್ಲರ್‌ನ ಓಡ್ಸಿಕಾಗಿ ನಾಡ್‌ನ ಸ್ವಾತಂತ್ರಕಾಗಿ
ಚಂಡಿನಂಗೆ ಹೋರಾಡ್ತವ್ವ ರಣರಂಗಲಿ ॥ಬೆಡಗ್‌ನ॥


ಕೆರಳ್‌ದ ಕೇಸರ್‌ಣಿ ಕಿತ್ತೂರ್‌ನ ಬಿಟ್ಟ್‌ಕೊಟ್ಟ್
ಬತ್ತಲ ಕುದುರೆಯೇರಿ ಜಿಗ್ತವ್‌ಳು
ಪರಿವಾರದೊಟ್ಟಿಗೆ ಆಂಗ್ಲರ ಸೆರೆಯಾತವ್ವಾ
ವೀರನಾರಿ ರಾಣಿ ಚೆನ್ನವ್ವ.... ಸೆರೆಯಾತವ್ವಾ ॥ಬೆಡಗ್‌ನ॥

ಗಂಡನ್ನ ಕಳ್‌ಕಂಡ್ ಬೆಂಡಾದ ಚೆನ್ನವ್ವ
ಗಂಡಾಗಿ ರಣರಂಗಕ್ಕೆ ಇಳ್‌ತವ್ವಾ॥
ಕಿತ್ತೂರ್‌ಲಿ ಹರ್‌ತವ್ವ ನೆತ್ತರ ಕೋಡಿ॥
ಸಂಪತ್ತ್ ಹೊಳೆನಂಗೆ ಹರ್‌ದೋತು ॥ಬೆಡಗ್‌ನ॥

ಕಿತ್ತೂರ ಶೂರ ಶೂರಿ ಮತ್ತೇನ್ ಹೇಳ್‌ಲಿ
ಅತ್ತೆ ಸೊಸೆಗೆ ಸುತ್ತ ಕಾವಲ್ ಹಗಲಿರ್‌ಳ್॥
ಎತ್ತ ನೋಡ್ರು ತಳ ಮಳ ಜನರ್‌ಲಿ
ಕಾವಲ್‌ಸೈನ್ಯದ ಲೆಕ್ಕ ನೋಡಿ ॥ಬೆಡಗ್‌ನ॥
ಕನ್ನಡತಿ ವೀರರಾಣಿ ಕಿತ್ತೂರ ಚೆನ್ನವ್ವ
ಸೆರೆ ಆದ್‌ಕಂಡ ಅಂಗರಕ್ಷಕ ಬಾಳಪ್ಪ
ಬಂದೂಕ್‌ಲಿ ಗುರಿಹೊಡ್ತ್ ಥ್ಯಾಕರೆಗೆ
ಬಿದ್ದತಂವ ಭೂಮಂಡಲ ನಡುಗುವಂಗೆ ॥ಬೆಡಗ್‌ನ॥

ಪುಂಡ ಬ್ರಿಟಿಷರ ದಂಡ್‌ನ ತಡಿಯಕೆ
ವೀರನಾರಿ ರಾಣಿ ಚೆನ್ನವ್ವ ಕೈಲಿ ಬಾಳ್‌ಕತ್ತಿ ಹಿಡ್ತವ್‌ಳು॥
ಅಬ್ಬರಂದ ಜಿಗ್ತ್‌ಕುದ್‌ರೆ ಹತ್ತಿ ಹಾರ್ತ್ ಅವ್ಳುಳ್
ಸ್ವಾತಂತ್ರದ ರಕ್ಷಣೆಗೆ ಸಮರೋತ್ಸವ ಮಾಡ್ತ್ ಅವ್‌ಳ್ ॥ಬೆಡಗ್‌ನ॥

* * * * *



ವೀರನಾರಿ ಕಿತ್ತೂರು ಚೆನ್ನಮ್ಮ

ರೈತದಂಗೆ

ಪಾತ್ರಧಾರಿಗ:

ಸುಬ್ಬಪ್ಪ	–	ಅಪ್ಪಯ್ಯಗೌಡನ ಅಪ್ಪ	–	ಚೆಕ್‌ವಸ್ತ್ರ
ತಾಯಕ್ಕ	–	ಅಪ್ಪಯ್ಯಗಾಡನ ಅವ್ವ	–	ಚೆಕ್‌ವಸ್ತ್ರ
ಅಪ್ಪಯ್ಯ	–	ಮಹಾದಂಡನಾಯಕ (1993–1837 ವರ್ಷ)	–	ಕುಪ್ಪಸದಟ್ಟಿ, ಕಟ್ಟ್ ರುಮಾಲ್
ಅಕ್ಕವ್ವ	–	ಹೆಣ್ಣ್	–	ಕೋರ್‌ವಸ್ತ್ರ
ಮಗಳು	–	10 ವರ್ಷ	–	ಉದ್ದಲಂಗ
ತಮ್ಮಪ್ಪ	–	ತಮ್ಮ ಸುಳ್ಯಲಿ ಪಾರ್‌ಪತ್ತೆಗಾರ	–	ರುಮಾಲ್
ಪೊನ್ನಪ್ಪ	–	ಮನೆಲಿರ್‌ವ ತಮ್ಮ	–	ಚಾಲೆಮುಂಡು
ಬ್ರಿಟಿಷ್ ಸೈನಿಕರ್	–	ಇಬ್ಬರು	–	ಹ್ಯಾಟ್
(ಚಿಣ್ಣಕ್ಕ, ಪುಟ್ಟವ್ವ)	–	ಬಲಮುರಿ	–	ನೆರೆಮನೆ ಹೆಣ್ಮಕ್ಕ
ಲಿಹಾರ್ಡಿ	–	ಕ್ಯಾಪ್ಟನ್ ಬ್ರಿಟಿಷ್ ಮುಖ್ಯಸ್ಥ	–	ಹೆಡ್
ಚೆಟ್ಟಿ, ಕರ್ತು	–	ಕುಡಿಯ ಅಣ್ಣ ತಮ್ಮಂದ್ರ್ (ಅಂಗರಕ್ಷಕರ್ ಗಾಳಿಬೀಡ್)	–	ರುಮಾಲ್
(ಕೆದ್‌ಂಬಾಡಿ ರಾಮಗೌಡ)	–	ಊರು ಪಟೇಲ	–	ಮುಂಡಾಸ್
ನಂಜಯ್ಯ	–	ಹಿರಿಯೊಂವ ದಂಡ್‌ಲಿ	–	ಕಚ್ಚೆಪಂಚೆ
ಮಾದೇವಿ	–	ಹೆಣ್ಣ್	–	ಕನ್ನಡ ಸೀರೆ (ತಲೆಗೆ ಹೊದ್ಕ್)

(ತಿಮ್ಮಣ್ಣ ಕೂಸಕ್ಕ ಸುಬ್ಬಕ್ಕ)	–	ಪೂಮಲೆಲಿ ರಾಮಗೌಡನ ನೆರೆಮನೆ ಆಪ್ತರ್.
(ಕಲ್ಯಾಣಪ್ಪ, ಪುಟ್ಟಬಸಪ್ಪ, ಅಪರಂಪಾರ,)	–	ಮುಖ್ಯಸ್ಥರ್
ರೈತ ಸೈನಿಕರ್	–	ಬಿಕ್ರನ ಕಟ್ಟೆಲಿ ಗಲ್ಲಿಗೇರ್ಸ್‌ದೊವು

ಆಧಾರ

1837ರ ಸ್ವಾತಂತ್ರ ಸಂಗ್ರಾಮ	–	ಪ್ರೋ ॥ ಪೂಜಾರಿ ಮೊಣ್ಣಪ್ಪ
1985 ಗೌಡದೊನಿ	–	ಸೂದನ ಈರಪ್ಪ
1997 ರ ಸಂಚಿಕೆ	–	ಕೊಡಗು ಸಂಗಾತಿ ಪ್ರಾಕ್ಷಿಕ ಪತ್ರಿಕೆ
1999ಅಮರ ಸುಳ್ಯದ ಸ್ವತಂತ್ರ ಸಮರ	–	ಎನ್.ಎಸ್.ದೇವಿಪ್ರಸಾದ್ ಮತ್ತು ಜಿ.ಜಿ. ಮುಡೂರು.

ವಿಲಾಯಿತಿ ದಂಡ್

ಮೇಳ:

ದಂಡ್ ಬಂದ್ ಬೀಡ್ ಬುಟ್ಟುಟ್ಟಲ್ಲಾ
ವಿಲಾಯಿತಿ। ದಂಡ್ ಬಂದ್ ಬೀಡ್ ಬುಟ್ಟುಟ್ಟಲ್ಲಾ!!

ಎಂಟ್ ದಿಕ್ಕ್‌ನ ಕ್ವಾಟೆ
ಮಲೆನಾಡ್ ಕಲ್ಲ್‌ಕ್ವಾಟೆ
ಜೋಡಿ ಪಂಚೆ ಕೆಂಚೆಗೌಡ
ದಟ್ಟಿಸುತ್ತಿ ಸೊಂಟಸುತ್ತ ॥

ದಟ್ಟಿಸುತ್ತಿ ಸೊಂಟಸುತ್ತ
ಗಟ್ಟಿಮೀಸೆ ಕೆಂಚೆಗೌಡ
ಗರುಡ ಚಕ್ರ ಸುತ್ತಿದಂಗೆ
ತಿರ್‌ಗಿ ಬಾತ್ ಚಕ್ರದಂಗೆ ॥ದಂಡ್॥

ದಿಬ್ಬ ಹತ್ತಿ ಕುದ್ದರೆ
ಜಪವನ್ನೆ ಮಾಡ್‌ದೆ ಅಂವ
ಗರುಡ ಚಕ್ರ ಸುತ್ತಿದಂಗೆ
ಯಾವಸೀಮೆ ಗೌಡ ಯಿಂವ?

ಕರ್‌ದ ಹಾಲ್ ಕರ್‌ದ ಹಂಗೆ
ಯಾರೂ ಕೊಡೊವು ಅಲ್ಲಾ
ಚೊಂಬು ತಕ್ಕಂಡೋತು
ಕರ್‌ದ್ ನಾನೆ ತನ್ನೆತೇಳ್ತ್ ॥ದಂಡ್॥
ರಂಗನ ಕ್ವಾಟೆದಾಟಿ
ಮೈಸೂರು ಸೀಮೆಗಾಗಿ
ಬಂಡೆ ಹತ್ತಿ ಹಾರಿ
ಕಾವೇರಿ ಹೊಳೆ ದಾಟಿ ॥

ಕಟ್ಟೆಹೊಳೆ ದಾಟಿ
ಕಲ್ಲ್ ಮರಳ್ ದಂಡೆಗೆ
ಕಲ್ಲ್ ಹತ್ತಿ ಹಾರಿ
ಪಯಸ್ವಿನಿ ನದಿ ದಂಡೆಗೆ ॥ ದಂಡ್॥

ಊರಿಗೊಬ್ಬ ಗೌಡ
ಕುಳುವಾಡಿ ಕೇರಿಗೊಬ್ಬ
ಮಲೆನಾಡ್ ಕೆಂಚೆಗೌಡ
ಚಕ್ರದಂಗೆ ತಿರ್‌ಗಿಬಾತ್॥

ಹೂಡುವ ಗದ್ದೆಗೆ
ಹೆಚ್ಚ್ ದುಡಿಬ್ಯಾಡಿತೇಳ್ತ್
ಮಲೆನಾಡ್ ಸೀಮೆಸೇರ್ತ್
ಏಳ್ ಹೆಡೆನಾಗ ಸುಬ್ರಹ್ಮಣ್ಯ ॥ದಂಡ್॥

ಈಗ................

ನಿರೂಪಕ :

ಕೂಸುನ ಒಚ್ಚ್‌ತಾಯಿದ್ದ ಕೈ ಬಾಯಿಲಿ ಪದನ ರಾಗಲಿ ಅಲ್ಲಲ್ಲಿ ನಿಲ್ಸಿ ನಿಲ್ಸಿ ಹಾಡ್ತಾಯಿತ್ತ್! ನೆವನಕ್ಕೆ ಕೂಸುನ ಒಚ್ಚುದು

ಕಲ್ಯಾಣವೇ ಜೋ.....ಜೋ.....ಕಲ್ಯಾಣವೇ
ಕಲ್ಯಾಣ.....ಕಲ್ಯಾಣ.....ಕಲ್ಯಾಣವೇ
ಅಮರ ಸಿರಿಗೆ ಕಲ್ಯಾಣವೇ..........
ಕಲ್ಯಾಣ ಶಿವನೆ ಕಲ್ಯಾಣವೇ................
ಕಲ್ಯಾಣ ಕ್ರಾಂತಿಗೆ ಕಲ್ಯಾಣ ಶಿವನೆ.........॥

ಮಧ್ಯಮಧ್ಯಮಾತ್! ಮಧ್ಯ ಮಧ್ಯ ಪದಗ, ಸೋಬಾನೆ–ಜನ ತಿಳ್‌ಕಂಡೊ ಹೋ ಕೆದ್‌ಂಬಾಡಿ ರಾಮಗೌಡನ ಮನೆಲಿ ಸುಭಕಾರ್ಯ ಮೊದುವೆ ಕಾರ್ಯನೆ ಆಗಿರೊಕು ಸೋಬಾನೆ ಪದನೂ ಕೇಳ್ತಾವುಟ್ಟಲ್ಲಾ.. ಆಲ್ಸಿದೊ... ಆಲ್ಸಿದೊ... ಜೆನ ಏನೂ ಅರ್ತ ಆತ್‌ಲೆ!

ಕೂಸುನ ಒಚ್ಚ್‌ತಾಯಿರ್‌ವ ಪದ ಮತ್ತೊಮ್ಮೆ ಕೇಳ್ತ್
ಅಮರಸಿರಿಗೆ ಕಲ್ಯಾಣವೆ
ಜೋ ಕಲ್ಯಾಣ ಕಲ್ಯಾಣ ಜೋ......
ಕಲ್ಯಾಣ ಕ್ರಾಂತಿಗೆ ಕಲ್ಯಾಣವೆ ॥

ನಿರೂಪಕ : ಹೌದು, ಇದ್ ಸಾದಾರಣಕ್ಕೆ ಯಾರಿಗೂ ಅರ್ತ ಆಗುವಂತದ್ದಲ್ಲ. ತುಳುನಾಡ್‌ತೇಳ್ರೆ ವಿಶಾಲಕೊಡಗ್ ದೇಸಲಿ ನಡ್‌ದ ಅಮರ ದಂಗೆ, ಅಮರ ಸುಳ್ಯ ಕಾಟಕಾಯಿ ಅಲ್ಲರೆ ರೈತದಂಗೆ ತೇಳ್‌ವ ಸಮಯಲಿ ಅದ್‌ಕೆ ಮೂಲ ಕಾರಣರಾದವರ್‌ನ ಆ ದಂಗೆ ಹೆಂಗೆ ಸುರಾಗಿ ಹೆಂಗೆ ಅಂತ್ಯ ಕಂಡತ್ ತೇಳ್ದೊರ್‌ನ ತಿಳ್‌ಕೊಂಬನ. ಯಾಕೆತೇಳ್ರೆ ಇಂದ್‌ನ ಮಕ್ಕಳಿಗೆ ಇಂತ ಚರಿತ್ರೆ ಸಿಕ್ಕಿಕಿಲೆ. ಬ್ರಿಟಿಷ್ ಸರ್ಕಾರದ ಮುಂದೆ ಎದ್‌ರ್ ನಿತ್ತ್ ಹೋರಾಡ್‌ದ ಕೆಲು ಮುಕಂಡರ್‌ನ ಇಲ್ಲಿ ಮುಕ್ಯಾಗಿ ತಿಳಿವ ಉದ್ದೇಸ.

ರಾಮಯ್ಯನು ಸೋಮಯ್ಯನು ನೆರೆಕರೆವು ಅವುಕೆ ಬ್ಯಾಟೆಗೆ ಹೋಗುವ ಚಟ. ಒಂದು ದಿನ ಅವು ಮಾತಾಡಿಕಂಡ್ ರಾತ್ರೆ ಇರ್‌ಬ್ಯಾಟೆಗೆ ಹೊರ್‌ಟೊ. ಹೋಗ್ತಾ ಹೋಗ್ತಾ ಅವ್‌ಕೆ ದಾರಿ ತಪ್ಪಿದಂಗಾತ್!

ಸೋಮಯ್ಯ : ಅಲ್ಲಾ ಈಗ ಗ್ಯಾನತ್ ನೋಡು ನಾವು ಎಲ್ಲಿಗೆ ಮುಟ್ಟ ನಡ್ಕಂಡ್ ನಿದ್ದೆಕಣ್ಣ್‌ಲೆ ಬಂದೊತ?

ರಾಮಯ್ಯ : ಇದ್ ಪೂಮಲೆ ಕಾಡ್. ಮನ್ಸ್ ಜಿಗ್ಗ್ ಹೇಳ್ದೆನೋಡು

ನಿರೂಪಣೆ : (ಸಂಗೀತ ವೀಣೆ......ಕಾಡ್ ಶಬ್ದ) ಹೆಂಗ್ಸ್ ಹಾಡ್ತಾಯಿತ್ ಕೂಸುನ ಒಚ್ಚುವ ಕೈಲಿ ಬೆತ್ತದ ನೇಕೆ ಇರ ಮರ ಸದ್ದ್.!

ಬಾಯಿಲಿ ನಿಲ್ಸಿ ನಿಲ್ಸಿ ಹಾಡ್ತಾಯಿತ್. ನೆವನಕ್ಕೆ ಕೂಸುನ ಒಚ್ಚುದು!

ರಾಮಯ್ಯ ಗ್ಯಾನ ಮಾಡ್ತಾ ಹೇಳ್ತ್. ಪೂಮಲೆ ಕಾಡ್ ಹತ್ರ ಮನೆಗಳೆಯಿಲ್ಲೆ! ಹಂಗಿರ್‌ಕನ ಇದ್ ಯಾರ ಮನೆಯಿರ್‌ದು? ಯಾರ್‌ದಾರ್ ಇರ್‌ಲಿ ಹೋ.....ಅಲ್ಲಿ ಇನ್ನು ನಾಕೈದ್ ಜನ ಕಂಡಂಗಾದೆ. ಮುಂಡಾಸ್ ಕಟ್ಟಿ, ಕತ್ತಿ ದೊಣ್ಣೆ ಹಿಡ್ಕಂಡ್ ಇರ್‌ದು ಕಂಡದೆ. ಇವು ಕತೆ ಹೇಳ್‌ಕಂಡ್ ನಾಟಕ ರೂಪಲಿ ಆಡಿ ತೋರ್ಸ್‌ತಾ ಅಬ್ಬೆಸ ಮಾಡ್ತಾವಳದ್. ಹಂಗಾರೆ ಸೊಲ್ಪ ಹೊತ್ತು ಅಲ್ಲೊನ ಶ್!!!!

ಬೀಡಿಗೀಡಿ ಸೇದುದು ಬ್ಯಾಡ ಸೊಳ್ಳೆ ಕಚ್ಚಿರೂ ಸುಮ್ಮನೆ ಕುದ್ದ್‌ಕ ತಯಾರಾಗ್ತಾವುಟ್ಟು. ಸೊಲ್ಪ ಹತ್ರ ಹೋಗಿ ಅವು ಕಾಣದಂಗೆ ನೋಡೊನ.

ಕಲ್ಯಾಣವೆ ಶಿವನೆ ಸೋಬಾನವೆ

ಕಲ್ಯಾಣ ಕಲ್ಯಾಣ ಸೋಬಾನವೆ॥

ಅಮರ ಸಿರಿಗೆ ಸೋಬಾನೆ

ಕಲ್ಯಾಣ ಕ್ರಾಂತಿಗೆ ಸೋಬಾನೆ

ಮಧ್ಯಮಧ್ಯ ಮಾತ್. ಮಧ್ಯಮಧ್ಯ ಪದಗ ಒಮ್ಮೆಗೆ ಗೊತ್ತಾತ್! ಇಲ್ಲಿ ಏನ್ ನಡಿತಾವುಟ್ಟು ತೇಳಿ ಕೇಳ್ತ್ ರಾಮಯ್ಯ

ರಾ : ನಿಂಗೇನಾರ್ ಗೊತ್ತಾತ ಸೋಮಯ್ಯ? ಕೈಲಿ ಕೋವಿ ಸೊಳ್ಳೆಬ್ಯಾರೆ ಕಚ್ಚ್‌ತಾವುಟ್ಟು.

ಸೋ : ಗೊತ್ತಾಗದೆ ಏನ್? ನಮ್ಮ ಶಾಲೆಲಿ ಕನ್ನಡ ಮಾಸ್ಟ್ರ ಹೇಳ್ತಾಯಿದ್ದ ಅಮರ ಸುಳ್ಯದ ರೈತದಂಗೆನ ಕತೆಅಲಾ? ಅದ್ ಮರೆಕಾದ್ಯ? ಇದೇ ಕಾಡೊಳಗೆ 10ಮೈಲ್ ನಡ್‌ದ್ ಶಾಲೆ ಕಲ್‌ತದ್ ಅದರ್‌ನ ಹೆಂಗೆ ಮರಿಯೊದು? ಹಂಗೆಲ್ಲಾ ಮರೆಯುವಂಗಿಲ್ಲೆ.

ಸೋ : ನಿಜ ರಾಮಯ್ಯ ನೀ ಹೇಳ್ದು ನಿಜ ಆದರೂ ಪೂಮಲೆ ಕಾಡ್ ತೇಳ್‌ಕನ ಮೈಜಿಗ್ಗ್ ತೇಳ್ತ್ ಅಲಾ?

ರಾ : ಹೌದಲಾ?

* * * * *

ಮುಂದೆ ನಾಟಕ ಸುರಾದೆ.........

ಅಧ್ಯಾಯ –1

ನಿರೂಪಕ : ಎಷ್ಟೇ ಪ್ರಯತ್ನಪಟ್ಟರೂ ಪಲಸಿಕ್ತ್‌ಲೆ... ಎಲ್ಲಾ.....ಮುಗ್ದೇ ಹೋತು.

(ಪ್ರಜೆಗಳ ಮಾತ್)ಕಂಪಣಿ ಸರಕಾರ ಕೊಡಗ್‌ದೇಶನ ಆಕ್ರಮಸಿಕೆ ಪ್ರಯತ್ನ ಪಟ್ಟ್ ಮಡಿಕೇರಿ ಕ್ವಾಟೆನ ವಸ ಪಡ್ಸಿ ಅವರ ಬಾವುಟನ ಹಾರ್ಸಿದೊ. ಹಾಲೇರಿ ಅರಸರ ವಿಜಯದೊಜ ಅಲ್ಲಿಲ್ಲೆ. ಬಿಟ್ರಿಷರ ಬಾವುಟ ನೋಡಿ ಪ್ರಜೆಗಳ ರಕ್ತ ಕೊದ್ದ್ ಹೆಪ್ಪುಗಟ್ಟಿ ಹೋತು!!

ನಿರೂಪಕಿ : ಅರಮನೆಲಿ ಹಾಲೇರಿ ಅರಸರ ವಿಜಯ ದೊಜಯಿಲ್ಲೆ. ಸಾವ್‌ರಾರ್ ಸೈನಿಕರ್ ಮುತ್ತಿಗೆ ಹಾಕಿದೊ. ಅಮರ ಕ್ರಾಂತಿ ನಡ್ದ್ ಹದಿಮೂರು ದಿನ ಬಾವುಟ ಗುಡ್ಡೆಲಿ ಕಲ್ಯಾಣ ದೊಜನ ಹಾರ್ಸಿದೊ. ಆದರೂ......ಪ್ರಯೋಜನಯಿಲ್ಲೆ. ಇಲ್ಲಿ ಯಾವ ತರದ ಮದ್ದ್ ಗುಂಡ್‌ಗ ಯಿತ್ತ್‌ಲೆ. ಬ್ರಿಟಿಷರ ಫಿರಂಗಿ ಸದ್ದ್‌ಗೆ ಹೆದ್‌ರಿ ಜನ ಚೆಲ್ಲಾಪಿಲ್ಲಿ ಓಡ್ದೊ.

ನಿರೂಪಕ : ಅರಣ್ಯ ಕಾಡ್‌ಗಳ್‌ನ ದಾಟಿಹೋಕನ ಬಿಲ್ಲ್ ಬಾಣ ಬುಟ್ಟ್ ಯುದ್ದ ಮಾಡೊಕು. ಇಂಗ್ಲೀಷ್‌ರ ಫಿರಂಗಿ ಗುಂಡ್‌ಗೆ ಹೆದ್‌ರಿ ಭೂಮಿ ನಡ್‌ಗ್‌ವ ಸದ್ದ್‌ಕೇಳಿ ಮೋಸ ಹೋದ ಕೊಡಗ್ ದೇಸದ. ಸೈನಿಕರ್ ಸೋತ್ ಹೋದೊ.....ಹಿಂಗೆತ ಸತ್ಯ ನ್ಯಾಯವಂತರಾದ ಕೊಡಗ್ ದೇಸದ ಪ್ರಜೆಗ ಮಡ್ಕೇರಿ ಕ್ವಾಟೆಲಿ ಹಾರಾಡ್ತಾಯಿದ್ದ ಬ್ರಿಟಿಷರ ದೊಜನ ನೋಡಿ ಹೇಳ್ ಕಂಡವೆ.

ಈ ದಂಗೆಗೆ ಅಮರಕ್ರಾಂತಿ, ಅಮರ ಸುಳ್ಯದ ಕಾಟಕಾಯಿ, ತೇಳುವೆ. ಹಿನ್ನೆಲೆ "ದುಕ್ಕದ ಸಂಗೀತ.....ವೀಣೆ"

* * * *

ರೈತದಂಗೆನ ಮೂಲ

ನಿರೂಪಣೆ :

ಕೆದ್‌ಂಬಾಡಿ ರಾಮಗೌಡನ ಮನೆ. ಸುಳ್ಯದ ಹತ್ರದ ಪೂಮಲೆ ಕಾಡ್‌ಲಿ ಕೆಲು ಮುಕಂಡರ್‌ಗ ಗುಪ್ತ ಆಗಿ ಸೇರ್‍ಯೊಳೊ. ಅದ್ ಬ್ರಿಟಿಷರಿಗೆ ತಿಳಿಯದಂಗೆ ಮೊದುವೆ ಸಮಾರಂಭತೇಳಿ ಸುದ್ದಿ ಹರ್‌ಂಡಿತ್.

ಕೆದ್‌ಂಬಾಡಿ ರಾಮಗೌಡ ಮಡಿಕೇರಿಲಿದ್ದ ಅಪ್ಪಯ್ಯಗೌಡನ ಸುಳ್ಯಕ್ಕೆ ಕರ್ಸಿ ಈ ವಿಷಯನ ಎಲ್ಲವು ಸೇರಿ ಮಾತಾಡ್ದೊ. ಆಗ ತಮ್ಮಪ್ಪನು ಸುಳ್ಯಲಿ ಪಾರ್‌ಪತ್ತೆದಾರರಾಗಿ ಇದ್ದಂವ ಇವರೊಟ್ಟಿಗೆ ಸೇರಿತ್. ಹಂಗಾಗಿ ಅಪ್ಪಯ್ಯ ಗೌಡನು ಎಲ್ಲರೊಟ್ಟಿಗೆ ಮಾತಾಡಿ ಬ್ರಿಟಿಷರಮ್ಯಾಲೆ ದಂಗೆ ಏಳಿಕೆ ಉಪಾಯ ಹೂಡ್ದೊ. (ತಿಳ್‌ದವರ ಮಾತ್.)

ಈ ದಂಗೆಗೆ ಅಮರಕ್ರಾಂತಿ ಅಮರ ಸುಳ್ಯದ ಕಾಟಕಾಯಿ ರೈತದಂಗೆತ ಹೇಳ್‌ವೆ. ಇದ್ 1837ರ ರೈತದಂಗೆಲಿ ಅಪ್ಪಯ್ಯಗೌಡನ ಗಲ್ಲಿಗೇರ್ಸಿದ್ ಮತ್ತೆ ಹಲವು ವರ್ಷಕಳ್‌ದ ಮ್ಯಾಲೆ ಮಡಿಕೇರಿ ಗೌಡ ಸಮಾಜಕ್ಕೆ ಹೋಗುವ ದಾರಿಗೆ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆತೇಳಿ ಹೆಸ್‌ರ್ ಮಡ್ಗಿಸಿದ್ದ್ ಇದೆಲ್ಲ ಸಾಕ್ಷಿ ಆಧಾರಗ .

ಪೂಮಲೆ ಕಾಡ್‌ನ ಕೆದ್‌ಂಬಾಡಿ ರಾಮಗೌಡನೇ.. ಈ ದಂಗೆಗೆ ಮೂಲ ಕಾರಣ ಆದರೂ ಅವನ ಮುಕಂಡತನಲಿ ರೈತದಂಗೆನ ಸ್ವಾತಂತ್ರ ಹೋರಾಟಕ್ಕಾಗಿ ಕ್ರಾಂತಿಗಿಳ್ದ್ ಮಹಾ ದಂಡನಾಯಕನಾಗಿ ಕೆಲ್ಸಮಾಡ್ದ್ ಮತ್ತೆ ಬ್ರಿಟಿಷ್ ಸರಕಾರದ ಸುಭೆದಾರ ಹುದ್ದೆನ ಬುಟ್ಟ್ ದಂಗೆಗೆ ಸೇರ್ದ್ ಅಪ್ಪಯ್ಯಗೌಡನ ಗಲ್ಲಿಗೇರ್ಸಿಕೆ ಮುಕ್ಯ ಕಾರಣ ಆತ್.

ಅದರ್‌ನ ಸುಲ್‌ಬಾಗಿ ಜನ ತಿಳಿಯೊಕು ತೇಳ್ವ ಉದ್ದೇಶ ಮಡ್ಗಂಡ್ ರೈತದಂಗೆ ಯಾಕಾಗಿ ಸುರಾಗಿ ಹೆಂಗೆ ಮತ್ತೆ ಯಾವ ರೀತಿ ಅಂತ್ಯಕಂಡತ್ ತೇಳ್ದೊರ್‌ನ ನಾಟಕ ರೂಪಲಿ ಮುಂದೆನ ಪೀಳಿಗೆಗೆ ತಿಳ್‌ಸುದು ಈ ಲೇಖನದ ಉದ್ದೇಶ.

ಇಂದ್ ಮಡಿಕೇರಿ ನಗರದ ಸುದರ್ಶನ ವೃತ್ತಲಿರ್‌ವ ಗುಡ್ಡೆಮನೆ ಅಪ್ಪಯ್ಯ ಗೌಡನ ಕಂಚ್‌ನ ವಿಗ್ರಹ ಎಲ್ಲವರ್‌ನ ಆಕರ್ಷಣೆ ಮಾಡ್ತಾವುಟ್ಟು. ಈ

ಸಂದರ್ಭಲಿ ಅರೆಭಾಷೆ ಗೌಡ ಬಲಮುರಿ ಗುಡ್ಡೆಮನೆ ಅಪ್ಪಯ್ಯಗೌಡನ ಚರಿತ್ರೆನ ತಿಳಿಯೊನ. ಇವರ ಅಪ್ಪಂಗೆ 3ಜನ ಗಂಡ್‌ಮಕ್ಕ ತಮ್ಮಪ್ಪನು ಅಪ್ಪಯ್ಯನು ಈ ದಂಗೆಲಿ ಪ್ರಾಣಕಳ್‌ಕೊಂಡವು. ಕೆದ್‌ಂಬಾಡಿ ರಾಮಗೌಡನ ಮುಂದಾಳ್‌ತನಲಿ ಸೇರಿ ಮಾತ್‌ಕತೆ ಆದ ಮ್ಯಾಲೆ ಅಪ್ಪಯ್ಯಗೌಡ ಅಂವನ ಕೆಲ್‌ಸಕ್ಕೆ ರಾಜಿನಾಮೆ ಕೊಟ್ಟತ್.

(ಬಲಮುರಿ ಗುಡ್ಡೆ ಐನ್‌ಮನೆಲಿ)

ಚಿಣ್ಣಕ್ಕ : ಪುಟ್ಟವ್ವ........ಪುಟ್ಟವ್ವಾ ಆಚೆಮನೆಗೆ ಭತ್ತಕುಟ್ಟಿಕೆ ಹೋನೆ. ನೀನ್ ಬಂದಿಯಾ?

ಪುಟ್ಟವ್ವ : ಹೌದೂ? ನಾನೂ ಬನ್ನೆ. ವಲೆಲಿ ಹಾಲ್ ಕಾಸಿಕೆ ವುಡ್‌ಗ್ಯೊಳೆ. ಬ್ಯಾಗ ಬಾಗ್‌ಲ್ ಹಾಕ್ಕಂಡ್ ಅತ್ತೆಗೆ ಹೇಳಿ ಬನ್ನೆ.

ಚಿಣ್ಣಕ್ಕ : ಹೇಳ್ದಂಗೆ ಅಕ್ಕವ್ವಂಗೆ ಉಷಾರಿಲ್ಲದೆ ಜೊರ ಬಂದ್ ಹದ್‌ನೈದ್ ದಿನ ಮಲ್ಗಿತ್. ಈಗ ಅವಳ ಮಾಂವ ಬೆಟ್ಟತ್ತ್‌ಮಲೆ ಹತ್ರಯಿರ್‌ವ ಈರುಳಿ ಮಲೆ ಹತ್ರಂದ ಒಂದು ಅಜ್ಜಿನ ಕರ್‌ಕಂಡ್ ಬಂದ್ ಆ ಅಜ್ಜಿ ನಾರ್ ಬೇರ್ ಕಸಾಯಮಾಡಿ ಕುಡ್‌ಸಿ, ಮದ್ದ್ ಸೊಪ್ಪು ಅರ್‌ದ್ ಮೈಗೆ ಮೆತ್ತಿ ಈಗ ಸೊಲ್ಪ ಉಸಾರಾಗುಟು. ಅಕ್ಕವ್ವನ ನೋಡ್‌ದಂಗು ಆತ್. ಭತ್ತಕುಟ್ಟಿಕೆ ಹೋದಂಗು ಆತ್. ಪೋಯಿ....,

ಸುಬ್ಬಪ್ಪ : (ಹೆಣ್ಣಿಗೆ ಹೇಳ್ದೆ) ವಿಳ್ಯಶಾಸ್ತ ಮೊದುವೆ ಕೆಲ್ಸ ಬ್ಯಾಗ ಮುಗ್ಸೊಕಲೆ ಇಂದಾ......ಭತ್ತಕುಟ್ಟಿಕೆ ಹೆಣ್ಮಕ್ಕ ಆಚೆಮನೆಗೆ ಬಂದವು ಅಕ್ಕವ್ವನ (ಸೊಸೆ) ನೋಡಿಕೆ ಬಂದೊಳೊ ನೋಡು.

ತಾಯಕ್ಕ : ಬನ್ನಿ ಬನ್ನಿ ಭತ್ತ ಕುಟ್ಟಿಕೆ ಬಂದರಿಯಾ? ಮನೆಲಿ ಎಲ್ಲಾ ಉಸಾರೊಳಾ?

ಚಿಣ್ಣಕ್ಕ : ಹೌದು ಚಿಕ್ಕವ್ವಾ ನೀವು ಉಸಾರೊಳರಿಯಾ? ಸೊಸೆನ ನೋಡಿಕೆ ಬಂದೊ.

ತಾಯಕ್ಕ : ಅವ್‌ಳು ಕ್ವಾಂಬರೆಲಿ ವುಟ್ಟು ಹೋಗಿ ಮಾತಾಡ್ಸಿ.

ತಾಯಕ್ಕ(ಗಂಡಂಗೆ): ಅಲ್ಲಾ ಕೆಲ್ಸ ಎಲ್ಲಾ ಆಗ್ತಾವುಟ್ಟು–ಮೊದುವೆಗಾದ್‌ರೂ ನಮ್ಮ ಮಕ್ಕ

ಬಂದವೆಯೊ ಅಲ್ಲಾ ಎಲ್ಲಿ ಏನಾರ್ ಕೆಲ್‌ಸತೇಳಿ ನಿತ್ತವೆ ಗೊತ್ತ್‌ಲೆ. ತಮ್ಮಯ್ಯ ಪಾಪ, ಸುಳ್ಯಂದ ಬರೊಕು. ಅಂವಂಗೆ ರಜವುಟ್ಟೊ ಇಲ್ಲೊ ಅಂವನ ಪಾರ್ ಪತ್ತೆದಾರಿಕೆ ಕೆಲ್‌ಸನೆ ಹಂಗೆ. ಅಪ್ಪಯ್ಯ ಇಂದ್ ಬನ್ನೆತ ಹೇಳಿತ್ತಲ್ಲ?

ಕಯ್ಯಾಲೆಲಿ ಸುಬ್ಬಪ್ಪ ನಾರ್‌ಲಿ ಹಗ್ಗಮಾಡ್ತಾ ಕುದ್ದಿತ್ತ್.

ಸುಬ್ಬಪ್ಪ : ಯಾರೊ ಬಂದೊಲೆ ನಾಯಿ ಬಾಲ ಆಡ್ಸಿಕಂಡ್ ಬಾತ್. ಹೋ....ತಾಯಕ್ಕ ನೋಡು, ನಿನ್ನ ಮಂಜ ಬಂದೇ ಬುಡ್ತ್ ಅವಂಗೆ ನೂರ್ ವರ್ಷ ಆಯ್‌ಸಪ್ಪ! ಇದಾ ನೀರ್ ತಕಬಾ ಕಾಲ್ ತೊಳ್‌ಕಣಲಿ. (ಬಂದವುಕೆ ನೀರ್ ಕೊಡುವ ಪದ್ಧತಿ) ಅವ್ವ ಚೊಂಬುಲಿ ನೀರ್ ತಾತ್.

ತಾಯಕ್ಕ : ಈಗ ನಾನೂ ಅಪ್ಪನೂ ನಿನ್ನ ಸುದ್ದಿನೆ ಮಾತಾಡ್ತಯಿದ್ದೊ.

ಕುದುರೆ ಕಾಂಬೊದುಲೆ ಎಲ್ಲಿ ಬುಟ್ಟ?

ಅಪ್ಪಯ್ಯ : ಇನ್ನೆಲ್ಲಿ ಕುದುರೆ,?! ಆಚೆ ಬಾಣೆ ಹತ್ರ ಹಲ್ಸ್‌ನ ಮರದಡಿಲಿ ಕಟ್ಟಿ ಬಂದೆ.

(ಸೊಲ್ಪ ಹೊತ್ತು ಸುಮ್ಮನಿದ್ದ ಅಪ್ಪಯ್ಯ)

ಅಪ್ಪಯ್ಯ : ಅಪ್ಪಾ ನಾನ್ ನನ್ನ ಸುಬೆದಾರ ಕೆಲ್ಸಕೆ ರಾಜಿನಾಮೆ ಕೊಟ್ಟ್ ಬಂದೆ, ಇನ್ನ್ ಮುಂದೆ ಬ್ರಿಟಿಷ್ ಸರ್ಕಾರದ ಕೈಕೆಳ್‌ಗೆ ನಾನ್ ಕೆಲ್‌ಸ ಮಾಡ್‌ದುಲೆ. ಮನೆಲೆ ಇದ್ದ್ ಬೇಸಾಯ ಕೆಲ್‌ಸ ನೋಡಿ ಕಣೆ.

ಸುಬ್ಬಪ್ಪ : ಅಲ್ಲ ಮಂಜ, ನೀನ್ ಹಿಂಗೆ ಏಕಾಏಕಿ ಕೆಲ್‌ಸನ ಬುಟ್ಟ್ ಬಂದದ್ ನೋಡ್ರೆ ನಿನ್ನ ಮ್ಯಾಲೆ ಅವುಕೆ ಅನ್‌ಮಾನ ಬಾದುಲ್ಯಾ? ನೋಡು ನೀನ್ ಎಚ್ಚರಿಕೆಲಿ ಇರೊಕು. ಒಬ್ಬೊಬ್ಬನೆ ಜ್ಯಾಸ್ತಿ ಒಡಾಡ್ ಬಡ ಆತಲೆ?

ಅಪ್ಪಯ್ಯ : (ನೆಗಾಡಿಕಂಡ್) ಅಲ್ಲಪ್ಪ ಕೆಲ್‌ಸ ಬುಟ್ಟೆ ಅಷ್ಟೆ. ತಲೆಲಿ ಬ್ಯಾರೆ ಕೆಲ್‌ಸ ಬೇಕಷ್ಟ್‌ವುಟ್ಟು. ಸುಳ್ಯ ರೈತರಿಗೆ ಬ್ರಿಟಿಷರ ಮ್ಯಾಲೆ ಬಾರಿ ಸಿಟ್ಟ್ ಬಂದುಟು. ಉಪ್ಪು ಹೊಸೆಪು (ಹೊಗೆಸೊಪ್ಪು) ಮ್ಯಾಲೆ ತೆರಿಗೆ ಹಾಕಿದ್ ಒಂದು

ಕಡೆ ತೆರಿಗೆನ ಇನ್ನ್ ಮುಂದೆ ಭತ್ತ, ಅಡಿಕೆ, ತೆಂಗ್, ಕಬ್ಬು ಈ ದಾನ್ಯಗಳ್‌ನ ಕೊಡುದರ ಬದ್‌ಲ್ ದುಡ್ಡು ಬೇಕುತ ಎಲ್ಲಾ ಕಡೆ ಡಂಗುರ ಸಾರ್‍ಯೊಳೊ. ಅವರ ಮಾತಿಗೆ ಯಾರು ಅಡ್ಡ ಬರುವಂಗಿಲ್ಲೆ. ಅಷ್ಟ್ ದುಡ್ಡು ಕೊಡಿಕೆ ರೈತಂಗೆ ಸಾಧ್ಯವುಟ್ಟಾ? ಇಂತ ಅನ್ಯಾಯದ ಬ್ರಿಟಿಷ್ ಸರಕಾರದ ಕೆಲ್‌ಸ ನಾವ್‌ಗೆ ಯಾಕೆ? ನೀನೆ ಹೇಳಪ್ಪ.

ಸುಬ್ಬಪ್ಪ : ಅದೂ ಸೆರಿ, ಆದರೆ ಇನ್ನ್ ನಮ್ಮ ತಮ್ಮಪ್ಪನು ಹಿಂಗೆ ಕೆಲ್‌ಸ ಬುಟ್ಟ್ ಬಂದದೆ ಏನೊ? ಆದರೂ ನಿನ್ನ ಮ್ಯಾಲೆ ಬಾರಿ ಕಣ್ಣ್ ಇಸುವೆ ನೋಡು. ತಮ್ಮಪ್ಪನ ಮ್ಯಾಲೆನು ಗುಮಾನಿ ಇರ್‌ದು. ನೀರ್ ತಕಂಡ್ ಬಂದ. ಅವ್ವ ತಾಯಕ್ಕ ಹೇಳ್ದೆ.

ತಾಯಕ್ಕ : ಐಮರಲಿ ಕುದ್ದ್‌ಕಂಡ್ ಮಾತಾಡಿ. ನಿತ್ತೇ ಮಾತಾಡ್ತವಳರಿ ಅಕ್ಕವ್ವಾ, ಕುಡಿಯಕೆ ಪಾನಕನೀರ್ ತಕಬಾ– ಸೊಸೆಗೆ ಕರ್‍ದ್ ಹೇಳ್ತ್.

ನಿರೂಪಣೆ : ದೊಡ್ಡವರೆದ್‌ರ್ ಹೆಣ್ಮಕ್ಕ ಅವಶ್ಯಯಿಲ್ಲದೆ ಬರುವಂಗಿಲ್ಲೆ. ಆಗನ ಕಾಲಲಿ ಯಾರೂ ಬಂದರೂ ತಲೆಗೆ ಚೆಕ್ ವಸ್ತ್ರಕಟ್ಟಿ ಇಲ್ಲರೆ ತಲೆಗೆ ಸೆರ್‌ಗ್ ಹೊದ್ದ್ ಮೂಡಣ ಮೆಟ್ಲ್ ದಾಟ್‌ತ್ತಿದ್ದೊತ ಕೇಳ್ದಮಾತ್. ಆದರೂ ನಮ್ಮ ಹೆಣ್ಮಕ್ಕ ಆಗಂದಲೆ ಮುಂದೊರ್‌ದವು. ನೆಂಟ್ರ್ ಬಾಕನ ಮಾತಾಡ್ಸುದು ಕಾಲ್ ಮುಟ್ಟಿ ನಮಸ್ಕಾರ ಮಾಡುದು. ಸ್ವಾಬಾನೆ ಹೇಳ್ದು ಬೇಸಾಯ ಕೆಲ್ಸ ಇದರ್‌ಲೆಲ್ಲಾ ಬಾರಿ ನಿಪುಣತಿಗ.

ಕುಡಿಯಕೆ ಮಿಳ್ಳಿಲಿ ಪಾನಕನೀರ್ ತಂದ್ ಗಂಡಂಗೆ ಹೇಳ್ದೆ.

ಅಕ್ಕವ್ವ : ನೀವು ಬಂದದ್ ನೋಡಿ ಕುಸಿ ಆತ್. ಇನ್ನ್ ಮುಂದೆ ಮನೆಲಿ ಇದ್ದರೆ ಅಲಾ? ಮಾವಂಗು ಕೆಲ್‌ಸ ಮಾಡಿಕೆ ಆದುಲೆ. ಅತ್ತೆಗು ಎದ್ದ್ ಓಡಾಡಿಕೆ ಆದುಲೆ. ನೀವು ಯಾಗ ನೋಡ್ರು ದಂಡ್‌ನ ವಿಸಯ ಬುಟ್ಟ್ ಬ್ಯಾರೆ ಮಾತಾಡುದುಲೆ.!

ಅಪ್ಪಯ್ಯ : ನೋಡು, ನಾನ್ ಬಂದೆತೇಳಿ ನೀನ್ ಕುಸಿಲಿ ಎಲ್ಲವರೊಟ್ಟಿಗೆ ಹೇಳ್‌ಕಣ್‌ಬಡ. ಸುಳ್ಯಲಿ ರೈತರ್ ದಂಗೆಯೆದ್ದೊಳೊ.ಯಾವ ಸಮಯಲಿ ಬೇಕಾದ್‌ರ್ ಬ್ರಿಟಿಷರ್ ತ್ವಂದರೆ ಕೊಡುವೊ. ನಾವು ಕತ್ತಿ ಮ್ಯಾಲೆ ನಿತ್ತೊಳೊ ಗೊತ್ತುಟಾ?

ಅಕ್ಕವ್ವ : ಅಲ್ಲಾ ಕೊಡಗ್ ದೇಸದ ರೈತರ್ ಇಸ್ಟ್ ವರ್ಸ ಹಾಲೇರಿ ಅರಸರಿಗೆ ಎತ್ತ್‌ಗಳ ಬೆನ್ನ್‌ಲಿ ಭತ್ತನ ಹೇರ್ ಹೊರ್ಸಿ ತಂದ್ ಊರ್ ಪಟೇಲರಿಗೆ ಒಪ್ಸ್‌ತಿದ್ದೊತ ನೀವು ಹೇಳ್ತಾಯಿದ್ದರಿ. ಈಗ ಒಮ್ಮೆಗೆ ಅಸ್ಟ್ ದುಡ್ಡ್‌ನ ರೂಪಲಿ ತೆರಿಗೆ ಕೊಡೊಕುತ್ತಾದರೆ ರೈತರ್ ಎಲ್ಲಿಂದ ತಾದು? (ಭಟ್ಟಿ ಭತ್ತಕ್ಕೆ 1ರೂ)ಎಲ್ಲದಕ್ಕು ತೆರಿಗೆ, ಉಪ್ಪುಗೆತೆರಿಗೆ, ಹೊಸೆಮುಗೆ ತೆರಿಗೆ! ಅದೂ ದುಡ್ಡು ರೂಪಲಿ! ಮೊನ್ನೆ ನಂಗೆ ಮದ್ದ್ ಮಾಡಿಕೆ ಬಂದ ಮಾಂವ ಹೇಳ್‌ತಿದ್ದೊ. ಅವರ ಕಡೆ ತೆರಿಗೆ ಕಟ್ಟಿಕೆ ಆದುಲೆತ ಕಾಫಿ ಗಿಡಗಳ್‌ನ ಕಡ್ದ್ ಹಾಕಿ ದನ ಮೇಯಕೆ ಜಾಗ ಮಾಡ್ಯೊಳತ?

ಅಪ್ಪಯ್ಯ : ಅದ್‌ಕಾಗಿ ಈಗ ರೈತರ್‌ದಂಗೆ ಏಳ್‌ದು ನೀನೇನ್ ಹೆದ್‌ರ್‌ಬಡ ಅಪ್ಪವ್ವನೊಟ್ಟಿಗೆ ಕೂಸುನ ಲಾಯ್ಕ ನೋಡಿಕ. ಪೊನ್ನ ಮನೆಲಿವುಟ್ಟು ಧೈರ್ಯಕೆ.

ಅಕ್ಕವ್ವ : ಏನ್ ಧೈರನೊ ಏನೊ? ನಂಗಂತೂ ಹೆಂಗೆಂಗೊ ಆದೆ. ಕಾವೇರಿ ತಾಯಿ ನೀನ್ ವಳ್ಳೆದ್ ಮಾಡವ್ವ.

ನಿರೂಪಣೆ : ವಿಳ್ಯಶಾಸ್ತ್ರ ನಡಿತಾಯಿತ್ತ್. ಕಯ್ಯಾಲೆ ಮೂಲೆಲಿ ಅಪ್ಪಮಕ್ಕ ಕೂಡಿ ಮಾತಾಡ್‌ತಾ ಯಿದ್ದೊ."ಮಹಾನಾಡ್ ವೀಳ್ಯ ಎತ್ತಿ ಕೊಡುವಂತೆಯೆ" "ಒಳ್ಳೆ ಕಾರ್ಯವಂತೆವೆ" ದನಿ ಜೋರಾಗಿ ಕೇಳ್ತ್. ಜನ ಕತ್ತಲೆನ ಊಟಕೆ ಕುದ್ದೊ. ಆಕಾಶಲಿ ನಕ್ಷತ್ರಬೆಳ್ಕ್ ಹಾಲ್‌ನಂಗಿತ್ತ್. ಹೊರಗೆ ಕಿರ್ ಕಿರ್ ಹುಳ ಹುಪ್ಪಟೆಗಳ ಸದ್ದ್.

(ಅಪ್ಪಯ್ಯ ಮೆಲ್ಲಂಗೆ ಅಪ್ಪನ ಹತ್ರ ಹೇಳ್ದೆ.)

ಅಪ್ಪಯ್ಯ : ಅಪ್ಪಾ, ನಂಜಯ್ಯ ಹೇಳಿ ಕಳ್ಸಿದ ಪ್ರಕಾರ ನಾನ್ ನಾಳೆ ಕೆದ್‌ಂಬಾಡಿ ರಾಮಗೌಡ ಅವರ ಮನೆ ಸೇರೊಕು. ಚೆಟ್ಟಿ ಮತ್ತೆ ಕರ್ತು ಕುಡಿಯರೊಟ್ಟಿಗೆ ನೀವು ತಕ್ಷಣ ಪೂಮಲೆಗೆ ಹೊರ್ಟ್ ಬನ್ನಿ ಸುದ್ದಿ ಬಾರಿ ಬಿಸಿ ಬಿಸಿವುಟ್ಟು ತ್ತೇಳಿ ನಂಗೆ ಸುದ್ದಿ ಬಂದುಟು ಮುಂದೆ ಏನ್ ಮಾಡ್ದು ತೇಳ್ವ ಸುದ್ದಿಯಿರೊಕು.

ನಿರೂಪಣೆ : ಅಪ್ಪ ಸುಬ್ಬಪ್ಪಂಗೆ ಕಸಿ ಬಿಸಿ ಆತ್ ತೋರ್ಸಿಕಂಡತ್‌ಲೆ. ಸುಬ್ಬಪ್ಪ ಮತ್ತೆ ತಾಯಕ್ಕ ಇಬ್ರೊಬ್ರು ಧೈರವಂತರ್ ಕಾರಣ ಮಂಜ ಯಾಗೊಳೂ ದೊಡ್ಡ ಪದವಿಲಿದ್ದ್ ಅಲ್ಲಿನ ಕತೆಗಳ್‌ನ ಹೇಳ್‌ತಿದ್ದ್‌ದರ್‌ನ ಕೇಳಿ

ಅಂಜ್‌ತಿತ್ತ್‌ಲೆ. ಹಂಗೆ ಅದ್ ಅವರ ಮಕ್ಕಳಿಗೂ ರಕ್ತಲೇ ಬಂದಿತ್ತ್. ಹೇಳ್ದ ಕೆಲ್ಸ ಮಾಡದೆ ಬುಡ್‌ದುಲೆ. ನೆಂಟ್ರ್‌ಗಳ್‌ನ ಆಚೀಚೆ ಕಳ್‌ಸಿ ತಾಯಕ್ಕನು ಅಕ್ಕವ್ವನು ಪೊನ್ನಪ್ಪನು ಬಂದೊ.

ತಾಯಕ್ಕ : ಹಂಗೆಲ್ಲ ಹೆದ್‌ರಿ ಕುಂದ್ರಿಕೆ ಏನ್ ಇಂವ ಸಣ್ಣ ಮೊನ್‌ಸನಾ? ದಂಡ್‌ನ ಮುಕ್ಯಸ್ತ ಆಗಿ ಹಾಲೇರಿ ಅರಮನೆಲಿ ಜಮೆದಾರ ಆಗಿ ಕೆಲ್‌ಸ ಮಾಡ್‌ದ್ ತೇಳ್ರೆ ಸಣ್ಣ ಕೆಲ್ಸ ಅಲ್ಲ, ಆದರೂ ನೀನ್ ಬ್ರಿಟಿಷರ್ ಕೊಟ್ಟ ಅಷ್ಟ್ ದೊಡ್ಡ ಸುಬೆದಾರ ಪದವಿನ ಬುಟ್ಟ್ ಬಂದದ್ ನಂಗೆ ಕುಸಿ ಕಾಂಬೊದುಲೆ ಅಪ್ಪಯ್ಯ, ಬ್ರಿಟಿಷರ್ ನಿನ್ನ ನಂಬಿ ಕೊಟ್ಟ ಕೆಲ್‌ಸನ, ನೀನ್ ನಿಭಾಯಿಸಿಕಂಡ್ ಹೋದು ನಿನ್ನ ಕೆಲ್‌ಸ ಸರ್ಕಾರದ ಕೆಲ್‌ಸತ್ತೇಳ್ರೆ ಅದ್ ದೇವ್‌ರ ಕೆಲ್‌ಸ. (ನೀತಿ ಅವ್ವಂದ್).

ಅಪ್ಪಯ್ಯ : ಅವ್ವಾ, ನಿಂಗೆ ಅದೆಲ್ಲ ಗೊತ್ತಾದುಲೆ.

ಅವ್ವ : ನೀನ್ ಹುಟ್ಟಿದ ಜಾತಕಲಿ ನೀನ್ ದೊಡ್ಡ ಹೆಸ್‌ರ್ ಪಡ್‌ದಿಯ ತೇಳ್ ಕಂಡ್ ನಮ್ಮ ಅಗಸ್ತೇಶ್ವರ ದೇಸ್ಥಾನದ ಅರ್ಚಕರ್ ಜಾತಕಲಿ ಹೇಳಿದ್ದೊ. ಇದ್ ನಂಗೆ ಮರ್‌ತೇ ಹೋಗಿತ್ತ್. ಈಗ ಗ್ಯಾನತ್ ನೋಡು.

ಸುಬ್ಬಪ್ಪ : ಅದ್‌ಕೆ ತಾನೆ ನಾನ್ ಮಾಂವ ನೊಟ್ಟಿಗೆ ಹೋಗಿ ಒಂದು ಸೇರ್ ಅಕ್ಕಿ, ವಾಲೆಬೆಲ್ಲ 6 ಕಾಸ್ ದುಡ್ಡು ಕೊಟ್ಟ್ ಬಂದೆತ ಹೇಳ್‌ದ್ ನಿಂಗೆ ಮರ್‌ತ್ ಹೋತಾ?

ತಾಯಕ್ಕ : ಹೌದು, ಹೌದು ನೀವ್ ಹೇಳ್ದ್ ಈಗ ಗ್ಯಾನಾತ್.

ನಿರೂಪಣೆ : ಧೈರ ಪ್ರಾಮಾಣಿಕತೆ, ಹುಟ್ಟುಂದಲೆ ಬಂದ ಅವೆಲ್ಲವು ಆ ಇರ್‌ಳ್ ಮಾತಾಡಿ ಕಂಡೇ ಕಳ್‌ದೊ. ಎರಡ್‌ದಿನ ಮನೆಲೆ ಇದ್ದ ಅಪ್ಪಯ್ಯಂಗೆ ಮನೆಲೆ ಇರಿಕು ಆಗದೆ ಏನೂ ಮಾಡಿಕೂ ಆಗದೆ ಮನ್ಸ್‌ಲಿ ಲೆಕ್ಕಚಾರ ಹಾಕ್ತಾಯಿತ್ತ್. ದಂಗೆನ ಸುದ್ದಿ ಬ್ರಿಟಿಷರಿಗೆ ಗೊತ್ತಾದರೆ ಸುಮ್ಮನೆ ಬುಡ್‌ದುಲೆ. ಅವು ಕೊಡುವ ಗಲ್ಲ್ ಶಿಕ್ಷೆನ ನಾನ್.......... ಅನ್‌ಭವಿಸಿಕೆ ಆದೆ! ಹಂಗೆತ ಅಂವ ಮನೆಂದ ಆಚೆಲಿ ಯಾರೂ ಕಾಣದ ಗುಂಡಿ ಹತ್ರ ಹೋಗಿ ಕುದ್ದಿತ್ತ್.

ಬಾಗ್‌ಲ್ ಸದ್ದ್ ಕೇಳ್ತ್. ಆ ಸದ್ದ್ ಅಪ್ಪಯ್ಯಂಗು ಕೇಳ್ತ್ ಮಾತ್ ಆಲ್ಸಿತ್. ಯಾರ್ ಬಂದಿರ್‌ವೊ? ಈ ನಟ್ಟ್‌ಇರ್‌ಳ್ ಯಾರ್ ಬಂದಿರುವೊ ಬಂದವು ಜೋರಾಗಿ ಹೇಳ್ದೊ.

ಬ್ರಿಟಿಷ್‌ಸೈನಿಕರ್: ಅಪ್ಪಯ್ಯ ಎಲ್ಲಿ?

ಸುಬ್ಬಪ್ಪ : (ಬಾಗ್‌ಲ್ ತೆಗ್ದ್ ನೋಡ್‌ಕನ ಜೀವ ನಡ್‌ಗಿತ್. ಬಾಯಿ ತಡ್ರ್ಸಿ) ಅಂವ ಇಲ್ಲಿಲ್ಲೆ. ಬಾರದೆ ಎಷ್ಟೊ ದಿನ ಆತ್ ಹಂಗಾಗಿ ಅಂವನ ಅವ್ವ ಜೊರಬಂದ್ ತಲೆಸುತ್ತಿ ಮಲ್‌ಗಿಟ್ಟು ನೋಡಿ.

ಬ್ರಿಟಿಷ್‌ಸೈನಿಕರ್: ಹಂಗಾರೆ ಅಂವ ಎಲ್ಲಿ ಹೋತು ? ಅಂವ ಕೆಲ್‌ಸಕ್ಕೆ ರಾಜಿನಾಮೆ ಕೊಟ್ಟುಟ್ಟು. ಸಾಹೇಬರ್ ತಕ್ಷಣ ಬಾಕೆ ಹೇಳಿ ಕಳ್‌ಸೊಳೊ. ಸರಿ ನಾವು ಹೊರ್ಟವೆ ಎಚ್ಚರ! ಅಂವ ಬಂದರೆ ನಮ್ಮ ಸರ್ಕಾರಕ್ಕೆ ತಕ್ಷಣ ತಿಳಿಸಿ. ಸ್ಟುಪಿಡ್ Poor fellows.

ಮನೆಯವರ ಎದೆ ಡಗಡಗ ಹೊಡ್‌ಕಣ್‌ತಾಯಿತ್ತ್. ಅಂತೂ ಅಪ್ಪಯ್ಯ ಇಲ್ಲೇ ಇದ್ದಂವ ಎಲ್ಲಿ ಹೋತುತ ಗ್ಯಾನ ಮಾಡ್‌ಕಂಡ್ ಕುದ್ದಿರ್‌ಕನ ಅಂವ ಎಲ್ಲೊ ಹೋದಂವ ಒಳಗೆ ಬಾತ್.

ಅಪ್ಪಯ್ಯ : ಇನ್ನ್ ಇಲ್ಲಿದ್ದರೆ ನೀವ್‌ಗೆ ತೊಂದರೆ ಅಪ್ಪ. ಹಂಗಾಗಿ ನಮ್ಮ ಕೂಟುನವು ಪೂಮಲೆ ಕಾಡ್‌ಲಿ ವಳೊ. ನಾನ್ ಇಂದ್ ಇರ್‌ಳೇ ಅಲ್ಲಿಗೆ ಹೋನೆ.

ಸುಬ್ಬಪ್ಪ : ನಿನ್ನ ಕೂಟುನ ಚೆಟ್ಟಿ ಕುಡಿಯ ಮತ್ತು ಕರ್ತುಕುಡಿಯರ್ ನಿಂಗೆ ಎಲ್ಲಿ ಸಿಕ್ಕುವೆ ?

ಅಪ್ಪಯ್ಯ : ಅವು ಸಾಮಾನ್ಯಾಗಿ ಕುಂದುರುಮೊಟ್ಟೆಲಿ ಒಂದು ಕಡೆ ರೋಜಿ ಬಳ್ಳೆ ಹತ್ರ ನಿಲ್ಲುವ ವ್ಯವಸ್ಥೆವುಟ್ಟು. ಅವುನು ಅಲ್ಲಿಗೆ ಬಂದವೆ.

ಸುಬ್ಬಪ್ಪ : ದೇವ್ರು ನಿಮ್ಮನ ಕಾಪಾಡಲಿ. ಅಪ್ಪ ದೀಪ ಹೊತ್ಸಿ ದೇವ್‌ರ್‌ನ ಬೇಡಿಕಂಡ್ ಇವುಕೇನ್ ಕಷ್ಟ ಆಗದರೆ ಇಂವ ಬಂದ ಮ್ಯಾಲೆ ಜೋಡು ಗುಂಡ ಕಟ್ಟಿ ಹರ್ಸೆವೆ (ಹರಿಸೇವೆ) ಮಾಡ್‌ಸಿನೆತ ಕುಲದೇವ್ರಿಗೆ ಹರ್‌ಕೆ ಮಾಡ್ತ್. ಅವ್ವ ಬಾಳೆಲೆ ಬಾಡ್‌ಸಿ ಅನ್ನದ ಬುತ್ತಿ ಕೊಡ್ತ್.

ನಿರೂಪಣೆ : ಹೊರ್ರೊ ರಾತಾರಾತ್ರೆ. ಕಲ್ಲ್ ಮುಳ್ಳ್ ದಾರಿಲೆ. ಜಿರ್ ಜಿರ್‌ತೇಳುವ

ಹುಳ ಹುಪ್ಪಟೆಗ, ಗೂಂ ಗೂಂ ತೇಳ್‌ವ ಗುಮ್ಮನ ಸದ್ದ್. ಮರಂದ ಮರಕ್ಕೆ ಹಾರ್‌ವ ಕಾಡ್‌ಬೆಕ್ಕ್‌ಗ ಮೂಡು ಬೊಳಿ ಬಾಕೆ ಮುಂದೆ ಪೂಮಲೆಗೆ ಸೇರೊಕು ಕೆದ್‌ಂಬಾಡಿ ರಾಮಗೌಡನ ಮನೆಗೆ ಎತ್ತೊಕು.

ಗ್ಯಾನ ಮಾಡಿಕಂಡಿರ್‌ಕನ ಗೊರ್‌ಗೊರ್‌ತೇಳ್‌ವ ಕಾಡ್ ಹಂದಿಗಳ ಹಿಂಡ್ ಎದ್‌ರಿಗೆ ಸಿಕ್ಕಿದ್ ಇವುಕೆ ಅವಲಕ್ಷಣ ಆತ್‌ತ ಮನ್ನಿಗಾತ್.

ನಿರೂ : ಕೆದಂಬಾಡಿ ರಾಮಗೌಡನ ಮನೆಲಿ ಸೇರುವೆ ಅದರ್‌ನ ನಾಟಕ ರೂಪಲಿ ತಯಾರ್ ಮಾಡುವ ಪ್ರಯತ್ನಯಿದ್. ಕ್ರಾಂತಿಕಾರರ ರೈತದಂಗೆ ಯಾಕಾಗಿ ಸುರಾಗಿ ಹೆಂಗೆ ಮತ್ತೆ ಯಾವ ರೀತಿ ಅಂತ್ಯ ಕಂಡತ್ ತೇಳ್ದು ಇದರ ಮುಕ್ಯಾಂಸ. ಮುಂದೆನ ತಲೆಮಾರಿಗೆ ತಿಳ್ಸುದೇ ಉದ್ದೇಶ.

ಈಗ ನಾವು ಉಳ್ಳಾಲಲಿ ನಡ್ದ ಸುಳ್ಯದ ರೈತದಂಗೆನ ಮೂಲ ತಿಳಿಯೊನ. ಬ್ರಿಟಿಷ್ ಕಂಪೆನಿಗೆ ಎದ್‌ರ್ ಹೋರಾಡ್ದ ಹಲವಾರ್ ಗೌಡ ಮುಕಂಡರೊಟ್ಟಿಗೆ ಎಲ್ಲಾ ಜಾತಿ ಜನಾಂಗದವು ಸೇರಿದ್ದವೆ. ಈ ಕ್ರಾಂತಿ ವೀರರ್‌ಲಿ (13) ಹದಿಮೂರು ಜನ ಅರ್ಧ ಆಯ್‌ಸಲೆ ಪ್ರಾಣ ಕಳ್‌ಕಂಡ್‌ವು. ಹುತಾತ್ಮರಾದವು! ಇದ್ ಇತಿಹಾಸಲಿ ಹೆಂಗೆ ನಡ್ತ್‌ತೇಳ್ದು ತಿಳಿಯೊಕು. ಆಗನ ಒಗ್ಗಟ್ಟ್ ವೀರತನ ತ್ಯಾಗನ ತಿಳಿಯೊಕು.

ಹಾಲೇರಿ ಅರಸರ ಆಗನ ಕೊಡಗ್ ವಿಶಾಲ ಕೊಡಗ್ ದೇಸ ಆಗಿತ್ತ್. ಇದ್ ಬೆಳ್ಳಾರೆ ಪುತ್ತೂರುಂದ ಶ್ರೀರಂಗ ಪಟ್ಟ್‌ಣಕ್ಕೆ ಮುಟ್ಟ ಇತ್ತ್. ಉಪ್ಪು ಹೊಸೆಪುಗೆ ಬ್ರಿಟಿಷರ್ ತೆರಿಗೆ ವಿದಿಸಿದ್, ಬ್ರಿಟಿಷರ್ ಅವರ ಆಡಳಿತದ ಅನುಕೂಲಕ್ಕಾಗಿ ಸುಳ್ಯನ ಮಂಗ್‌ಳೂರಿಗೆ ಸೇರ್ಸಿದ್. ಧಾನ್ಯದ ಬದ್‌ಲಿಗೆ ಹಣನ ತೆರಿಗೆ ರೂಪಲಿ ಕೊಡುದು ಇದ್ ಸಿಟ್ಟ್‌ನ ಮೂಲ ಕಾರಣ ಆತ್. ಅಲ್ಲಿಗೆ ಮುಟ್ಟ ಸುಳ್ಯದ ರೈತರ್ ಭತ್ತನ ಎತ್ತ್‌ಗಳ ಬೆನ್ನ್‌ಮ್ಯಾಲೆ ಹೇರ್ ಹಾಕಿ ಬಂದ್ ತೆರಿಗೆ ರೂಪಲಿ ಭತ್ತನ ಊರುಪಟೇಲರಿಗೆ ತಂದ್ ಕೊಡ್ತಾಯಿದ್ದೊ. ಅವು ಉಗ್ರಾಣಲಿ ಇರ್ಸಿ ಕೊಳ್ತಾಯಿದ್ದೊ. ಇದ್ ಹಿಂದೆಂದ ಬಂದ ಪದ್ದತಿ.

ಹಿಂಗೆ ಸಿಟ್ಟ್‌ಗೆದ್ದ ಸುಳ್ಯದ ರೈತರ್ ಕೆದ್‌ಂಬಾಡಿ ರಾಮಗೌಡನ ಮುಂದಾಳ್‌ತನಲಿ ಅವನ ಮನೆಲಿ ಸೇರುವೆ. ಈ ಸುದ್ದಿ ತಿಳಿದ್ ಗುಡ್ಡೆ ಅಪ್ಪಯ್ಯಗೌಡ ಅಂವ ರಾಜಿನಾಮೆ ಕೊಟ್ಟ್ ಮನೆಗೆ

ಬಾತ್.ಬ್ರಿಟಿಷರ್ ಕೊಡಗಿಗೆ ಬಾಕನ ಅವರ್‌ನ ಆದರ ಗೌರವಂದ ಕೊಡಗ್‌ನ ಅರಸರ್ ಕಂಡೊ, ಅವು ಇಲ್ಲಿನ ಪ್ರಕೃತಿ ಪೊರ್ಲುಗೆ ಮರ್‌ಳಾಗಿ ಒಳಗೊಳಗೆ ಕುತಂತ್ರ ಹೂಡಿಕೆ ಸುರುಮಾಡ್ತಾಯಿದ್ದೊ. ಹಂಗೆ ಬ್ಯಾಟೆ ವಿಚಾರವಾಗಿ ಆಗಾಗ ಮಡಿಕೇರಿಗೆ ಬರ್‌ವ ಕಾರ್ಯಕ್ರಮನ ಮಡ್ಕಂಡ್ ಎಲ್ಲಾ ವಿಸಯನ ತಿಳ್‌ಕಂಡೊ. ಆಗ ಅರಸ ಆಗಿದ್ದ ಲಿಂಗರಾಜಂಗೆ ಬ್ಯಾಟೆತೇಳ್ರೆ ಎಲ್ಲಿಲ್ಲದ ಹುಚ್ಚು. ಮತ್ತೆ ಚಿಕ್ಕ ವೀರರಾಜನ ಬಗ್ಗೆ ಆಡಳಿತಲಿ ಸ್ವಲ್ಪ ಬೇಜವಾಬ್ದಾರಿ ಮತ್ತೆ ಹೆಚ್ಚಾಗಿ ರಾಣಿಯರೊಟ್ಟಿಗೆ ಕಾಲಕಳಿಯೊದರ್‌ನ ತಿಳ್ಕಂಡ್ ಇಂವನ ಕೊಡಗ್‌ನ ಸಿಂಹಾಸನಂದ ಇಳ್‌ಸುವ ಪ್ರಯತ್ನ ಒಂದನೆದಾಗಿ ಮಾಡ್ಡೊ ಈ ಬ್ರಿಟಿಷರ್.

ಅರಣ್ಯಕಾಡ್ ಹೆಂಗಿತ್ತ್?

(ಮಡಿಕೇರಿಂದ ಪೂಮಲೆಗೆ ಹೋಗ್‌ವ ದಾರಿ)

ದೊಡ್ಡ ಸಣ್ಣ ಹುಳ ಹುಪ್ಪಟೆಗಳ ಕರ್‌ಕರ್, ಚಿರ್‌ಚಿರ್ ಸದ್ದ್. ಬೊಳಿಕಾಣದಷ್ಟ್ ಕತ್ತಲೆ. ಹಗ್‌ಲ್‌ಲಿ ನಡೆಕಾಗದಷ್ಟ್ ಕಾಡ್‌ದಾರಿ. ಮುಂದೆ ಹೋಗೊವು ಬಡಿಗೆ ದೊಣ್ಣೆ ಬೀಸಿಕಂಡ್ ದಾರಿ ಮಾಡ್ತಾ ಹೋಕು.

ಹೌದು! ಅರಣ್ಯ ತೇಳ್ಟ ಮ್ಯಾಲೆ ದಾರಿ ಮಾಡೊವು ಯಾರ್? ನೀರ್ ಕುಡಿಯಕೆ ಕಾಡ್ ಹಂದಿಗಳೊ, ಕಡ್‌ವೆನೊ, ಕುರೆಂಗಿಗಳೊ, ಮುಳ್ಳು ಹಂದಿಗಳೊ ಹೋಗುವ ದಾರಿ ಸಮ್‌ದದ್ ಮಾತ್ರ ಕಂಡದೆ! ಸಾಮಾನ್ಯಾಗಿ ಮನ್‌ಸರ್ ಕಾಡ್‌ಲಿ ಈ ಪ್ರಾಣಿಗಳ್‌ನ ಬ್ಯಾಟೆ ಆಡ್‌ತಿದ್ದೊ.

ಅದ್‌ಹೆಂಗೆತೇಳ್ರೆ :

ಗುರಿನೋಡಿ ಕಲ್ಲ್ ಹೊಡಿಯೊದು, ಕವಣೆಕಲ್ಲ್, ಸಿಡಿಹಾಕುದು ಉರ್‌ಲ್ ಹಾಕುದು, ಭರ್ಜಿ, ಈಟಿ, ಈಚೆಗೆ ಕೇಪ್‌ನ ಕೋವಿ, ಅದ್‌ಕೆ ನಾಡ್ ಮದ್ದ್ ತುಂಬ್‌ಸಿ ಗುಂಡು ಹಾರ್‍ಸುದು ಹಿಂಗೆ ಮಾಡ್ತಾಯಿದ್ದ ಅಂದ್‌ನ ಕಾಲಲಿ ಬ್ಯಾಟೆ ಆಡ್ದು ಆಹಾರಕ್ಕೂ, ಮನರಂಜನೆಗು ಆಗಿತ್ತ್.

(ಮನ್ಸಲಿ) ಈಗೆಲ್ಲ ಬ್ಯಾಟೆಗೆ ಹೋದರೆ ಜೀವಮಾನ ಇಡೀ ಜೈಲ್ ಒಳಗೆನೆ ಇರ್‌ಕಾದೆ. ಆಗ ಹಂಗಲ್ಲ. ಬ್ಯಾಟೆ ಮನ್‌ಸನ ಜೀವನದ ಅಂಗ ಆಗಿತ್ತ್. ಇದರ್ಲಿ ಬ್ಯಾಟೆಗಾರನ ಕೈಚಳಕ ಶೂರತನ ತೋರ್ಸ್ತಾಯಿತ್ತ್.

ನಿರೂಪಕಿ : ಆದರೆ ಕೈಲಿ ಸೂಟೆ (ದೊಂದಿ) ಹಿಡ್ದ್ ನಡೆವ ಆ ಕಠಿಣ ಶ್ರಮ ಏನಾರ್ ಅನ್‌ಭವ ಆದವಂಗೆ ಮಾತ್ರ ಗೊತ್ತು. ಪ್ರಾಣಿಗಳ ಓಟ, ಮರನ ಸುತ್ತಿ ಮಲ್‌ಗಿದ ಹೆಬ್ಬಾವು, ಮುಳ್ಳ್‌ನ ಕೆದ್‌ರಿ ಗುರುಗುಟ್ಟಿ ನೋಡುವ ಮುಳ್ಳಂದಿ, ಅಲ್ಲಲ್ಲಿ ಕಾಡ್ ಹಂದಿಗಳ ಗೊರ್‌ಗೊರ್ ಸದ್ದ್, ಕಾಡ್ ಕೋಳಿನ ತೆಕ್ಕಟ, ಕ್ವಾಂಬಕ್ಕಿ ಹೊಟ್ಟಕ್ಕಿಗ ಹಾರ್‌ದು, ಭೀಮ ರಾಜ ಹಕ್ಕಿನ ಇಂಪುನ ಹಾಡ್, ಆರ್ಭಟದ ಹುಲಿನ ಅಬ್ಬರ ಇದೆಲ್ಲ ಮಾಮೂಲಾಗಿತ್ತ್. ಆದರೆ ಮರಂದ ಮರಕ್ಕೆ ರಾತ್ರೆ ಹಾರ್‌ವ ಕಬ್ಬೆಕ್ಕ್, ಪಾಂಜಗ, ಹಗಲ್ ಹಾರ್‌ವ ಕಾಡ್ ಕಪಿಗಳ್‌ನ ನೋಡಿಕೆ ಇದೆಲ್ಲ ಎಸ್ಟ್ ಲಾಯ್ಕನೊ ಅಷ್ಟೇ ಭಯದ ನೆಲೆನ ಕಾಡ್! ದೊಂದಿ ಹೊತ್ತ್‌ಸಿ ಕೈಲಿ ರಕ್ಷಣೆಗೆ ದೊಣ್ಣೆನೊ ಬಡಿಗೆನೊ ಆಧಾರಕ್ಕೆ ಕೈಲಿ ಬೇಕಾಗಿತ್ತ್ ಅಂದ್.

ಅಂದ್‌ನ ದಿನಗ: ದೂರ ದೂರ ಕಾಡೊಳಗೆ ಹುಲ್ಲ್‌ನ ಮನೆಗ. ಮನೆ ಮುಂದೆ ಬ್ಯಾಟೆನಾಯಿಗ! ಆ ಕಾಲಲಿ ಯುದ್ಧದ ಭೀತಿಯಿತ್ತ್ ಕಾಡ್‌ಗೆ ಹೋದವು ವಾಪಾಸ್ ಬಂದವೆನೊ ಇಲ್ಲೆ ಗೊತ್ತ್‌ಲೆ. ಒಟ್ಟು ಮನೆ (ಐನ್‌ಮನೆ) ಆಲ್‌ಪರೆಗ (ದೊಡ್ಡ ಮನೆ ಸುತ್ತು ಸಣ್ಣ ಮನೆಗ) ಸುತ್ತು ಮುತ್ತು ಕೂಡಿ ಬಾಳ್‌ದು ಇದ್ ಆ ಕಾಲದ ರೈತ ಜನರ ದಂಗೆನ ಕತೆ.

ಅಧ್ಯಾಯ–2

(ಪೂಮಲೆ)

ಚೆಟ್ಟಿಕುಡಿಯ : ಅಣ್ಣಾ ಪೂಮಲೆ ಹತ್ರ ಬಾತ್ ನಾವು ಇಲ್ಲಿ ಹೊಳೆಲಿ ಮೊಕತೊಳ್ದ್ ಪಾರೆಕಲ್ಲ್‌ಲಿ ಕುದ್ದ್ ಬುತ್ತಿ ಉಣೊಕು. ಈ ದಾರಿ ಇಲ್ಲಿಂದ ಸೀದಾ ಕೆದ್‌ಂಬಾಡಿ ಮನೆಗೆ ಹೋದೆ.

ಗುಡ್ಡೆಮನೆ ಅಪ್ಪಯ್ಯಗೌಡ ಅವನ ಅಂಗರಕ್ಷಕ ಚೆಟ್ಟಿ ಮತ್ತೆ ಕರ್ತುಕುಡಿಯರ್ ಪೂಮಲೆ ಕಾಡ್‌ಲಿ ದಾರಿ ಸಮ್‌ಸಿಕಂಡ್ ಬಂದ್ ಕೆದ್‌ಂಬಡಿ ರಾಮಗೌಡನ ಮನೆ ತಲ್‌ಪುವೆ. ದೂರಕೆ ಮುಟ್ಟ ಅಲ್ಲಿಂದ ದೊಂದಿ ಬೆಳ್ಕ್ ಕಾಣಾವುಟ್ಟು, ರಾಮಗೌಡನ ಆಚೆಮನೆಲಿ ಮೊದುವೆ ಅಂದ್‌ನ ಕಾಲಲಿ ದಿಬ್ಬಣ ಇಳಿಯೊದು ರಾತ್ರೆ. ಕಾಲ್ನಡಿಗೆ ದಾರಿ ಅಂಗಳ ತುಂಬ ಜನ ಮೊದುವೆ ಮುಗ್ದ್ ಹೆಣ್ಣ್ ಇಳ್‌ಸಿಕೆ ಹೆಣ್ಣ್ ಗಂಡ್‌ವಯಿಸಿ ಕೊಡ್ತಾವಳೊ.

(ಆಗೆಲ್ಲ ಮೊದುವೆ ತೇಳ್ರೆ 8ದಿನ ನಡಿಯೊದು ಮನೆತುಂಬ ನೆಂಟ್ರ್‌ಗ. ಬಂದ್ 8 ದಿನ ಇರ್‌ದು.)

ರಾಮಗೌಡನ ಆಪ್ತ ಗಂಡ್‌ಸ್ ತಿಮ್ಮಣ್ಣ ಹೇಳ್ತಾವುಟ್ಟು :

ತಿಮ್ಮಣ್ಣ : ಹೆಣ್ಣ್ ಮಕ್ಕೆಲ್ಲ ಕುದ್ದ್‌ಕಂಡ್ ಮಾತಾಡ್ದು ಅಲ್ಲ. ರಾತ್ರೆಗೆ ತುಂಬ ಕೆಲ್‌ಸವುಟ್ಟು. ದೊಡ್ಡ ದೊಡ್ಡ ಮುಕಂಡರ್ ಬಂದವೆ. ಅವುಕೆಲ್ಲ ಅಡ್‌ಗೆ ಆಕು. ನಿನ್ನೆನೆ ಬಾಳೆಲೆ ಕೊಯ್ದ್ ಕೊಟಗೆಲಿ ಮಡ್‌ಗ್ಯೊಳೊ.

ಕೂಸಕ್ಕ : ಮೊದುವೆ ಗಲಾಟೆಲಿ ಸೆರಿ ನಿದ್ದೆ ಮಾಡಿಕೆ ಆತ್‌ಲೆ ಅಣ್ಣ. ನಿಮ್ಮ ಮಾತ್‌ಕೇಳ್‌ಕನ ಶತ್ರ್‌ಗಳ ಸುಳಿ ಸಿಕ್ಕಿದಂಗುಟ್ಟು. ನನ್ನ ಎದೆ ಡಬ್ ಡಬ್ ಹೊಡಿತಾವುಟ್ಟು.

ತಿಮ್ಮಣ್ಣ : ಬನ್ನಿ ಕೂಸಕ್ಕ, ಸೌದೆ ಎಳ್ದ್ ಕೊಟ್ಟನೆ. ನೀವು ಹೆಣ್ಣ್ ಮಕ್ಕ ಸೇರಿ ಅದರ ತಂದ್ ಕಿಚ್ಚಿ ಹೊತ್ಸಿ. ಮಧ್ಯಾನ ಅಡ್‌ಗೆ ಮಾಡ್ದ ವಲೆ ಇನ್ನೂ ಆರ್‌ತ್‌ಲೆ. ದೊಡ್ಡ ಕಡಾಯಲಿ ನೀರ್ ಮೊಡ್ಗಿ. ನೀರ್ ಲಾಯ್ಕ ಕಾಯಕನ ನೀರ್‌ಗೆ ವಾಲೆ ಬೆಲ್ಲ ವಳ್ಳೆ ಮೆಣ್ಸ್‌ಹೊಡಿ ಹಾಕೊಕು. ಲಾಯ್ಕ ಕೊದಿಯಲಿ ಒಂದು ಮಾನ ವಳ್ಳೆಮೆಣ್ಸ್ ಹೊರ್ದ್ ಕಲ್ಲ್‌ನ

ನೆರ್‌ಗುಳಿಗೆ ಹಾಕಿ ವಣ್‌ಕೆಲಿ ಕುಟ್ಟಿ ಹೊಡಿ ಮಾಡ್ ಕಣಕು. ಸೊಲ್ಪಹೊಡಿ ಮಡ್ಕಣಿ ಬೇಕಾದೆ. ಹೇಳ್‌ದಂಗೆ ಮೆಣ್‌ಸ್‌ನ ಕುಟ್ಟಿ ಆದಂಗೆ ಸಣ್ಣ ಕಣ್ಣ್ ವನೆಲೆಲಿ ಒಂಚಿಕಣಿ, ಇಲ್ಲರೆ ಬಾಯಿಗೆ ಸಿಕ್ಕುದು ಇದ್ ಪಾನಕ, ರಾತ್ರೆ ಸೀತ ನೆಗಡಿ ಆಗದಂಗೆ ಹೇಳ್ದ್ ನೀವ್‌ಗೆ ಗೊತ್ತಾತಲೆ.?

ಕೂಸಕ್ಕ : ಗೊತ್ತಾತಣ್ಣ, ಅಲ್ಲಾ–ಕಾಲ್‌ತೊಳೆಕೆ ಹಂಡೆಗೆ ನೀರ್ ತುಂಬ್‌ಸೊಕು. ತಪ್ಪಲೆ ಮಡ್ಗೊಕು. ಕುಡಿಯಕೆ ದೊಡ್ಡ ಚಿಪ್ಪಿಗಳ ಕೆರ್ದ್. ಪೊರ್ಲು ತೊಳ್ದ್ ಕಮ್‌ಚಿ ಮಡ್ಗಿ ಚಳ್ಳೆ ಕಟ್ಬೊಕು. ಇದೆಲ್ಲ ಗಂಡ್ ಜೆನರ ಕೆಲ್‌ಸ.

ತಿಮ್ಮಣ್ಣ : ಚಳ್ಳೆ ಕಟ್ಟಿಕೆ ಆಕಿಲೆ ಈಗ. ದೊಡ್ಡ ಕಾಯಿಹೆರ್‌ದ ಚಿಪ್ಪಿನ ತೊಳ್ದ್ ಲಾಯ್ಕ ಕಮ್‌ಚಿ ಮಡ್ಕಂಡರೆ ಸಾಕ್. (ಕುಡಿಯಕೆ ಈಗನ ಹಂಗೆ ಗ್ಲಾಸ್‌ಯಿತ್ತ್‌ಲೆ)

ಕೂಸಕ್ಕ : ಇನ್ನೆಂತ ಕೆಲ್‌ಸವುಟ್ಟು ? ಅಷ್ಟೇ ತಾನೆ?

ತಿಮ್ಮಣ್ಣ : ಇಂದ್ ರಾಮಗೌಡನ ಮನೆಲಿ ಮೊದುವೆ ತೇಳಿ ಸುದ್ದಿ ಮಾಡ್ಯೊಳೊ ಬ್ರಿಟಿಷರಿಗೆ ಇಲ್ಲಿ ಜನ ಸೇರ್‌ದು ಗೊತ್ತ್‌ಲೆ. ದೊಡ್ಡ ದೊಡ್ಡ ಮುಕಂಡರ್‌ಗ ಇಲ್ಲಿಗೆ ಬಂದವೆ. ಯಾರಿಗೂ ಸುದ್ದಿ ಮಾಡ್‌ಬೇಡಿ.

ಹೆಣ್ಮಕ್ಕ : ಹೋ.......................!!

ಹೆಣ್ಮಕ್ಕ ಜೋರಾಗಿ ಸ್ವಾಬಾನೆ ಪದ ಹೇಳ್‌ಕಂಡ್ ಕೂಸುನ ಒಚ್ಚ್‌ತಾಯಿರಿ (ಗೌಡ್‌ಗಳ ಸ್ವಾಬಾನೆ ತೇಳ್ರೆ ಆಗಳೆ ಪ್ರಖ್ಯಾತಿ.)

ಆತಾ, ನಾ ಹೇಳ್ದ್ ಅರ್ತ ಆಗಿರ್‌ದು ಇಂದ್ ರಾತ್ರೆ ಎಲ್ಲಾ ತಯಾರ್ ಮಾಡ್ಕಂಡ್ ನಾಳೆ ಬಾವುಟಗುಡ್ಡೆ ಕಡೆ ಬಾವುಟ ಹಾರ್‌ಸಿಕೆ ದಂಡ್ ಹೋದೆ. ನಮ್ಮ ರೈತ ಸೈನಿಕರ್ ಅದ್ಕಾಗಿ ಬಾರಿ ಹುರ್‌ಪ್ಪುಲಿ ಕುದ್ದೊಳೊ. ನಾಳೆ ಹೊತಾರೆಗೆ ಮುಂದೆ ಹೆಣ್ಮಕ್ಕ ಎದ್ದ್ ಅಂಗಳಲಿ ರಂಗೋಲಿ ಬರ್‌ದ್ ಮುಕಂಡರಿಗೆ 5–7 ಆರತಿ ತಕಂಡ್ ಹಾಡಿ ಹೋಗ್ತಾಯಿರೊಕು ಆತಲೆ ತಿಮ್ಮಕ್ಕ?

ತಿಮ್ಮಕ್ಕ : ಹಂ...ಹ್‌ಂ...ಆತ್ ಹಂಗೆ ಮಾಡುವೆ ನೀವು ಹೇಳ್ ದಂಗೆ ಆರತಿ ತಂದವೆ ಅಣ್ಣ.

ನಿರೂಪಕಿ : ಹೆಣ್ಣ್ ಮಕ್ಕಳಿಗೆ ಪದ ಹೇಳ್ದು ತೇಳ್‌ಕನ ಕುಸಿ ಆತ್. ಆದರೂ ಗಂಡ್‌ಜನ ದಂಡ್ ಸೇರ್‌ಕಂಡ್ ಹೊರ್‌ಟೊಳೊ. ಯಾರ‍್ಯಾರ ಕುಂಕುಮ ಭಾಗ್ಯ ಹೆಂಗುಟ್ಟೋ? ಆದಿಶ್ರೀ ಕಾವೇರಿ ತಾಯಿ.., ಶೃಂಗೇರಿ ಶಾರದಾಂಬೆ ನಮ್ಮ ಕುಂಕುಮ ವಳ್ಸಿಕೊಡಿ ತಾಯಿಕಳೆ.......ತಡ್ರ್‌ಸಿಕಂಡ್ ದೀಪ ಮಡ್ಗಿ ಕಾಯಣ್ಣೆ ಹೊಯ್ದೊ. ಕಂಚ್‌ನ ಲಕ್ಷ್ಮೀ ದೀಪ ತುಂಬಿ ದೀಪಲಾಯ್ಕ ಬೆಳ್‌ಗಿತ್. ಕೆದ್‌ಂಬಡಿ ಕೂಸಕ್ಕನು ನಂಜಯ್ಯನ ಹೆಣ್ಣ್ ಮಾದೇವಿನು ಪ್ರಾತನೆ ಮಾಡಿಕಂಡೊ.

ಮಾದೇವಿ : (ಗಂಡನೊಟ್ಟಿಗೆ)
ನಮ್ಮ ತಾಳಿ ಭಾಗ್ಯ ಈ ನಾಡ್‌ನ ಕಾಪಾಡಲಿ....ದೇವರೆ ಎಲ್ಲಾ ಹೆಣ್ಮಕ್ಕಳಿಗು ಅರ್‌ಶಣ ಕುಂಕುಮ ಕೊಟ್ಟದೆ.

ನಿರೂ : ಕೂಜುಗೋಡು ತಿಮ್ಮಕ್ಕನು ಸುಬ್ಬಕ್ಕನೂ ಸೇರಿಕಂಡ್ 6ಸೇರ್ ಕಡ್‌ಂಬಿಟ್ಟ್‌ಗೆ ನೀರ್ ಮಡ್ಗಿ ಉಕ್ರ್‌ಸಿ, ಕಡ್‌ಂಬಿಟ್ಟ್ ಉರ್‌ಟಿದೊ. ಮಣ್ಣ್‌ನ ಕಳ್‌ಸಿಗೆಲಿ ಬೇಯಕೆ ನೀರ್ ಮಡ್ಗಿ ವಲೆಲಿ ಕೊಳ್ಳಿನ ಜೋರು ಕೂಡ್‌ಸಿದೊ. ಹೊಗೆ ಬರ್ತಾಯಿದ್ದ ಕೊಳ್ಳಿ ಜೋರಾಗಿ ಹೊತ್ತಿತ್. ಹೆಣ್ಣ್‌ಮಕ್ಕ ಹೇಳಿಕಂಡೊ– ಆ ಬ್ರಿಟಿಷರ್ ಏನ್‌ಉರಿ ಬಂದವೆಪ್ಪ. ಅವುಕೆ ಕಿಚ್ಚಿ ಕೊಡೊಕುತ ಮಾತಾಡಿಕಂಡ್ ಶಾಪ ಹಾಕಿದೊ.

ಅಷ್ಟ್‌ಹೊತ್ತಿಗೆ ಗಂಡ್‌ಜೆನ ಕೈಬಾಸೆಲೆ ಪಿಸಿ ಪಿಸಿ ಮಾತಾಡಿಕಂಡ್ ಎಲ್ಲವೂ ಎದ್ದ್‌ನಿತ್ತೊ. ಅಪ್ಪಯ್ಯ ಗೌಡ ಕರ್ತು ಮತ್ತೆ ಚೆಟ್ಟಿ ಕುಡಿಯರ್ ಕುದ್‌ರೆಂದ ಇಳ್ದ್ ಹಲ್ಸ್‌ನ ಮರದ ಬುಡಲಿ ಕಟ್ಟಿ ಅಂಗಳದ ಚಪ್ಪರದೊಳಗೆ ಹೊಕ್ಕಿದೊ. ಮೊಂದಿ ಬೆಳ್‌ಕ್‌ಲಿ ಕೆಲ್‌ಸ ನಡಿತಾಯಿತ್ತ್. ಯಾವ ಕಡೆಂದ ದಂಡ್ ಹೋಕು ತೇಳ್‌ವ ಚರ್ಚೆ ಆಗ್ತಾಯಿತ್ತ್.

ರಾಮಗೌಡ : ಹೋ......ಬನ್ನಿ ನಮ್ಮ ಮಹಾದಂಡ ನಾಯಕರ್ ಸುಭೆ ದಾರ ಮಡಿಕೇರಿಂದ ಅಪ್ಪಯ್ಯಗೌಡರ್ ಬಂದೊ. ಬರೊಕು ಬರೊಕು ಕುದ್ದ್ ಕಣಿ. ವಿಶ್ರಾಂತಿ ತಕಣಿ. ಚೆಟ್ಟಿ ಮತ್ತೆ ಕರ್ತು ನೀವೂನು ಸುಸ್ತಾಗೊಳೊರಿ ಎಲ್ಲವೂ ವಿಶ್ರಾಂತಿ ತಕಣಿ. ಮಾತ್‌ಕತೆಯೆಲ್ಲ ಆಮೇಲಾಗಲಿ.

ರಾಮಣ್ಣ : ತಿಮ್ಮಣ್ಣ ನೀವು ಬಂದವರ್‌ನ ನೋಡಿಕಂಡ್ ಅವರ ಊಟ ತಿಂಡಿಗೆ ವ್ಯವಸ್ಥೆವಮಾಡಿ. ಜನಯೆಲ್ಲಾ ಅವರವರ ಪಾಡಿಗೆ ಕೆಲ್‌ಸ ಮಾಡ್ತಾಯಿದ್ದೊ.

ನಂಜಯ್ಯ : ಅಪ್ಪಯ್ಯಗೌಡರೆ, ಈಗ ನಾವೆಲ್ಲವೂ ಸೇರಿ ತಂಡಗಳ್‌ನ ಬ್ಯಾರೆ ಬ್ಯಾರೆ ಮಾಡಿಕಂಡ್ ಅದದೆ ಮುಕಂಡರ್‌ಗ ಯಾರ್‌ತೇಳಿ ತಯಾರಾತ್. ಸುರುಗೆ ಪುತ್ತೂರು ಬೆಳ್ಳಾರೆ ಕಡೆ, ಕಜಾನೆ ವಸ ಪಡ್ಸಿ ಕೊಂಬದುತ ಅಲ್ಲಿಂದ ಮಂಗ್‌ಳೂರಿನ ಬಿಕ್ರನ ಕಟ್ಟೆನ ಬಾವುಟಗುಡ್ಡೆಲಿ ದೊಜ ಹಾರ್‌ಸ್‌ದುತ ನಿಶ್ಚಯ ಆತ್. ಮತ್ತೆ ಮಡಿಕೇರಿ ಕಡೆ ಹೊರ್‌ಡುತ ತೀರ್ಮಾನ ಆತ್.

ಅಪ್ಪಯ್ಯ : ವಳ್ಳ ಕೆಲ್‌ಸ ಮಾಡ್‌ದರಿ ನಾವು ಈ ಕಾಡ್ ದಾರಿಲಿ ಇರ್‌ಳ್ ಬಾದು ಬಾರಿ ಸಾಹಸದ ಕೆಲ್ಸ ನೋಡಿ. ನೀವು ಎಲ್ಲಾ ತಯಾರ್ ಮಾಡ್ಯೊಳರಿ. ರಾಮಗೌಡರ್ ಎಲ್ಲ ಸರಿ ತಯಾರ್ ಮಾಡ್ಯೊಳೊತ ಗೊತ್ತಾತ್. ಇನ್ನ್ ಮುಂದೆನ ಕೆಲ್ಸ ಬ್ಯಾಗ ಆಕು.

ನಿರೂಪಕಿ : ನಂಜಯ್ಯ ಅವರ್ ಪೈಕಿ ಹಿರಿಯಂವ. ಕಲ್ಯಾಣಪ್ಪನ ರಕ್ಷಕ. ಎಲ್ಲವರ್‌ನ ಕರ್ದ್ ಹೇಳ್ತ್. ಜನ ಎಲ್ಲವೂ ಅಂಗಳಲಿ ಸೇರ್‌ದ್ರೊ! ಸಾವಿರಾರ್ ಜೆನ ಬ್ರಿಟಿಷರ ಎದ್‌ರ್ ಸಿಡ್‌ದ್ ಏಳ್‌ವ ದಿನ!

ಕೊಡಗ್ ದೇಸದ ಕೊನೆ ಅರ್‌ಸ ಚಿಕ್ಕ ವೀರರಾಜನ ಇಂಗ್ಲೀಷ್‌ರ್ ಸಿಂಹಾಸನಂದ ಇಳ್‌ಸಿ, ಅಂವನ ಮೂರು ತಲೆಮಾರಿಗಾಗು ವಸ್ಟ್ ಪಿಂಚಣಿ ಕೊಡ್ಸಿ ಗೌರವಂದ ಪಲ್ಲಕಿಲಿ ಮೆರವಣಿಗೆ ಮಾಡ್ಸಿ ಕಾಶಿಗೆ ಕಳ್ಸಿದೊ. 1834 ಏಪ್ರೆಲ್ 6ರಂದ್ ಹಿಂಬೊತ್ತು 6 ಗಂಟೆಗೆ ಮಡಿಕೇರಿ ಕ್ವಾಟೆಲಿ ಅವರ ದೊಜ ಹಾರ್‌ಸಿದೊ. ಶತಮಾನಗಳ್‌ಂದ ಕಾಣ್ತಾಯಿದ್ದ ಕೊಡಗ್ ದೇಶದ ವಿಜಯ ದೊಜ ಮಡಿಕೇರಿ ಕ್ವಾಟೆಲಿ ಹಾರ್‌ತಾಯಿಲ್ಲೆ. ಇಂಗ್ಲೀಷ್‌ರ ದೊಜ ಮಡಿಕೇರಿ ಕ್ವಾಟೆಲಿ ಹಾರಾಡ್ದು ನೋಡಿ ಪ್ರಾಮಾಣಿಕರಾದ ಕೊಡಗ್ ದೇಶದ ಪ್ರಜೆಗಳಿಗೆ ರಕ್ತ ಹೆಪ್ಪುಗಟ್ಟಿತ್. ಈ ದಂಗೆ ಹೆಂಗೆ ಅಂತ್ಯ ಆತ್‌ತೇಳ್ದು ಮತ್ತೆ ಆಗನ ಕಾಲಲಿ ಜನರ ಒಗ್ಗಟ್ಟ್ ವಿಶ್ವಾಸ ಹೆಂಗಿತ್ತ್ ಗಂಡ್ ಹೆಣ್ಣ್‌ಗಳ ಶೂರತನ ಹೆಂಗಿತ್ತ್ ತೇಳ್ದು ಮುಂದೆನ ಪೀಳಿಗೆ ತಿಳಿಯೊಕು.

(ಭೂತದ ಗುಡಿ ಮುಂದೆ)

ನಂಜಯ್ಯ : ಇಂದ್ ಎಲ್ಲವೂ ಕೆದ್‌ಂಬಾಡಿ ರಾಮಗೌಡರ ಮನೆಲಿ ಕೂಡ್ಯೊಳೊ. ಇಂದ್‌ನ ಇರ್‌ಳ್ ಇಲ್ಲಿ ಉಂಡ್ ಮಲ್‌ಗಿ ಹೊತಾರೆ ಹೊರ್‌ಡೊಕು.

ರಾಮಗೌಡರ್ ಆಶ್ರಯದಾತರ್. ಇಂದ್ ಇವರ ಮನೆಂದ ದಂಡ್‌ನ ಸುರುಮಾಡುವೆ. ಇವು ಈ ಊರುನ ದೊಡ್ಡ ಮುಕಂಡರ್ ಆಶ್ರಯದಾತರ್, ಅನ್ನದಾತರ್, ಈ ಊರ್‌ನ ಊರು ಪಟೇಲರ್, ನಾವೆಲ್ಲವೂ ಈಗ ಕಲ್ಯಾಣಸ್ವಾಮಿಗಳ ಪರವಾಗಿ ದೇವರ ಪ್ರಾತನೆ ಮಾಡಿ ದೇವರ ಆಶೀರ್ವಾದ ಪಡಿಯೊಕು." (ವಾತಾವರಣ ಗಂಭೀರ ಆಗಿದ್ದದೆ)

ಹೆಣ್ಮಕ್ಕ : ಮಾದೇವಿ ಕೂಸಕ್ಕ ಸೇರಿಕಂಡ್ ಕೈಮುಗ್ದ್ ನಮ್ಮೆಲ್ಲರ ತಾಳಿ ಭಾಗ್ಯನ ರಕ್ಷಿಸಿ ದೇವರೆ. ದಂಡ್ ಹೋಗುವ ದಾರಿಲಿ ಎಲ್ಲೂ ಅಡೆತಡೆ ಬಾರದಂಗೆ ಕಾಪಾಡ್ ಸ್ವಾಮಿ,

ಎಲ್ಲವೂ ಕೈಮುಗ್ದ್ ಅಕ್ಕಿ ಹಾಕುವೆ, ನಾವು ನಂಬಿದ ಭೂತಗ ಕುಲದೇವ್ರು ಎಲ್ಲವೂ ನಮ್ಮನ ಕಾಪಾಡೊಕು!

ನಂಜಯ್ಯ : ದೇವ್ರುಗೆ ಕೈಮುಗ್ದ್ "ನಾನ್ ಕಲ್ಯಾಣಸ್ವಾಮಿಗಳ ಕಾವಲ್ ಭಟ್ಟ ಅಷ್ಟೆ. ಮುಂದೆನದೆಲ್ಲ ದೇವ್ರು ನೋಡೊಕು. ಈ ದಂಡ್‌ನ ಮಹಾ ದಂಡ ನಾಯಕರ್‌ಗಳಿಗೆಲ್ಲ ಕಾವೇರಿ ತಾಯಿ ಜಯಕೊಡಲಿ. ದೇವರ ಗುಡಿ ಮುಂದೆ ಶಂಖ ಉರ್‌ಗಿ ಜಾಗಟೆ ಹೊಡ್ದೊ ರಾತ್ರೆ ಊಟಕ್ಕೆ ಕಡ್‌ಂಬಿಟ್ಟ್, ಕೊಸ್‌ಲಕ್ಕಿ ಅನ್ನ, ಬೂದು ಕುಂಬಳಗಸಿ, ಬದನೆ ನುಗ್ಗೆ ಆಂಬರ, ಕಾಯಿಪಜ್ಜಿ, ಉಪ್ಪಿನಕಾಯಿ ಮಜ್ಜಿಗೆ ರಾತ್ರೆಗೆ ಉಂಡೊ.

ರಾಮಗೌಡ : (ಜೋರಾಗಿ) ನಮ್ಮ ದಂಡ್‌ಲಿ (400) ನಾನೂರಕ್ಕಿಂತ ಜ್ಯಾಸ್ತಿ ಜನರ ಹತ್ರ ಕೇಪುನ ಕೋವಿ ಮತ್ತೆ ಮದ್ದ್ ಗುಂಡುವುಟ್ಟು. ಇವೆಲ್ಲ ಜಮೆದಾರರ್, ಜಮೆದಾರನ ಕೈಕೆಳ್‌ಗೆ ಹತ್ತ್ ಜನಸಿಪಾಯಿಗ ಇರೊಕು. ಇದ್ ದೊಡ್ಡ ವೀರರಾಜನ ಕಾಲದ ನಿಯಮ. ಇವ್‌ಕೆಲ್ಲ ಗುರಿ ಹೊಡೆಕೆ ಕಲ್‌ಸಿ ಕೊಟ್ಟವು ಗಾಳಿಬೀಡ್‌ನ ಚೆಟ್ಟಿ ಮತ್ತೆ ಕರ್ತುತೇಳುವ ಕುಡಿಯ ಅಣ್ಣ ತಮ್ಮಂದ್‌ರ್. ಈ ದಂಡ್‌ನ ಮಹಾದಂಡ ನಾಯಕರ್ ಗುಡ್ಡೆಮನೆ ಅಪ್ಪಯ್ಯಗೌಡರ್.

ನಿರೂಪಕಿ : ಕುಕ್ಕೆಟಿ ಚೆನ್ನೆಗೌಡ ಉಳುವಾರನ ಕೂಸಪ್ಪ, ಕುಡೆಕಲ್ ಪುಟ್ಟೆಗೌಡ, ಕಾಂತಮಂಗಲದ ಅಣ್ಣಿಗೌಡ–ಇದ್‌ರ್‌ಲಿರ್‌ವ ಎಲ್ಲಾ ಮುಕಂಡರ್‌ಗ ಗೌಡುಗಳೆ ಆಗಿದ್ದೊ. ಕೊಡಗ್ ದೇಸದ ಪಟ್ಟಕ್ಕೆ ಯಾರ್‌ತೇಳಿ

ಇನ್ನೂ ಗೊತ್ತಾದಂಗಿಲ್ಲೆ. ಹಿಂಗೆ ಕಲ್ಯಾಣ ಸ್ವಾಮಿನ ಮುಂದಾಳ್‌ತನಲಿ ದಂಡ್‌ಗೆ ಜನ ಸೇರಿಕೆ ಸುರಾದೊ. ನಾಡ್‌ನ ಉಳಿಸಿಕೆ ದೀಪ ಬೆಳ್‌ಗಿ ದೇವರ ಆಶೀರ್ವಾದ ಪಡ್‌ದೊ. ವಾತಾವರಣ ಗಂಭೀರ ಆಗಿದ್ದದೆ.

ಆಗಿಂದಾಗ್ಗೆ ಸುದ್ದಿನ ಅವರಿವರ ಕೆಮಿಗೆ ಮುಟ್ಟ್‌ಸ್ತಾಯಿದ್ದ ಅಟ್ಲೂರು ರಾಮಪಯ್ಯನ ಕಾಟ ತಡಿಯಕಾಗದೆ ಅಂವನ ಕುದ್‌ರೆ ಓಡ್‌ಕನ ಬಿದ್ದ್ ಕಾಲ್‌ಬಡ್ದ್ ಸತ್ತ್‌ಹೋದ ಸುದ್ದಿ ಆತ್. ಅಂವನ ತಲೆ ತುಂಡಾದ್ ಗೊತ್ತಾಗಿ ಜನ ಉಸುರಾಡಿಕೆ ಸುರಾದೊ.ಕಾರಣ ಪುಟ್ಟ ಬಸಪ್ಪನ ಪೂಮಲೆಲಿ ತನ್ನ ಜಾಗದ ಹತ್ರ ಕಾಡ್‌ಲಿ ಗುಡ್‌ಸ್‌ಲ್ ಹಾಕಿ ಇರ್ಸಿಕಂಡಂದ್ ರಾಮಪ್ಪಯ್ಯಂಗೆ ಇಷ್ಟ ಆತ್‌ಲೆ. ಅದ್ ತಿಳ್‌ದ ರಾಮಪ್ಪಯ್ಯ ರಾಮಗೌಡನ ಹಿಡ್ದ್ ಕರ್ಸಿಕಂಡ್ ಈ ವಿಸಯ ತಿಳ್ಸಿ ಅವರ್‌ನ ಹೆದ್‌ರ್ಸಿ ಅವನ ಕೆಲವು ಆಸ್ತಿನ ಬರ್ಸಿಕಂಡ್ ಅವನ ಹೆಬ್ಬೆಟ್ಟ್ ಸಹಿ ಮಾಡ್ಸಿಕಂಡಿತ್ ಅದ್‌ಕ್ಕೆ ಸಿಟ್ಟ್. ಹಂಗಾಗಿ ಸುಳ್ಯದ ರೈತರೆಲ್ಲ ಒಟ್ಟಿಗೆ ಸೇರಿ ಅವರ ಪೈಕಿ ಜಮೀನ್‌ದಾರ ಮತ್ತೆ ಪಟೇಲ ಆಗಿದ್ದ ರಾಮಗೌಡನ ಮುಖಾಂತರ ಎಲ್ಲವೂ ಒಂದಾಗಿದ್ದೊ (ಇತಿಹಾಸಲಿ ಒಂದು ಕಡೆ ಹೇಳಿಕೆವುಟ್ಟು).

ಭೂತದ ಗುಡಿಮುಂದೆ ನಿತ್ತ್ ರಾಮಗೌಡ ಎಲ್ಲರ್‌ನ ಕರ್‌ದದೆ. ಎಲ್ಲವೂ ಅಂಗಳಲಿ ಕೂಡ್ದೊ. ಪೂಜೆಗಿರ್‌ವ ವ್ಯವಸ್ಥೆ ಆತ್. ಪುನೊಮ್ಮೆ ಗುಡಿಮುಂದೆ ನಿತ್ತ್ ನೀನ್ ಈ ಸೈನ್ಯದ ರಕ್ಷಕ. ಕಾವೇರಿಂದ ನೇತ್ರಾವತಿ ಮುಟ್ಟ ವಿಸ್ತಾರಾಗಿದ್ದ ದೊಡ್ಡ ವೀರರಾಜನ ವಿಜಯದೊಜನ ಹಾರ್‍ನೊಕು ತೇಳ್‌ವ ಹಾಲೇರಿ ಅರಸರ ಪ್ರಜೆಗಳ ಮೂಲದಂಗೆನ ರಕ್ಷಣೆ ಮಾಡ್‌ತೇಳಿ ಬೇಡಿಕಂಡ್ ಬೆಳ್ಳಾರೆ ಕಡೆ ಅವರ ಸೈನ್ಯ ಹೊರ್‌ಟತ್. ಕೊನೆಗೆ ಮಡಿಕೇರಿ ಕಡೆತೇಳಿ ತೀರ್ಮಾನ ಆತ್.

ದಂಡ್‌ನ ಹಾಡ್ :

ದಂಗೆಯೆದ್ದೊ ಜನ ದಂಗೆಯೆದ್ದೊ
ರೈತರ್ ಬ್ರಿಟಿಷರ ಎದ್‌ರ್ ನಿತ್ತೊ
ಉಪ್ಪು ಹೊಸೆಪುಗೆ ತೆರಿಗೆ
ಬ್ರಿಟಿಷರ ಒಡ್‌ದ್ ಆಳುವ ನೀತಿಗೆ॥

ದಂಗೆಯೆದ್ದೊ ಜನ ದಂಗೆಯೆದ್ದೊ
ಹಿಡ್ದೊ ಕೈಲಿ ಕಡ್ತಲೆ ಹಿಡ್ದೊ ತಯಾರಾಗಿ ನಡ್ದೊ॥
ಬೊಳ್‌ಗಲ್ಲ್ ಹೊಡಿಮಾಡಿ ಮರದ ಕುಂಟೆಲಿ
ಪಳ ಪಳ ಹೊಳೆವಂಗೆ ಕತ್ತಿಗಳ್‌ನ ಉಜ್ಜಿದೊ॥

ಕರಕರ ಸದ್ದ್ ಬರುವಂಗೆ ಸದ್ದ್ ಮಾಡ್ದೊ
ಹಿಡ್ದೊ ಕೈಲಿ ಕಡ್ತಲೆ । ಸಾಣೆಗೆ ಕೊಟ್ಟೊ
ಒಡಿಕತ್ತಿ, ಭರ್ಚಿ ಈಟಿ, ಕವಣೆಕಲ್ಲ್ ಬಿಲ್ಲ್ ಹಿಡ್ದೊ
ಹುರ್‌ಪು ತುಂಬಿದವು ಕ್ರಾಂತಿ ವೀರರ್‌ನ ಸೇರ್ದೊ॥

ತುಂಬಿದೊ ಮದ್ದ್‌ನ ಕೇಪುನ ಕೋವಿಗೆ
ಪಳ ಪಳ ಹೊಳೆವ ಕತ್ತಿನ ಹಿಡ್ದ್ ನಿತ್ತೊ।
ಕುದ್‌ರೆಲಿ ಕುದ್ದವು ಕತ್ತಿಹಿಡ್ದ್ ಮುಂದೆ
ಭರ್ಚಿಬಿಲ್ಲ್ ಬಾಣ ಕಾಲ್ ನಡಿಗೆಲಿ ಹಿಂದೆ॥

ಎಚ್ಚರಿಕೆ ಸಿಳ್ಳೆ ಸದ್ದ್‌ನ ಕೇಳಿ ಜನ ಒಗ್ಗೂಡಿ
ಹಿಂದೆ ಇರೊವುಕೆ ಸುದ್ದಿ ತಿಳ್ಸಿಕೆ ಜನ ಅಲ್ಲಲ್ಲಿ
ಹಿಂಗೆ ಸಾಗಿತ್, ಜನರದಂಡ್ ಮುಂದೆ ಸಾಗಿತ್ತ್॥
ದಂಡ್‌ಗೆ ಕೈಎತ್ತಿಎತ್ತಿ ಹರ್ಸಿದೊ ಹಿರಿಯರ್ ॥

ನಿರೂಪಕಿ : ಹಗ್‌ಲ್‌ನ ಬಿಸಿ ಬಿಸಿ ಸುದ್ದಿ ರಾತ್ರೆನ ನಿದ್ದೆ ಕೆಡ್ಸಿತ್॥ ದಂಡ್‌ನ ಮುಖ್ಯಸ್ಥ ಪುಟ್ಟಬಸಪ್ಪ ಕಲ್ಯಾಣಸ್ವಾಮಿ ಚೆಟ್ಟಿ ಕರ್ತು ಕುಡಿಯರ್ ಸೇರ್ದೊ. ಕೆದ್‌ಂಬಾಡಿ ರಾಮಗೌಡ ಈ ಎಲ್ಲಾ ದಂಡ್‌ನ ಆಶ್ರಯದಾತರ್. ಇವರೊಟ್ಟಿಗೆ ಶೂರರಾದ ಗುಡ್ಡೆಮನೆ ಅಪ್ಪಯ್ಯಗೌಡ, ಹುಲಿಕುಂದ ನಂಜಯ್ಯ, ಕೂಜುಗೋಡು ಮಲ್ಲಯ್ಯ ತೇಳ್‌ವ ಮುಖ್ಯ ವೀರರೊಟ್ಟಿಗೆ ಸುಮಾರ್ ಎರಡ್ ಸಾವಿರ ಜೆನಯಿದ್ದೊ.

ಅಮರಕ್ರಾಂತಿಗೆ ಕೂಡ್ದೊ ಧರ್ಮಸ್ಥಳದ ಮಂಜು ಹೆಗ್ಗಡೆ, ಪಾಣೆ ಲಕ್ಷ್ಮರಸ, ಕುಂಬಳೆನ ಸುಬ್ರಾಯ ಭಟ್ಟರ್ ಬ್ಯಾರಿ, ಬ್ರಾಹ್ಮಣರ್, ಜೈನರ್, ಕುಡಿಯರ್, ಜಾತಿಮತ ಬ್ಯಾದಯಿಲ್ಲದೆ ಒಂದಾಗಿ ಕೂಡ್ದೊ ಸಾವಿರಾರ್ ಸಂಕೆಲಿ.

ಒಂದಾಗಿ ಕೂಡ್ದೊ ಗಟ್ಟಿಂದ ಕರಾವಳಿಗೆ ಮುಟ್ಟಿ ಜೆನ ದಂಗೆಗೆ ಸೇರ್ದೊ ಅಮರಕ್ರಾಂತಿ ನಮ್ಮದೆತೇಳಿ!!

ಸುಬ್ರಹ್ಮಣ್ಯ ಪಂಜ, ಬೆಳ್ಳಾರೆ ಸಂಪಾಜೆ, ಉಳ್ಳಾಲಕ್ಕಾಗಿ, ಭಾಗಮಂಡ್ಲ ಸ್ವಾಮಾರಪ್ಯಾಟೆ, ಕೊಡ್ಲಿಪ್ಯಾಟೆ, ಶನಿವಾರ ಸಂತೆಂದ ಜಮ ಆದೊ ಜೆನ ದಂಗೆಗೆ.

ನಿರೂಪಕಿ : ಕೂಜುಗೋಡು ಅಪ್ಪಯ್ಯ, ಮಲ್ಲಯ್ಯ ಅಣ್ಣಿಗೌಡ, ಅಡ್ಕಾರ್ ಸುಬ್ರಾಯಗೌಡ, ಉಳುವಾರ ರಾಮಯ್ಯ, ಕೊಡೆಕಲ್ಲ್ ಗೌಡಜ್ಜ ಕುಂಚಡ್ಕ ತಿಮ್ಮಗೌಡ, ಪರಿವಾರ ದೇವಪ್ಪ, ಸುಳ್ಯಕೋಡಿ ಕೃಷ್ಣಪ್ಪ, ಚೊಕ್ಕಾಡಿ ಮಾಲಿಂಗ, ಹೆಸ್‌ರ್‌ನ ಮುಕಂಡರೊಟ್ಟಿಗೆ ಮಂಡಿರ ಉತ್ತಯ್ಯ ಶಾಂತಳ್ಳಿ ಮಲ್ಲಯ್ಯ, ಇವೆಲ್ಲವೂ ಬಂದ್ ತುಂಬಿದೊ.

"ಅಮರ ಸುಳ್ಯದ ಕ್ರಾಂತಿಗೆ ಗೌಡರ್ ನಿತ್ತೊ ಎದ್ದ್ ನಿತ್ತೊ! ಪೆರಾಜೆ ಬೀರಣ್ಣರೈ, ಕೃಷ್ಣಯ್ಯ, ಕಲ್‌ಸಿಕಟ್ಟೆ ಮಮ್ಮದೆ ಬ್ಯಾರಿ, ಮುಳ್ಯ ಸೋಮಯಾಜಿ, ಇವೆಲ್ಲವೂ ಒಂದಾಗಿ ಹೋರಾಟಕೆ ಇಳ್ದೊ.

ಮಡಿಕೇರಿಂದ ಗುಡ್ಡೆಮನೆ ಅಪ್ಪಯ್ಯ, ಬಿಲ್ಲ್ ವಿದ್ಯೆ ಗುರಿಹೊಡೆಕೆ ಕಲ್‌ಸುವ ಗಾಳಿಬೀಡ್‌ನ ಚೆಟ್ಟಿಕುಡಿಯ, ಕರ್ತುಕುಡಿಯ ಇವೆಲ್ಲ ಹೋರಾಡಿ ಪುತ್ತೂರು ಕಜಾನೆ ವಸ ಆತ್. ಇದ್ ಕಲ್ಯಾಣ ರಾಜ್ಯ ಆಗಲಿತ ಹಾಡ್‌ದೊ.

ಇನ್ನೊಂದು ತಂಡ ಕುಂಬಳೆ ಮಂಜೇಶ್ವರಂದ ಉಳ್ಳಾಲಕ್ಕಾಗಿ ಬಂದ್ ಕರಾವಳಿಗೆ ಸೇರ್‍ತ್. ಹಿಂಗೆ ದೊಡ್ಡ ದಂಡ್ ಬಂದ್ ಮಂಗಳೂರ್‌ನ ಬಾವುಟ ಗುಡ್ಡೆಲಿ ಕೂಡಿ ಕಲ್ಯಾಣದ ದೊಜನ ಹಾರ್‌ಸಿದೊ.

ಹಾಡ್ :

ಹಾರ್ಸಿದೊ ದೊಜ ಹಾರ್ಸಿದೊ
ಹಾರ್ಸಿದೊ ಕೊಡಿಗೆ ಹಾರ್ಸಿದೊ
ಕಲ್ಯಾಣ ರಾಜ್ಯ ಹಾರ್ಸಿತ್ ಬಾವುಟ
ಅಮರ ಕ್ರಾಂತಿ ಗೆದ್ದತ್......॥
ಬಾವುಟ ಗುಡ್ಡೆಲಿ ಹಾರ್‌ಸಿದೊ ದೊಜ
ಹಾರಸಿದೊ ದೊಜ ಹಾರ್ಸಿದೊ॥
ಹಾರ್‍ತ್ ಬಾವುಟ! ಹದಿಮೂರು ದಿನ!
ಹಾರ್‌ತಾಯಿತ್ತ್ ಹದಿಮೂರು ದಿನ!!!
ಉಪ್ಪು ಹೊಸೆಮುಗೆ ತೆರಿಗೆ ರದ್ದಾತ್.
ಮಂಗಳೂರು ಕಡೆ ವೈರಿಗಳ ಸೈನ್ಯ ಕಾಲಿ ಆತ್॥

ಅಧ್ಯಾಯ –3

ಅಸ್ಟ್ ಸೂರರಾಗಿ ಹೋರಾಡ್ದ ರೈತ ದಂಗೆನ ನೋಡಿ ಕ್ಯಾಪ್ಟನ್ ಲಿಹಾರ್ಡಿಗೆ ನಿಜಕ್ಕೂ ಅಚ್ಚರಿ ಆತ್. ಇವು ಎಂತ ಗಟ್ಟಿ ಜನತೇಳಿ ಮೆಚ್ಚಿಕಂಡತ್. ಆದರೂ ಅಂವನ ಇಂಗ್ಲೀಷ್ ಜೆನಕೆ ಆದ ತೊಂದರೆಗೆ ಅಂವಂಗೆ ಎಲ್ಲಿಲ್ಲದ ಸಿಟ್ಟ್ ಬಂದ್ ಮೈ ನಡ್‌ಗಿ ಕೆಂಪಾತ್. ನಿತ್ತಲ್ಲಿ ನಿಲ್ಲಿಕಾಗದೆ ಮಲ್‌ಬಾರ್ ಬೊಂಬಾಯಿ ಕಡೆಗೆ ಜನ ಕಳ್‌ಸಿ ಅಲ್ಲಿಂದ ಸಾಕಸ್ಟ್ ಮದ್ದ್ ಗುಂಡುಗಳ್‌ನ ಫಿರಂಗಿಗಳ್‌ನ ತರ್ಸಿ ದೊಡ್ಡ ಸೈನ್ಯ ಜಮ ಆತ್.

ಈ ಮದ್ಯ ಎಲ್ಲ ಮುಕಂಡರ್‌ಗ ಎಲ್ಲೂ ಕಾಣ್‌ಸಿ ಕಂಡತ್‌ಲೆ. ತಲೆ ಮರ್ಸಿ ಕಂಡೊ. ಅಪ್ಪಯ್ಯ ಚೆಟ್ಟಿ ಮತ್ತೆ ಕರ್ತುಕುಡಿಯರೊಟ್ಟಿಗೆ ವಾಪಾಸ್ ಅಪ್ಪ ಸುಬ್ಬಪ್ಪಂಗೆ ಗೆದ್ದ ವಿಸಯ ತಿಳ್ಸಿಕೆತೇಳಿ ಬಲಮುರಿ (ಬಲ್‌ಂಬೇರಿ)ಗೆ ಹೋದೊ.

ಲಿಹಾರ್ಡಿ ಗ್ಯಾನ ಮಾಡಿಕೆ ಸುರುಮಾಡ್ತ್. ಇನ್ನ್ ಈ ಕೊಡಗ್ ದೇಶದ ಪ್ರಜೆಗಳ್‌ನ ಸುಮ್ಮನೆ ಬುಟ್ಟರೆ ಆಕಿಲೆ. ಅದ್‌ಕಾಗಿ ಅಂವ ಒಂದು ಉಪಾಯ ಮಾಡ್ತ್. ಕೊಡಗ್‌ನ ಮುಕ್ಯ ದಿವಾನರ್‌ಗಳ್‌ನೆ ಇವರ್‌ನ ಹಿಡಿಯಕೆ ಬುಡೊಕು. ಹಣದಾಸೆಗೆ ಬಾಯ್ ಬುಡುವ ದೇಶದ್ರೋಹಿಗಳ್‌ನ ಉಪಯೋಗ್ಸಿಕಂಡ್ ಹಣದಾಸೆ ತೋರ್ಸಿ ಹೆದ್ರ್‌ಸಿ ಬೆದ್ರ್‌ಸಿ ಸಿಕ್ಕಾ ಬಟ್ಟೆ ಕೊಲ್ಲಿಕೆ ಸುರುಮಾಡ್ದೊ. ಅವರ ಆಪ್ತ ದಿವಾನರ್ ಆದ ಬೋಪಣ್ಣ ಪೊನ್ನಪ್ಪಂಗು ಈ ಕ್ಷಣನೆ ನಿಮ್ಮ ಸಂಬಂಧಿಕರ್ ದಂಗೆಗೆ ಸೇರ್ದವು ಯಾರಾರ್ ಇದ್ದರೆ ವಾಪಾಸು ಮನೆಗೆ ಕರ್ಸಿಕಣಿತ ಹಿಂಸೆಕೊಟ್ಟೊ. ಜೀವದ ಭಯ ಯಾರಿಗಿಲ್ಲೆ?

ಪೊನ್ನಪ್ಪ : ನಾವು ಇಸ್ಟ್ ವಿಧೇಯರಾಗಿ ಒಗ್ಗಟ್ಟ್‌ಂದ ಇದ್ದರೂ ಸಹ ಇಂಗ್ಲೀಷರ್‌ಗೆ ನಮ್ಮ ಮ್ಯಾಲೆ ಸಂಶಯಬಾತ್ ತೇಳಿ ತುಂಬಾ ಬೇಜಾರಾತ್, ಆಕಾಲಲಿ ಬ್ರಿಟಿಷರ್ ಅವರ ಕೆಲ್ಸಕ್ಕೆ ಉಪಯೋಗ್ಸಿ ಕಂಡ್ ಮತ್ತೆ ಅವರ್ನ್ ಕೊಂದ್ ಹಾಕ್ತಾಯಿದ್ದೊ. ಇನ್ನ್ ತಡ ಮಾಡ್ದು ಪ್ರಯೋಜಯಿಲ್ಲೆತ ಗೊತ್ತಾದ ಅಪ್ಪಯ್ಯ ರಾತಾರಾತ್ರೆ ಮನೆಗೆ ಬಾತ್. ಕುದ್‌ರೆನ ಹಟ್ಟಿಹತ್ರ ನಿಲ್ಸಿತ್. ಓಡಿಬಂದ ರಬಸಕ್ಕೆ ಕುದುರೆ ಸೇಂಕುದು ಮನೆಗೆ ಕೇಳ್ತಾಯಿತ್ತ್. ಆದರೆ ಸುಳಿ ಸಿಕ್ಕಿದ ಅಪ್ಪಯ್ಯ ಹಟ್ಟಿ ಅಟ್ಟದ ಹುಲ್ಲುಸೆರೆಲಿ ಅಡ್‌ಂಗಿ ಕುದ್ದಿತ್ತ್. ಮಲ್‌ಗಿದ್ದ ಅಪ್ಪ ಬಾಗ್‌ಲ್‌ತೆಗ್ತ್. ಬ್ಯಾರೆ ಯಾರೂ ಬಾಗ್‌ಲ್ ತೆಗಿವಂಗಿಲ್ಲೆ. ದಂಡ್‌ನ ಆರ್ಭಟ ಅಷ್ಟೊಂದು ರಬಸಾಗಿತ್ತ್. ಅಪ್ಪಯ್ಯನ

ಹುಡ್‌ಕ್‌ತಾಯಿರ್‌ವ ಸುಳಿ ಗೊತ್ತಾಗಿತ್ತ್. ಅಪ್ಪಯ್ಯನ ಮನೆ ಹತ್ರ ಕುದ್‌ರೆ ನಿಲ್ಸಿದ್ ಕಂಡ್ ಗುಪ್ತ ಆಗಿ ಗೂಡಚಾರಿಗಳೊಟ್ಟಿಗೆ ಸ್ವತಃ ಲಿಹಾರ್ಡಿನೆ ಬಂದಿತ್ತ್.!!

ಟಕ್ ಟಕ್, ಟಕ್ ಟಕ್॥

ಹೊರಗೆ ಕಯ್ಯಾಲೆಲಿ ಮಲ್‌ಗಿದ್ದ ಅಪ್ಪಸುಬ್ಬಪ್ಪ ಎದ್ದ್ ಬಂದ್ ಬಾಗ್‌ಲ್ ಚಿಲ್‌ಕ ತೆಗ್‌ದ್ ನೋಡ್ರೆ!!!

ಅಂವಂಗೆ ಮಾತ್ ತಡ್ರ್‌ಸಿತ್. 4 ಜನ ಸೈನಿಕರೊಟ್ಟಿಗೆ ಕ್ಯಾ॥ ಲಿಹಾರ್ಡಿನೆ ಸ್ವತಃ ಬಂದ್ ನಿತ್ತುಟ್ಟು!

ಲಿಹಾರ್ಡಿ : ಇದ್ ಅಪ್ಪಯ್ಯನ ಮನೆನಾ? (ಬೇಕಿದ್ದರೆ ಇಂಗ್ಲೀಷ್ ಬಳ್‌ಸಕ್) ಇಂವಂಗೆ ಯಾರೋ ನಮ್ಮ ಮನೆ ತೋರ್ಸಿ ಕೊಟ್ಟೊಳೊ.

ಸುಬ್ಬಪ್ಪ : ಧೈರಂದ ಹೌದು! ನಾನ್ ಅವನ ಅಪ್ಪ ಸುಬ್ಬಪ್ಪ. ಅಂವ ಬಾರದೆ ಎಷ್ಟೊ ದಿನ ಕಳ್ತ್. ಆ ಬ್ಯಾಜಾರಲಿ ಅಂವನ ಅವ್ವ ಜೊರಬಂದ್ ಹಾಸಿಗೆ ಹಿಡ್‌ದುಟ್ಟು–ಕೈತೋರ್‌ಸಿದೆ.

ಅದರ್‌ನ ನೋಡಿ ಅಂವ ಬಂದರೆ ನಮ್ಮ ಸರ್ಕಾರಕ್ಕೆ ತಿಳ್‌ಸೊಕು ಇದ್ ಕ್ಯಾಪ್ಟನ್ ಲಿಹಾರ್ಡಿ ಹುಕುಂ. ಇಲ್ಲರೆ ನೀವ್‌ಗೆಲ್ಲ ನಮ್ಮ ಸೈನಿಕರ್ ಬೆತ್ತಕೋಲ್‌ಲಿ ಬಾರ್‌ಸುವೆ. ಸಿಟ್ಟ್‌ಲಿ ನಡ್‌ಗಿದೆ.

ಸುಬ್ಬಪ್ಪ : ಅಪ್ಪಣೆ ಸ್ವಾಮಿ, ನಾವ್‌ಗೇನೂ ಮಾಡ್‌ಬಡಿ. ಕಂಡಿತ ತಿಳ್‌ಸುವೆ ಸೊಂಟ ಬಗ್ಗಿ ನಮಸ್ಕಾರ ಮಾಡ್ತ್ ಸುಬ್ಬಪ್ಪ.

ಲಿಹಾರ್ಡಿ : ಸ್ಟುಪಿಡ್, Poor Fellows ನೆಲಕ್ಕೆ ಕೈಂದ ದೊಣ್ಣೆನ ಜೋರ್ ಊರ್ತ್.

ಸುಬ್ಬಪ್ಪ ಮನ್ಸ್‌ಲಿ : ಹಂಗಾರೆ ಅಪ್ಪಯ್ಯ ಇಲ್ಲೆಲ್ಲೊ ಬಂದಿರೊಕು. ಸ್ವಲ್ಪ ಹೊತ್ತು ಹೆದ್‌ರಿ ಮಂಕಾದ ಅಪ್ಪ ಇದೇ ಗ್ಯಾನಲಿ ಕುದ್ದಿರ್‌ಕನ ಏನೋ ಸದ್ದ್ ಕೇಳ್ತ್ ಎಂತದಾಗಿರ್‌ದುತ ಗ್ಯಾನ ಮಾಡಿಕಂಡಿರ್‌ಕನ ಮತ್ತೊಮ್ಮೆ ಬಾಗ್‌ಲ್ ಸದ್ದ್ ಕೇಳ್ತ್.!!

ಬಾಗ್‌ಲ್ ತೆಗೆದ್ ನೋಡ್‌ಕನ ಮಂಜನ ಕಂಡ್ ಕೈಹಿಡ್ದ್ ಒಳಗೆ

ಎಳ್‌ಕಂಡತ್. ಜೋರು ಮಾತಾಡ್ ಬಡತ ಕೈ ಬಾಸೆಲಿ ಹೇಳ್ತ್. ಬಾಗ್‌ಲ್ ಚಿಲ್‌ಕ್ ಹಾಕಿದ ಅಪ್ಪ.

ಸುಬ್ಬಪ್ಪ : ಅಪ್ಪಯ್ಯ ನಿನ್ನ ಹುಡ್‌ಕಿ ಕಂಡ್ ಬಂದವರ್‌ನ ಕಂಡಾ? ನೀನ್ ಇಲ್ಲಿಗೆ ಬರ್ತಾಯಿರ್‌ವ ಸುದ್ದಿನ ಸುಳಿತಿಳ್‌ದ್ ಇಂಗ್ಲೀಷರ್ ಇಲ್ಲಿಗೆ ಮುಟ್ಟ ಬಂದೊಳೊ.

ಅಪ್ಪಯ್ಯ : ಅಪ್ಪ ನಿಮ್ಮನ ನೋಡಿ ಬಾವುಟಗುಡ್ಡೆಲಿ ದೊಜ ಹಾರ್ಸಿದೊತ ತಿಳ್ಸಿಕೆ ಬಂದೆ. ಈಗ ಎಲ್ಲಾ ಮುಕಂಡರ್‌ಗ ಸೊಲ್ಪದಿನ ಕಾಣ್ಸಿಕಣದೆ ತಲೆ ಮರ್‌ಸಿಕಂಡೊಳೊ, ಹಂಗಾಗಿ ನಾನ್ ಇಲ್ಲಿಗೆ ಬಂದೆ. ಅವಿಬ್ಬರೂ ಗಾಳಿ ಬೀಡಿಗೆ ಹೋದೊ. ಆದರೆ ಎತ್ತೊ ಹೋಗ್ತಾಯಿದ್ದ ಗೂಡ ಚಾರರ್ ನಮ್ಮ ಮನೆಗೆ ಬಂದದ್ ನಂಗೂ ಗೊತ್ತಾತ್.

ಸುಬ್ಬಪ್ಪ : ಎಲ್ಲಾ ಸೆರಿ ಆಗಿ ಬಾವುಟ ಗುಡ್ಡೆಲಿ ಬಾವುಟ ಹಾರ್ಸಿದೊತ್ತ ಗೊತ್ತಾತ್. ಇನ್ನ್ ತೊಂದರೆ ಆಕಿಲೆತ ಗ್ಯಾನ ಮಾಡ್‌ಕನ ಲಿಹಾರ್ಡಿನೆ ಮನೆಗೆ ಬಾದುತೇಕ್ರೆ ನಿಮ್ಮನ್ನೆಲ್ಲಾ ಹುಡ್‌ಕ್‌ತಾ ವಳೊತಾತ್. ಅಕ್ಕವ್ವಾ, ನಿನ್ನ ಗಂಡ ಬಂದುಟು ನೋಡು, ಅನ್ನತಂದ್ ಯಿಕ್ಕ್ ಯಾಗೊಳು ಪಾತ್ರಲಿ ಅನ್ನ ಇರ್ರು. ಊಟ ಮಾಡದೆ ಎಸ್ಟ್ ದಿನ ಆತೊ ಏನೋ ಬ್ಯಾಜಾರಂದ ಒಳಗೆ ಹೋಗಿ ಸೊಸೆನ ಕ್ವಾಂಬರೆ ಬಾಗ್‌ಲ್‌ಂದ ಕರ್ತ್ಂವ. ನಿದ್ದೆಕಣ್ಣ್‌ಲೆ ಎದ್ದ್ ಬಂದ ಅಕ್ಕವ್ವಂಗೆ ಗಂಡನ ನೋಡಿ ಕುಸಿ ಆತ್.

ಕತ್ತಲೆಗೆ ಮಾಡ್ದ ಕೊಸ್‌ಲಕ್ಕಿ ಅನ್ನ, ಸ್ವಾಂತೆಕಾಯಿ ಗೈಪು ಕುರ್ಚಿಮೊನ್ ಹೊರ್‌ದದ್. ಉಪ್ಪ್‌ನ ಕಾಯಿಲಿ ಉಂಡತ್ ಅಪ್ಪಯ್ಯ.

ಅಪ್ಪಯ್ಯ : ಅಪ್ಪ ನಾನೊಂದು ಮಾತ್‌ಹೇಳ್ನೆ ಅಂದೇ ಹೇಳಕಾಗಿತ್ ಹಂಗಾಗಿ ಇಂದ್ ಪುನಃ ನಿಮ್ಮನ ನೋಡುವ ಸಂದರ್ಭಬಾತ್ ವಳ್ಳದಾತ್.

ತಮ್ಮ ಪೊನ್ನಂಗೆ ಹೇಳ್ದೆ : ಪೊನ್ನ ನಮ್ಮದ್ ಹೆಂಗೆತ ಹೇಳಿಕಾದುಲೆ. ನಂಗೇನಾರ್ ಆದರೆ ನನ್ನ ಹೆಣ್ಣ್‌ನ ಮಗಳ್‌ನ ಲಾಯ್ಕ ನೋಡಿಕ. ಮಗಳ್‌ನ ಮೊದ್‌ವೆ ಮಾಡ್. ಅಪ್ಪವ್ವನ ಲಾಯ್ಕ ನೋಡಿಕ ನನ್ನ ಪಾಲ್‌ನ ಆಸ್ತಿನ ನೀವೆ ನೋಡ್‌ಕಣಿ.

(ಗಂಭೀರಾಗಿ ಮಾತಾಡ್‌ಕಾಕನ ದಂಡ ನಾಯಕ, ಸುಬೇದಾರ

ಅಪ್ಪಯ್ಯಂಗೆ ಸಾವು ಎದ್‌ರಿಗೆ ನಿತ್ತದರ್‌ನ ನೆನ್ಸಿಕಂಡ್ ಕುತ್ತಿಗೆ ನರ ಉಬ್ಬಿಬಾತ್).

ಪೊನ್ನ : ನೀ ಹಂಗೆಲ್ಲ ಹೇಳ್‌ಬಡ ಅಣ್ಣ ನಂಗೆ ದುಃಕ್ಕ ಆಗ್ತಾವುಟ್ಟು ಎಲ್ಲಾ ಸೆರಿ ಆದೆ.

ಸುಬ್ಬಪ್ಪ : ಅಪ್ಪಂಗು ದುಕ್ಕಬಾತ್. ನೋಡಪ್ಪ ಅಪ್ಪು, ಈಗಲೇ ನಿನ್ನ ಅವ್ವ ಕಾಯ್‌ಲಾಗಿ ಮಲ್‌ಗಿಟ್ಟು. ಕೇಳ್ರೆ ಬ್ಯಾಜಾರ ಮಾಡ್ದು. ಪಂಡಿತರ್ ಬಂದ್ ಮದ್ದ್ ಕೊಟ್ಟ್ ಹೋಗೊಳೊ. ಚಾಲೆಮುಂಡುಲಿ ಕಣ್ಣ್ ಒರ್ಸಿತ್. ಇದರ್‌ನೆಲ್ಲ ಕಿಡ್‌ಕೆಂದ ಕೆಬಿಕೊಟ್ಟ್ ಆಲ್ಸಿಂದ ಅವ್ವ, ತಾಯಕ್ಕ ಚೆಕ್‌ವಸ್ತ್ರನ ತಲೆಗೆ ಗಟ್ಟಿಕಟ್ಟಿ ದೊಣ್ಣೆ ಊರಿಕಂಡ್ ಮೆಲ್ಲಂಗೆ ಎದ್ದ್ ಬಂದ್ ಮಂಜನ ಕಣ್ ತುಂಬ ನೋಡ್ತ್.

ತಾಯಕ್ಕ : ನೋಡಿ, ಅಂವನ ಜಾತಕ ಸುಳ್ಳಾಕಿಲೆ. ಅಂವನ ಹೆಸ್‌ರ್ ಶಾಶ್ವತ ಆಗಿ ವಳ್‌ದದೆತ ನಂಗೆ ಗೊತ್ತುಟು. ಈ ದಂಗೆ ಅಡ್‌ಂಗಲಿ ಮತ್ತೆ ಎಲ್ಲಾ ಸೆರಿ ಆದೆ.

ಪಾಪ, ಅಕ್ಕವ್ವ ಏನೂ ಹೇಳ್ತ್‌ಲೆ–ಗೂಡೆ ನಿದ್ದೆ ಮಾಡ್ತಾಯಿತ್ತ್. ನೆಲ್ಲಕ್ಕಿ ದೀಪ ಹೊತ್ತಿಕಂಡೇಯಿತ್ತ್ (ರಾತ್ರೆಹಗಲ್) ಅಪ್ಪವ್ವನ ಕಾಲ್ ಮುಟ್ಟಿ ನಮಸ್ಕಾರ ಮಾಡ್‌ಕನ ಹನಿ ತೊಟ್ಟು ಅವರ ಪಾದಕೆ ಬೀತ್ ಅಂದ್ ಎಲ್ಲವೂ ಉಂಡ್ ಮಾತಾಡ್ತಾ ಕಳ್ದೊ.

ಮತ್ತೆ ಯಾರೂ ಅಂವನ ಕಂಡ್‌ತ್‌ಲೆ ಕೂಟುಗಾರರೊಟ್ಟಿಗೆ ಹೊರ್‌ಟ್ ಹೋಗುಟು ಹೊತಾರೆ ಮೌನ ಮನೆಲಿ. ಹಾಲ್ ಕರ್‌ದ್ ಬಂದ ಅಕ್ಕವ್ವ ಕಂಬಕ್ಕೆ ತಲೆಕೊಟ್ಟ್ ಕುದ್ದುಟು............॥

ಅಧ್ಯಾಯ – 4

(ಪುನಃ ಪೂಮಲೆಲಿ : ಎಲ್ಲವು ಸೇರ್‍ದೊ........)
ಬ್ರಿಟಿಷರ್ ಹುಡ್‌ಕ್‌ತಾಯಿದ್ದ ವಿಸಯ ಎಲ್ಲವುಕು ಗೊತ್ತಾತ್.
ಹೆಣ್ಮಕ್ಕಳ ಆರತಿ ತಟ್ಟೆ ತಯಾರಾತ್. ತಟ್ಟೆಹಿಡ್‌ದ ಕೈ ನಡ್‌ಗ್‌ತಾಯಿತ್ತ್.
ಆರತಿಯೆತ್ತಿದೊ ಸ್ವಾಬಾನೆ ಹೇಳಿಕಂಡ್.....

ಕಲ್ಯಾಣದ ದಂಡ್ ದಿಬ್ಬಣ ಹೊರ್‌ಟತ್
ಕಲ್ಯಾಣಸ್ವಾಮಿಗೆ ಸೋಬಾನವೇ..............
ಪಯಸ್ವಿನಿ ದಾಟಿ ಕಲ್ಯಾಣ ಗೆಲ್ಲಲಿ
ಸೋಬಾನೆ ದಂಡಿಗೆ ಸೋಬಾನವೆ॥

ಹೆಣ್ಣ್‌ಗ ಮುಡಿಯಲಿ ಕ್ಯಾದಿಗೆ ಹಿಂಗಾರ
ಮುಡ್‌ದಂತ ಹೂವು ಬಾಡದೆಯಿರ್‌ಲಿ
ಸೋಬಾನೆ ಆರತಿ ಸೋಬಾನವೆ.॥

ಹಾಡ್‌ಕೆಳ್‌ದವು :ಇದೆಂತ ಭೀಕರ ಯುದ್ಧದ ಆರತಿ ಹಾಡ್ ಕೇಳ್‌ದವು ಹೆದ್‌ರ್‌ದೊ.

ತಕ್ಷಣ ಅಪ್ಪಯ್ಯ ಕೂಜುಗೋಡು ಮಲ್ಲಯ್ಯನ ತಂಡನ ಬಿಸ್ಲೆ ಕಡೆ ಕಳ್ಸಿತ್. ತಾನೆ ಮಡಿಕೇರಿ ಕಡೆ ಸೈನ್ಯತಕಂಡ್ ಹೊರ್‌ಟತ್. ಈ ಸುದ್ದಿ ಬ್ರಿಟಿಷರ್ ತಿಳ್ದ್ ತಕ್ಷಣ ಅವರ ಮುಕಂಡರ್‌ನ ಕಳ್ಸಿತ್. ಇವರ್‌ನ ಇವರ ಜನರ್‌ಂದಲೆ ಹಿಡ್ಸೊಕುತ ತಂತ್ರ ಹೂಡ್ದೊ. ಅಪ್ಪಯ್ಯಗೌಡನ ಸಹಾಯಕೆ ಭಾಗಮಂಡ್ಲದ ಸೈನ್ಯ ಬಂದ್ ಕಾಟಿಗೇರಿ ತಲ್‌ಪಿಕೆ ಮುಂದೆ ಮರೆಲಿ ಅಡ್‌ಂಗಿದ್ದವು. ಎದ್‌ರ್ ಬದ್‌ರ್ ಸೈನ್ಯಗ ಸಿಕ್ಕಿ ತಕ್ಷಣ ಅಪ್ಪಯ್ಯ ಗೌಡನ ತಂಡದವ್‌ರ್‌ನ ಮರೆಲಿಕುದ್ದ್ ಹಿಡ್ದ್ ತಂದ್ ಮಡಿಕೇರಿ ಕ್ವಾಟೆ ಬಾಗ್‌ಲ್‌ಲಿದ್ದ ಎತ್ತರ ಬರೆಮ್ಯಾಲೆ ತಂದ್ ನಿಲ್ಸಿದೊ. ಹಿಂಗೆ ಹಿಡ್ದೊತೇಳಿ ಇತಿಹಾಸಲಿ ಹೇಳ್ದೆ. ಅರಮನೆಲಿ ಆಕಾಲಕ್ಕೆ ಶಿಕ್ಷೆ ಅನುಭವಿಸುದು ಆಜಾಗಲಿ ಆಗಿತ್ತ್. ಹಿಂಗೆ ನಮ್ಮ ದೇಶಲಿ ನಮ್ಮ ನಮ್ಮೊಳಗೆ ಮೋಸ ಹಿಂಸೆಂದ ಹಿಡ್ಸಿಕೊಟ್ಟ ಈ ದೃಶ್ಯನ ನೋಡಿಕೆ 31-10-1837 ಹೊತಾರೆ 10 ಗಂಟೆಗೆ ಊರು ನಾಡ್ ಎಲ್ಲ ಜನರ್‌ನ ಕರ್ಸಿ ಅವರ ಆಯುಧಗಳ್‌ನ ಕಾಲ್‌ಕೆಳಗೆ ಮಡ್ಗಿಸಿದೊ. ಡಂಗುರ ಸುದ್ದಿಕೇಳಿ ಜನಸಾಲ್‌ಕಟ್ಟಿ ಬಂದೊ. ಉಳ್‌ದವರ ಕೈಲಿ ಯಾವ ಆಯುದನೂ ಇಲ್ಲದಂಗೆ ಮಾಡಿ ಅವರ ಸೈನಿಕರ ಕೈಲಿಮಾತ್ರ ಆಯ್‌ದಗಯಿದ್ದೊ.

ಇಲ್ಲಿನ ಹತ್ರಪತ್ರ ಜನ ಮುಕ್ಯಸ್ಥರ್ ಎಲ್ಲ ಸೇರಿ ಜನ ತುಂಬಿ ಹೋಗಿದ್ದೊ. ಅವರ ಕೈಲಿದ್ದ ಕತ್ತಿ ಕೋವಿ ದೊಣ್ಣೆನ ಎಲ್ಲಾ ಅವರ ಕಾಲ್‌ಕೆಳಗೆ ಮಡ್ಗಿಸಿದೊ. ಗುಡ್ಡೆಮನೆ ಅಪ್ಪಯ್ಯಗೌಡನ ಎಲ್ಲವ್‌ರ

ಮುಂದೆ ಗಲ್ಲ್ ಕಂಬದ ನೇಣ್ ಬಾಮಿ ಹತ್ರ ನಿಲ್‌ಸಿದೊ. ಈ ದೃಶ್ಯನ ನೋಡಿಕೆ ಜನ ತುಂಬಿದ್ದೊ.

ಲಿಹಾರ್ಡಿ : ಆ ಸಮಯಲು ಲಿಹಾರ್ಡಿ ಹೇಳ್ದ್. ಅಂವಗೆ ಇಲ್ಲಿನವರ ವಿಷಯ ಲಾಯ್ಕಗೊತ್ತಾಗಿತ್. ಅಪ್ಪಯ್ಯನ ಮೆಚ್ಚಿತ್ ಕರುಣೆನುಯಿತ್.

ಲಿಹಾರ್ಡಿ : ಹೇಳ್. ಅಪ್ಪಯ್ಯ ನೀನೊಬ್ಬ ಶೂರ ನಮ್ಮ ಸರ್ಕಾರಕ್ಕೆ ನೀನ್ ತಲೆಬಾಗ್ ನಿನ್ನ ಶಿಕ್ಷೆನ ಕಮ್ಮಿ ಮಾಡುವೆ. ನಿಮ್ಮಂತ ದೇಶ ಪ್ರೇಮಿಗಳ್‌ನ ನಾವು ಮೆಚ್ಚುವೆ. ಉಂಡ ಮನೆಗೆ ಎರಡ್ ಬಗೆವ ನಿಮ್ಮ ಜನರ್‌ಂದ ವೀರನೊಬ್ಬನ ಕಳ್‌ಕೊಂಬ ಸಮಯ ಇದಾಗುಟ್ಟು. ಹಂಗಾಗಿ ನಿನ್ನ ಕೊನೆ ಆಸೆನ ಹೇಳ್.

ಅಪ್ಪಯ್ಯ : ಸಾವು ಎದ್‌ರ್‌ಗೆ ನಿತ್ತಿದ್ದರೂ ಧೈರಾಗಿ ಹೇಳ್ತ್

ನಾವ್ ಸುರು ಮಾಡ್ದ ಕೆಲ್ಸದ ಅಂತ್ಯ ಹೆಂಗಾರ್ ಆಗಲಿ ನಾವ್‌ಗೆ ಹಾಲೇರಿ ಅರಸರ್‌ನ ಮಡಿಕೇರಿ ಕ್ವಾಟೆ ಸಿಂಹಾಸನಲಿ ಕೂರ್ಸುದೇ ಆ ಮಂಜುನಾಥನ ಆಣೆಗು ಸತ್ಯ ಆದರೆ ಈಗ ಅದ್ ಆಗದ ಕೆಲ್‌ಸ.

ಲಿಹಾರ್ಡಿ : ಭೇಷ್ ಅಪ್ಪಯ್ಯ, ಇನ್ನೇನ್ ಕೇಳಿಯ ಹೇಳ್?

ಹೌದು ಈ ಗಳಿಗೆಲಿ ನನ್ನ ಹೆಣ್ಣ್ ಮತ್ತೆ ಮಗಳ್‌ನ ನೋಡೊಕು! ಸಾವು ಎದ್‌ರಿಗೆ ನಿತ್ತುಟು. ಬ್ರಿಟಿಷರ್ ಮಾಡ್ದ ಅನ್ಯಾಯಕೆ ಕಣ್ಣ್‌ತುಂಬಿ ಹರ್ದ್‌ಬಾತ್!!!

ಸುದ್ದಿಕೇಳಿ ಬಲಮುರಿಂದ ಸಾಲ್ ಕಟ್ಟಿ ಜನ ಗೋಳಾಡ್ತಾ ಸಂಸಾರದವು ಬಂದ್ ಮಡಿಕೇರಿ ತಲ್‌ಪ್‌ತಾಯಿದ್ದೊ.

ಸಂಸಾರ ಸಮೇತ ಹೆಣ್ಣ್ ಮಗಳ್‌ನ ಕರ್‌ಕಂಡ್ ಬಂದವರೊಟ್ಟಿಗೆ ಅಪ್ಪಯ್ಯನ ಹೆಣ್ಣ್ ಅಕ್ಕವ್ವ ಆಗನ ಬೂದಿ ಬಣ್ಣದ ಬೆಳಿ ಚಿನ್ನದ ಕಂಬಿಸೀರೆನ ಗೇಂಟಿ ಕಟ್ಟಿವುಟ್ಟ್ ತಲೆಗೆ ರೇಷ್ಮೆ ಕೋರ್‌ವಸ್ತ್ರ ಕಟ್ಟಿತ್ ಉದ್ದ ಕೈ ನೇರಳೆ ಬಣ್ಣದ ಮಕಮಲ್ ರವುಕೆ ತೊಟ್ಟಿತ್. ತಲೆಗೆ ಅಪ್ಪಯ್ಯ ಕೊಡಗ್‌ನ ಆಸ್ಥಾನ ಉಡುಪು ಬೆಳಿ ಕುಪ್ಪುಸದಟ್ಟಿ ತಲೆಗೆ ಕಟ್ಟ್‌ರುಮಾಲ್ ಕಟ್ಟಿತ್. ಸೊಂಟಕ್ಕೆ ಬೆಳ್ಳಿ ಗೆಜ್ಜೆ ಪಟ್ಟಿ ಸುತ್ತಿತ್. ಒಡಿಕತ್ತಿ ಹಿಡ್ಕಂಡಿದ್ದ ಶೂರತನ ಈ ಉಡುಪುಲಿ ಕಾಣ್‌ತಿತ್. ಕೊನೆಗಳಿಗೆಲಿ

ಅಪ್ಪಯ್ಯನ ಮೊಕ ಮಿಂಚಿಬಾತ್!!!(ಕೊನೆ ಆಶೆ).

ಲಿಹಾರ್ಡಿ : ಅಪ್ಪಯ್ಯ ನಿನ್ನ ದೇವರ್‌ನ ನೆನ್ಸಿಕ.

ಅಷ್ಟೊತ್ತಿಗೆ ಜನ ವೆಂಕಟರಮಣ ದೇವರ ಪಾದಾರವಿಂದಕೆ ಗೋವಿಂದಾ ಗೋವಿಂದಾ ಗೋವಿಂದಾಂತ ಮೂರು ಸಲ ಹೇಳ್ದೊ. ಆ ನಾಮಸ್ಮರಣೆ ಮಡಿಕೇರಿ ಸುತ್ತಮುತ್ತ ಕುಂದುಗಳಲಿ ಪ್ರತಿಧ್ವನಿಸಿತ್.!

ಅಪ್ಪಯ್ಯ : ತಾಯಿ ಕಾವೇರಮ್ಮ ನಿನ್ನ ಮಣ್ಣ್‌ಲಿ ಹುಟ್ಟಿದ ನಂಗೆ ಈ ನೆಲದ ರುಣ ತೀರ್ಸ್‌ವ ಸಮಯಬಾತ್. ಅವ್ವ ಹೇಳ್‌ದಂಗೆ ನನ್ನ ಹೆಸ್‌ರ್ ಈ ಕ್ವಾಟೆ ಬಾಗ್ಲ್‌ಲಿ ಶಾಶ್ವತ ನಿಲ್ಲುವಂಗೆ ಮಾಡ್‌ದೇವರೆ. ಕಣ್ಣ್ ಮುಚ್ಚಿ ಕೈಮುಗ್ತ್. ನಿತ್ತಜನ ನಿತ್ತಲ್ಲೆ ಕುಸ್ತ್ ಬಿದ್ದೊ. ಈ ಕರ್‌ಳ್ ಕತ್ರ್‌ಸುವ ದೃಶ್ಯನ ನೋಡಿ ಜನ ಕಲ್ಲಾದೊ. ಇನ್ನ್ ಮುಂದೆ ಯಾರೂ ಅವರ ಎದ್‌ರ್ ನಿಲ್ಲಿಕಾಗದ್‌ತೇಳಿ ತೋರ್ಸಿದ ದೃಶ್ಯಯಿದ್. ನೋಡ್ತಾಯಿದ್ದ ಜನರ ಕಣ್ಣೀರ್ ಸೊರ್ದ್ ಕ್ವಾಟೆ ಬಾಗ್‌ಲ್ ಚೆಂಡಿ ಆತ್.! "ಇರ್" ತ್ತೇಳಿ ಗಲ್ಲ್ ಕಂಬದ ನೇಣ್ ಬಾಮಿಯೊಳಗೆ ಹೋಗಿ ಸೇರ್ತ್ ಅವನ ದೇಹ......ಅವನ......ದೇಹ ಸೇರ್ತ್....ದೇಹ ಸೇರ್ತ್.

ನಿರೂಪಕ : 1834 ಏಪ್ರಿಲ್ 6ರಂದ್ ಮಡಿಕೇರಿ ಕ್ವಾಟೆನ ಗೆದ್ದ್ ಬಾವುಟ ಹಾರ್ಸಿದ ಬ್ರಿಟಿಷರ ಎದ್‌ರ್ 1837 ಮಾರ್ಚ್ 20ರಂದ್ ಅವರ ಆಡಳ್ತ್‌ನ ಇಷ್ಟ ಪಡದೆ ಅಮರ ಸುಳ್ಯದ ರೈತ ಜೆನ ಕ್ರಾಂತಿಕಾರರಾಗಿ ದಂಗೆನ ಸುರುಮಾಡ್ದೊ. ಈ ದಂಗೆನ ಮುಕಂಡರ್‌ಲಿ ಮುಕ್ಯ ಆಗಿದ್ದ ಗುಡ್ಡೆಮನೆ ಅಪ್ಪಯ್ಯಗೌಡರ್‌ನ ಮತ್ತೆ ಅವರ ಕೂಟುಗಾರರ್ 40–42 ವರ್ಷಕ್ಕಿಂತ ಕಮ್ಮಿ ವಯಸ್ಸ್‌ನವರ್‌ನ ಗಲ್ಲಿಗೇರ್ಸಿದೊ. ಈ ದಂಗೆ ಜ್ಯೋತಿನಂಗೆ ಹೊತ್ತಿ ಉರ್ದ್ ಶಾಶ್ವತ ಆಗಿ ಹೆಸರ್‌ನ ವಳ್ಸಿಕಂಡತ್.

ರಾಮಗೌಡ ಪುಟ್ಟ ಬಸಪ್ಪನ ಮಂಗಳೂರ್‌ನ ಬಿಕ್ರನಕಟ್ಟೆಲಿ ಗಲ್ಲಿಗೇರ್ಸಿದೊ. ಉಳ್‌ದವರೊಟ್ಟಿಗೆ ಚೆಟ್ಟಿ ಮತ್ತೆ ಕರ್ತುಕುಡಿಯರ್‌ಗೆ ಜೀವಾವದಿ ಶಿಕ್ಷೆಕೊಟ್ಟ್ ಅಂಡಮಾನ್‌ಗೆ ಕಳ್ಸಿತ್ ಇಂಗ್ಲೀಷ್ ಸರ್ಕಾರ. ಇದ್ ಈ ದಂಗೆನ ಮುಕ್ಯಾಂಶ. ಇದ್ ಮುಂದೆನ ಪೀಳಿಗೆ ತಿಳಿಯೊಕು. ಹಿಂಗೆ 40–45 ರೊಳಗಿದ್ದ. ಹದಿಮೂರು ಜನ ಶೂರ ಮುಕಂಡರ್‌ಗಳ್‌ನ ಒಮ್ಮಗೆ ಕೊಡಗ್ ದೇಶ ಕಳ್‌ಕಂಡಂಗೆ –ಇಂಗ್ಲೀಷ್‌ರ್ ನೂರ ಹತ್ತ್

ವರ್ಷಕ್ಕೂ ಹೆಚ್ಚ್ ಆಳಿ ಅವರ ಸಂಸ್ಕೃತಿನ ಶಾಶ್ವತ ಆಗಿ ಇಲ್ಲಿ ಬುಟ್ಟ್ ಹೋದೊ.

ಹಂಗೆ 45 ವರ್ಷಕ್ಕಿಂತ ಕಮ್ಮಿನ 13ಜನ ವೀರಯೋದರ್ ರೈತದಂಗೆಲಿ ಪ್ರಾಣ ಕಳ್‌ಕಂಡ್ ಜೀವಾವಧಿ ಶಿಕ್ಷೆ ಅನುಭವಿಸಿದೊ. ಹಿಂಗೆ ಯುದ್ಧ ಕಾರಣಕ್ಕಾಗಿ ಸಿಟ್ಟಾಗಿ ಸುಳ್ಯದ ಜನಕೆ ಇಂಗ್ಲೀಷರ್ ಯಾವ ಸೌಲಭ್ಯನೂ ಕೊಡ್ತ್‌ಲೆ ಸಂಪೂರ್ಣ ತುಳ್‌ದೊ ರಸ್ತೆ, ಸೇತುವೆ, ಶಾಲೆ, ಆಸ್ಪತ್ರೆ ಯಾವುದೂ ಮಾಡ್ತ್‌ಲೆ.

(ಮುಂದೆ ಸುಳ್ಯದ ಬೆಳವಣಿಗೆ ಅದ್ ಶ್ರೀ ಕುರುಂಜಿಯವರ್‌ಂದ) ಇಂವನ ಹಿಡ್ದ್ ಕೊಟ್ಟ್ ಸಹಕರಿಸಿದವುಕೆ ಪೀಚೆಕತ್ತಿ, ಪದಕ, ಒಡಿಕತ್ತಿ, ಆಸ್ತಿಪಾಸ್ತಿ, ಚಿನ್ನ, ದುಡ್ಡು, ಕುದುರೆ ಹಿಂಗೆ ಮೂರ್ ತಲೆಮಾರ್‌ಗಾಗುವಸ್ಟ್ ಬಹುಮಾನ ಕೊಡ್ತ್ ಬ್ರಿಟಿಷ್ ಸರ್ಕಾರ.

ಈಚೆಗೆ ಸದಾನಂದ ಗೌಡರ್ ಮುಖ್ಯ ಮಂತ್ರಿ ಆಗಿರ್‌ಕನ ಕೊಂಬಾರನ ಬೋಪಯ್ಯನವು ವಿಧಾನ ಸಭಾಧ್ಯಕ್ಷ ಆಗಿದ್ದ ಸಮೆಲಿ ಎಲ್ಲರ ಪ್ರಯತ್ನಂದ ಮಡಿಕೇರಿ ಸುದರ್ಶನ ಹೆಬ್ಬಾಗ್‌ಲ್‌ಲಿ ಜನರಲ್ ಕಾರ್ಯಪ್ಪ ಅವರ ಪ್ರತಿಮೆಗೆ ಎದ್‌ರಾಗಿ ಗುಡ್ಡೆಮನೆ ಅಪ್ಪಯ್ಯಗೌಡನ ಪ್ರತಿಮೆ ನಿಲ್ಸಿದೊ. ಹಿಂಗೆ ಬ್ರಿಟಿಷರ್‌ನ ಓಡ್ಸಿಕೆ ಸ್ವಾತಂತ್ರ ಹೋರಾಟಗಾರನಾಗಿ ಕ್ರಾಂತಿಕಾರನಾಗಿ ರೈತದಂಗೆಲಿ ದಂಡ್‌ನ ಮುಕ್ಯಸ್ತ ಆಗಿ ಹೋರಾಡಿ ಹುತಾತ್ಮ ಆದ ನೆನಪುಲಿ ಪ್ರತಿಮೆ ಸ್ಥಾಪನೆ ಮಾಡ್ದೊ. ಇದ್ ಗೌಡ ಜನಾಂಗದ ಧೀರನೊಬ್ಬನ ಕತೆಯಾದರೂ 13ಜನರ್‌ನ ಶಿಕ್ಷೆಗೆ ಗುರಿಪಡ್ಸಿದೊ. ಇಂದಿಗೂ ಅಚ್ಚಳಿಯದೆ ಉಳ್ದ್ ಅಕ್ಟೋಬರ್ 31ರಂದ್ ಹುತಾತ್ಮರ ದಿನವನ್ನಾಗಿ ಜಿಲ್ಲಾಡಳಿತದೊಟ್ಟಿಗೆ ಎಲ್ಲವು ಸೇರಿಕಂಡ್ ಹುತಾತ್ಮರ ದಿನ ಆಚರಿಸ್ತಾವಳೊ. ಆದಿನ ಈ ಎರಡೂ ಪ್ರತಿಮೆಗಳಿಗೆ ಮಾಲಾರ್ಪಣೆ ಆದೆ. ಈಗ ಕೋಟೆ ಬಾಗಿಲ್ ನುಗ್ಗಿದಂಗೆ ಅಪ್ಪಯ್ಯಗೌಡನ ಗಲ್ಲಿಗೇರ್ಸಿದ ಜಾಗಲಿ "**31–10–1837** ಗಲ್ಲಿಗೇರ್ಸಿದ ಜಾಗ" ತೇಳ್‌ವ ನಾಮಫಲಕ ಕಾಂಬಕೆ ಸಿಕ್ಕಿದೆ.

* * * * *

ವಣ್ಕೆ ಓಬವ್ವ

ಕರ್ನಾಟಕಲಿ ಹೆಸ್‌ರ್‌ವಾಸಿ ಆಗಿರ್‌ವ ಚಿತ್ರದುರ್ಗನ ಮದಕರಿ – ನಾಯಕ ತೇಳುವ ರಾಜ ಆಳ್ತಾಯಿತ್. ಬಾರಿ ಬಂದ ಬಸ್ತ್ ಆಗಿ ಕಟ್ಟಿದ್ದ ಕಲ್ಲ್‌ನ ಕ್ವಾಟೆ ಆ ದುರ್ಗಲಿತ್ತ್ ಯಾಗೊಳು ಭಾರಿ ಭದ್ರ ಆಗಿದ್ದರ್‌ಂದ ಕ್ವಾಟೆಮ್ಯಾಲೆ ಮೈಸೂರು ದೇಶನ ಆಳ್ತಾಯಿದ್ದ ಹೈದರಾಲಿನ ಕಣ್ಣ್ ಚಿತ್ರದುರ್ಗದ ಮ್ಯಾಲೆನೆಯಿತ್ತ್ ಹೈದರಾಲಿಗೆ ತಾನ್ ಚಿತ್ರದುರ್ಗದ ಕ್ವಾಟೆ ವಶಪಡ್ಸಿಕಂಡ್ ತನ್ನ ರಾಜ್ಯನ ದೊಡ್ಡದ್ ಮಾಡೊಕುತೇಳಿ ಆಸೆಯಿತ್ತ್ ಹಂಗಾಗಿ ಪ್ರತಿದಿನ ಕ್ವಾಟೆವಳಗೆ ಹೆಂಗೆ ಹೋದುತೇಳಿ ಅಂವ ಸೈನಿಕರೊಟ್ಟಿಗೆ ಹೇಳ್‌ಕಂಡ್ ಆ ಗ್ಯಾನಲೇ ಮುಳ್‌ಗಿರ್‌ತಿತ್ತ್ . ಒಂದು ದಿನ ಹೈದರಾಲಿ ತನ್ನ ಸೈನಿಕರ್‌ನ ಕರ್‌ದ್ ಹೇಳ್ದ್ :–

ಹೈದರಾಲಿ : ಸೈನಿಕರೆ, ನಾವು ಹೆಂಗಾರ್ ಮಾಡಿ ಚಿತ್ರದುರ್ಗದ ಕ್ವಾಟೆನ ವಸಪಡ್ಸಿ ಕಣಕು.ಆಗ ನಮ್ಮ ಮೈಸೂರು ರಾಜ್ಯ ಇನ್ನೂ ದೊಡ್ಡದಾದೆ. ಭಾರಿ ಬಂದ ಬಸ್ತ್ ಇರುವ ಆ ಕಲ್ಲ್‌ನ ಕ್ವಾಟೆವಳಗೆ ಹೆಂಗೆ ಹೋದುತ ತಿಳ್ಕಂಡ್ ಬನ್ನಿ.

ಸೈನಿಕ : ಮಹಾರಾಜಾ, ಅಷ್ಟ್ ಬದ್ರ ಆಗಿರುವ ಕಲ್ಲ್‌ನ ಕ್ವಾಟೆಸುತ್ತ ಒಂದು ಕಂಡಿನೂ ಕಾಂಬದುಲೆ. ಇನ್ನ್ ಆ ಬಾಗ್‌ಲ್‌ಲಿ ಯಾಗೊಳು ಕಾಯ್ತಾಯಿರುವ ಸೈನಿಕರ್ ಆಚೆ ಈಚೆ ಹೋದುಲೆ. ನೊಡೊನ ನಾವು ಹೆಂಗಾರ್ ಮಾಡಿ ಎಲ್ಲಾರ್ ಹೊಕ್ಕಿಕೆ ಒಂದು ಕಂಡಿ ಸಿಕ್ಕುದಾತ ನೋಡಿ ಬಂದವೆ.

ಹೈದರಾಲಿ : ಆಕ್ವಾಟೆ ಹೆಂಗಾರ್‌ಯಿರ್ಲಿ .ಆದರೆ ಕ್ವಾಟೆ ನಮ್ಮ ವಶ ಅಕು

ಹೆಂಗೋ ನಮ್ಮೊಕ ಆಗೇ ತೀರೊಕು.

ಸೈನಿಕ : ಅಪ್ಪಣೆ ಮಹಾರಾಜಾ, ನಾವು ಹೊರ್ಟ್ರೊ, ಬಾಕನ ನೀವುಗೆ ಹೊಸಸುದ್ದಿನೆ ತಂದವೆ.!

ಹೈದರಾಲಿ : ಸೈನಿಕರೆ, ಹೋಗಿಬನ್ನಿ ನೀವ್‌ಗೆ ಜಯಾಗಲಿ.

ನಿರೂಪಕ : ಹೈದರಾಲಿನ ಸೈನಿಕರ್ ದೂರಂದ ಕ್ವಾಟೆಗೆ ಹೋಗೊವರ್ನ ಬರೋವರ್ನ ಯಾರ್‌ವಳೊತೇಳಿ ಕಾಯ್ತಾಯಿದ್ದೊ...ಆಗ ಒಂದು ದಿನ ತಲೆಮ್ಯಾಲೆ ಮೊಸುರ್ ಮಡ್ಕೆ ಮಡ್ಕಂಡ್ ಹೋಗ್ತಾಯಿರುವ ಹೆಂಗ್ಸ್‌ನ ಕಂಡವೆ ಸೈನಿಕರ್ ಅವಳ್‌ನ ಹಿಂಬಾಲ್ಸುವೆ ಆಗ..........

1ನೇ ಸೈನಿಕ : ಮೊಸುರು ಮಾರ್ವ ಹೆಂಗ್ಸ್ ಸಣ್ಣ ಕಂಡಿಲಿ ಹುಕ್ಕಿ ಹೋಗ್ತವುಟ್ಟು ನಾವು ಇಲ್ಲೆ ಮರೆಲಿ ನಿತ್ತ್ ನೋಡೊನ.

2ನೇ ಸೈನಿಕ : ಹೌದು, ಹೌದು ಯಾರೂ ಮಾತಾಡ್‌ಬಡಿ. ಅವ್ಳು ಆಕಡೆ ಈಕಡೆ ನೋಡಿಯಾರೂ ಇಲ್ಲೆತ ಮೆಲ್ಲಂಗೆ ಕ್ವಾಟೆನ ಸಣ್ಣ ಕಂಡಿಲಿ ನುಗ್ತಾವುಟ್ಟು. ನಾವು ಇಲ್ಲೆ ಮರೆಲಿ ನಿತ್ತ್ ನೋಡ್ತಾ ಇರೊನ.

ನಿರೂಪಕ : ಹಿಂಗೆ ಮೊಸ್‌ರು ಮಾರುವ ಹೆಂಗ್ಸ್ ಕಂಡಿವಳಗೆ ಹುಕ್ಕಿ ಹೋಕಾಕನ ಸೈನಿಕರ್ ದಾರಿ ಕಂಡೊ ಅವ್ಳು ಹೋದ ಮ್ಯಾಲೆ ಇವು ನುಗ್ಗುವಂಗೆ ಪಿಸಿಪಿಸಿ ಮಾತಾಡಿಕಂಡೊ.

ಸೈನಿಕ : ನಾವು ಈ ಕಂಡಿಲಿ ಒಟ್ಟಿಗೆ ನುಗ್ಗಿಕಂತೂ ಅದುಲೆ. ಅದರ್‌ಂದಾಗಿ ಒಬ್ಬೊಬ್ಬನೆ ನುಗ್ಗಿ ಪೊಯಿ.

ನಿರೂಪಣೆ : ಅದೇ ಹೊತ್ತಿಗೆ ಕ್ವಾಟೆಬಾಗ್ಲ್ ಕಾಯ್ತಾಯಿದ್ದ ಕ್ವಾಟೆ ಕಾವಲ್‌ಗಾರ ಮನೆಗೆ ಊಟಕ್ಕೆ ಹೋಗಿದೆ. ಕಾವಲ್‌ಗಾರನ ಹೆಣ್ಣ್‌ನ ಹೆಸ್‌ರೇ ಓಬವ್ವ, ಈಗ ಕಾವಲ್‌ಗಾರ ಹೆಣ್ಣ್‌ನ ಕರ್‌ದದೆ.

ಮನೆಲಿ ಕಾವಲ್‌ಗಾರ: ಓಬವ್ವ, ಓಬವ್ವ ನಂಗೆ ಊಟ ಬಡ್ಸ್ ನಾನ್ ಉಂಡ್ ಬ್ಯಾಗ ಹೋಕುಬಾಗ್ಲ್ ಹತ್ರ ಯಾರೂಯಿಲ್ಲೆ.

ಓಬವ್ವ : ಬನ್ನಿ ಬನ್ನಿ ಬ್ಯಾಗ ಬನ್ನಿ. ನೀವುಗೆ ಊಟ ಬಡ್ಸಿನೆ ಬಾಳ್ಲೆ ಹಾಸ್ಕ್ಯೊಳೆ

ಕಾವಲ್‌ಗಾರ : ಆತ್ ಬ್ಯಾಗ ಬ್ಯಾಗ ಇಕ್ಕ್. ಕ್ವಾಟೆ ಕಂಡಿಹತ್ರ ಯಾರೂಯಿಲ್ಲೆ. ಬ್ಯಾಗಹೋಕು

ಓಬವ್ವ : ನೀವು ಊಟ ಮಾಡ್ತಾಯಿರಿ, ನಾನ್ ಅಷ್ಟೊತ್ತಿಗೆ ಒಂದು ಬಿಂದಿಗೆ ನೀರ್ ತಕಂಡ್ ಬನ್ನೆ.

ನಿರೂಪಕ : ಒಬವ್ವ ಗಂಡಂಗೆ ಊಟ ಬಡ್ಸಿ ಕ್ವಾಟೆ ಕಂಡಿ ಹತ್ರಯಿರ್‌ವ ಕೆರೆಂದ ನೀರ್ ತಕಂಡ್ ಬಾಕೆ ಬಿಂದಿಗೆ ತಕಂಡ್ ಹೋದೆ. ಅಷ್ಟೊತ್ತಿಗೆ ಅಲ್ಲಿ ಕಂಡಿ ಹತ್ರ ಏನೋ ಪಿಸಿ ಪಿಸಿ ಮಾತ್‌ಕೇಳ್ದೆ. ಆಲ್ಸಿದ ಓಬ್ಬವ್ವ ಎಲ್ಲೋ ಪಿಸಿಪಿಸಿ ಮಾತ್ ಕೇಳ್ತಾವುಟ್ಟಲ್ಲಾ ? ಎಲ್ಲಿಂದ ಬಾತ್ ಈ ಮಾತ್ ತೇಳಿ ಮೆಲ್ಲಂಗೆ ಕಂಡಿನ ಬಗ್ಗಿ ನೋಡ್ದೆ. ಅಷ್ಟೊತ್ತಿಗೆ ಕಂಡಿಲಿ ಯಾರ್‍ದೋ ತಲೆಕಂಡದೆ. ಅಯ್ಯೋ ಯಾರೊ ಕಳ್ಳರ್‌ವಳೆಗೆ ಹುಕ್ಕ್‌ತಾ ವಳೊಲಾ ? ನಾನ್ ಬ್ಯಾಗ ಹೋಗಿ ಗಂಡನ ಕರ್‌ದನೆತ ಓಡ್ತ್. ಓಬವ್ವ ಬಿಂದಿಗೆನ ಅಲ್ಲೆ ಬುಟ್ಟ್ ಗಂಡನ ಕರೆಕೆ ಮನೆಗೆ ಓಡ್ದೆ ನೋಡ್ರೆ ಗಂಡನ ಊಟ ಮುಕ್ತ್‌ಲೆ, ಪಾಪ ಯಾಕೆ ಊಟ ಮಾಡೊವರ್‍ನ ಕರೆದುತ ಅಲ್ಲೆ ಮೂಲೆಲಿದ್ದ ವಣ್‌ಕೆನ ತಕಂಡ್ ಸೀರೆನ ಎತ್ತಿ ಕಟ್ಟಿ ಕ್ವಾಟೆ ಕಂಡಿ ಹತ್ರ ಓಡ್ದೆ ಕಂಡಿವಳಗೆ ಆಗಲೇ ಇಬ್ಬೊರು ನುಗ್ಗಿ ಬುಟ್ಟಿದ್ದೊ. ಅವು ಇವ್ವುನ ಕಂಡ್ ಅಡ್‌ಂಗಿ ಕುದ್ದೊ.ಆಗ ಓಡಿಬಂದ ಓಬವ್ವ ವಣ್‌ಕೆನ ಎತ್ತಿ ನುಗ್ತಾಯಿದ್ದವನ ತಲೆಗೆ ಬಡ್‌ದದೆ. ಅವನ ಎಳ್ಡ್ ಹಾಕ್‌ಕನ ಇನ್ನೊಬ್ಬ ಬಂದದೆ ಇವ್ವು ಹಿಂಗೆ ಬಡಿತಾ ಬಿದ್ದವರ್‌ನ ಎಳ್ದ್ ಹಾಕ್ತಾನೆಯಿತ್ತ್ ಅವಳ ಬಡಿಯಟಕೆ ಸೈನಿಕರ್ ರಕ್ತಕಾರಿ ಸತ್ತೊ. ಕಾವಲ್‌ಗಾರನ ಊಟಮುಕ್ತ್ ಇನ್ನೂ ಓಬವ್ವ ಯಾಕೆ ಬಾತ್‌ಲೆತ ನೋಡಿಕೆ ಬಂದಂವ ಸನ್ನಿವೇಶನ ನೋಡಿ ಅವಂಗೆ ಆಶ್ಚರ್ಯ ಆತ್. ಗಂಡನ ಕಂಡ ಓಬವ್ವ ಜೋರಾಗಿ ಕಿರ್‌ಚಿ ಹೇಳ್ದೆ.

ಓಬವ್ವ : "ಹೈದರಾಲಿ ಸೈನಿಕರ್ ನಮ್ಮ ಕ್ವಾಟೆವಳಗೆ ನುಗ್ತಾವಳೊ. ಯುದ್ದ

ಕಹಳೆ ಉರ್ಗ್ಗಿ (ಊದಿ) ಕಹಳೆ ಸದ್ದ್‌ಗೆ ಸೈನಿಕರ್ ಓಡಿ ಬರ್ಲಿ "ಹೈದರಾಲಿ ಸೈನಿಕರ್‌ನ ಸದೆ ಬಡ್ದ್ ದುರ್ಗನ ಉಳ್ಸನೊ"!! "ಕಾವಲ್‌ಗಾರ ಯುದ್ಧ ಕಹಳೆ ಊದಿದೆ. ಮದಕರಿ ನಾಯಕನ ಯುದ್ಧ ಕಹಳೆ ದನಿ ಕೇಳ್ದಂಗೆ ಸೈನಿಕರ್ ಕ್ವಾಟೆನ ಮುತ್ತಿಕಂಡವೆ. ಓಬವ್ವ ಸೈನಿಕರೊಟ್ಟಿಗೆ ಹೋರಾಡ್ತಾ "ಮದಕರಿ ನಾಯಕಂಗೆ ಜಯಾಗಲಿ ಜಯಾಗಲಿ ತೇಳ್ತಾಯಿದ್ದದೆ.

ಅಷ್ಟೊತ್ತಿಗೆ ಹೈದರಾಲಿ ಸೈನಿಕರ್‌ಲಿ ಒಬ್ಬ ಅಡ್‌ಂಗಿ ಕುದ್ದಂವ ಓಬವ್ವನ ಹಿಂದೆಂದ ಬಂದ್ ಅವುಳ್‌ನ ಚಾಕ್‌ಲಿ ಕುತ್ತಿ ಕೊಂದದೆ. ಓಬವ್ವ ಆ ಬ್ಯಾನೆಲೂ " ಮದಕರಿ ನಾಯಕಂಗೆ ಜಯಾಗಲಿ ಮದಕರಿ ಮದಕರಿ ಕ್ವಾಟೆ ಉಳಿಯಲಿತ ಹೇಳ್ಕಂಡ್ ಕೊನೆ ಉಸ್‌ರೆಳ್ದೆ. ಅವಳ ಧೈರ ಸಾಹಸನೋಡಿ ಚಿತ್ರದುರ್ಗದ ಕ್ವಾಟೆ ಕಂಡಿಗೆ "ಓಬವ್ವನ ಕಂಡಿ" ತೇಳಿ ಹೆಸ್‌ರ್‌ಬಾತ್...... ಇಂದಿಗೂ......

ಚಿತ್ರದುರ್ಗಲಿ ಓಬವ್ವನ ಹೆಸರ್ ಮನೆ ಮಾತಾಗುಟ್ಟು. ಸ್ವಾತಂತ್ರ್ಯಕ್ಕಾಗಿ ಗಂಡ್ ಹೆಣ್ಣ್‌ತ ಅಂದ್‌ನ ಕಾಲಲಿ ಹೋರಾಡ್ದವು ಬಹಳ ಜನವಳೊ. ಭಾರತಲಿ ಇಂಥ ದಿಟ್ಟ ಧೈರಗಾರ್ತಿ ಮಹಿಳೆಗ ಸಾಕಸ್ಟ್ ಆಗಿ ಹೋಗೊಳೊ. ಹಂಗೆ ಒಬವ್ವ ಅವಳ ವಣ್‌ಕೆಲಿ ಮಾಡ್‌ದಂತ ಸಾಹಸ ಅದರ್ಲಿ ದೇಶಪ್ರೇಮ ಸ್ವಾಮಿ ಭಕ್ತಿ ಎದ್ದ್ ಕಾಣ್ತಾವುಟ್ಟು, ಎಷ್ಟೋ ವೀರ ಮಹಿಳೆಗ ಅವರ ಪ್ರಾಣನ ಬಲಿಕೊಟ್ಟ್ ತ್ಯಾಗಿಗಳಾಗಿ ಈ ದೇಶಲಿ ಮೆರ್ದೊಳೊ. ಸ್ವಾತಂತ್ರಪೂರ್ವಲಿ ಹೋರಾಡಿ ನಮ್ಮ ನಾಡ್‌ಲಿ ಸ್ಥಿರ ಆದವು ಕಿತ್ತೂರ ರಾಣಿ ಚೆನ್ನಮ್ಮ, ಕೆಳದಿಯ ಚೆನ್ನಮ್ಮ, ಒಣ್‌ಕೆ ಒಬವ್ವ, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ,ಗುಡ್ಡೆಮನೆ ಅಪ್ಪಯ್ಯ ಗೌಡ ಹಿಂಗೆ ಹೇಳ್ತಾಹೋದರೆ ಪಟ್ಟಿಗೆ ಕೊನೆನೆಯಿಲ್ಲೆ. ಹಂಗೆ ಇಂದ್‌ನ ಮಹಿಳೆಗ ಎಲ್ಲಾ ಕ್ಷೇತ್ರಲೂ ತ್ಯಾಗಮಯ ಜೀವನ ನಡ್ಸ್‌ತಾ ಇರ್ದೊಕ್ಕೆ ಹಿಂದೆನ ಇಂತಾ ಒಬವ್ವನಂತವರ ಸಾಹಸ ಜೀವನ ಕತೆನೆ ಕಾರಣತೇಳಕ್.

* * * *

ಓಬವ್ವ

ಕನ್ನಡದ ಚಿತ್ರದುರ್ಗ ಕ್ವಾಟೆ
ಮದಕರಿ ನಾಯಕನ ॥ ಕಾವಲ್‌ಗಾರನ
ಹೆಣ್ಣ್ ಅವ್‌ಳು– ಓಬವ್ವ.. ಅವ್‌ಳೇ ಕುಲನಾರಿ ಓಬವ್ವಾ... ॥

ಕಂಡಿವಳಗೆ ವೈರಿ ತಲೆಕಂಡ್
ಓಡಿಬಂದ್ ವಣ್‌ಕೆ ತಂದ್
ತಲೆಗೆ ಬಡ್ಜ್ ಶರೀರ ಎಳ್ದ್ ರಾಶಿ ಹಾಕಿದವ್‌ಳೂ – ಅವಳೇ ಓಬವ್ವಾ ॥


ಅನ್ನ ಕೊಟ್ಟದೊರೆ ಮದಕರಿ ನಾಯಕಂಗೆ
ತನ್ನ ಪ್ರಾಣರಕ್ತ ಕೊಟ್ಟ್
ರಾಜಧರ್ಮ ಸೇವೆ ಮೆರ್‌ದಾ ಅವ್‌ಳೇ ಕುಲನಾರಿ ಓಬವ್ವಾ ॥

ವಣ್‌ಕೆ ಪೆಟ್ಟ್ ಕೊಟ್ಟ್
ಸಾಹಸ ಮೆರ್ದ್ ತೋರ್ಸಿದವ್‌ಳು
ರಾಜಧರ್ಮ ಸೇವೆ ಮೆರ್‌ದಾ– ಅವಳೇ ಕುಲನಾರಿ ಓಬವ್ವಾ ॥

ಕಂಡಿವಳಿಗೆ ವೈರಿ ತಲೆಕಂಡ್
ಬಿಂದಿಗೆ ಮಡ್ಗಿ । ಓಡಿ ವಣ್‌ಕೆ ತಂದ್
ಉಂಡ ಮನೆ ಋಣ ತೀರ್ಸಿದವ್‌ಳು– ಅವ್‌ಳೇ ಕುಲನಾರಿ.. ಓಬವ್ವಾ ॥

ಅವ್‌ಳೇ ಓಬವ್ವಾ.. ವಣ್‌ಕೆ ಓಬವ್ವಾ ॥
ಚಿತ್ರದುರ್ಗ ಕ್ವಾಟೆ.. ಮದಕರಿನಾಯಕನ
ಕಾವಲ್‌ಗಾರನ ಹೆಣ್ಣ್!. ಓಬವ್ವ... ಅವ್‌ಳೇ... ಓಬವ್ವಾ ॥

* * * * *



ವಣ್ಕೆ ಓಬವ್ವ

ಭಾರತದ ಕೋಗಿಲೆ ಸರೋಜಿನಿದೇವಿ ನಾಯ್ಡು

ಸುಶೀಲ : ಇಂದ್ ನಮ್ಮ ಸ್ವಸಹಾಯ ಸಂಘಲಿ ವಿಶೇಸಾದ ಒಂದು ಮೀಟಿಂಗ್‌ವುಟ್ಟು.

ಸರಳ : ಅದೆಂತ ವಿಸೇಸ ಸುಶೀಲ?

ಸುಶೀಲ : ಎಂತತೇಳ್ರೆ ಈಗ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆತೇಳಿ ವರ್ಸ ವರ್ಸ ಬಂದದೆಲ ಅದ್‌ಕಾಗಿ ಪ್ರತೀ ವರ್ಸ ದೇಶದ ಒಬ್ಬ ಹೆಣ್ಣ್‌ಮಗಳ ವಿಸಯದ ಬಗ್ಗೆ ಮಾತಾಡೊಕು ಯಾಕಾಗಿ ಅವುಳು ಆ ಮಹತ್ವದ ಸ್ಥಾನ ಪಡ್‌ದುಟ್ಟುತ- ಅದರ್‌ಲಿ ಗೆದ್ದವುಕೆ ದಿನದ ಮಹತ್ವದ ಬಗ್ಗೆ ವಿಸೇಸ ಬಹುಮಾನ ಕೊಡುವ ಕಾರ್ಯಕ್ರಮ ಯಿದ್ದದೆ.

ಸರಳ : ಆದರೆ ಈ ಸಲದ ವಿಸೇಸ ವ್ಯಕ್ತಿ ಯಾರ್‌ತೇಳಿ ತಿಳ್ದ್ ಆದಿನ ಅವಳ ಬಗ್ಗೆ ಮಾತಾಡೊಕು ಇಂದ್ ಮಧ್ಯಾಹ್ನ ಬ್ಯಾಗ ಪೋಯಿ:

ಸಂಘದ ಅಧ್ಯಕ್ಷೆ: ಯಾರ್‍ಯಾರ್ ಹೆಸ್‌ರ್ ಸೂಚನೆ ಮಾಡ್ರೆ ಒಬ್ಬೊಬ್ಬಾಗಿ ಜಬಾವುಕೊಡಿ. ಗ್ಯಾನ ಮಾಡ್ದವು. ಹೇಳ್ದ ಹೆಸ್‌ರ್ ಒಂದಲ್ಲ ಒಂದು ಕಾರಣಂದ ಯಾರಿಗೂ ಇಷ್ಟ

ಆತ್‌ಲೆ. ಅಷ್ಟೊತ್ತಿಗೆ ಅದೇ ದಾರಿಲಿ ಹೋಗ್ತಾಯಿದ್ದ ರಿಟೈರ್ಡ್ ಸ್ಕೂಲ್ ಟೀಚರ್ ಒಂದು ವಳ್ಳ. ಸಲಹೆ ಕೊಡ್ತ್. ಆ ಸಲಹೆ ಎಲ್ಲವುಕು ಇಷ್ಟ ಆತ್.

ಟೀಚರ್ : ಈ ವಿಷಯದ ಬಗ್ಗೆ ನೀವೇನ್ ತಲೆ ಕೆಡ್ಸಿ ಕಣ್‌ಬಡಿ ನನ್ನ ಅಭಿಪ್ರಾಯದಂಗೆ ಭಾರತದ ಮಹಿಳೆಯರ್‌ಲಿ ವಿಶೇಷ ಸ್ಥಾನ ಪಡ್ದ ಭಾರತದ ಕೋಗಿಲೆತೇಳಿ ಹೆಸ್‌ರ್ ಪಡ್ದ ಸರೋಜಿನಿ ದೇವಿ ನಾಯ್ಡು ಇವರ ಬಗ್ಗೆ ಮಾತಾಡ್ದು ವಳ್ಳದ್. ಈಗೆಲ್ಲ ರಾಜಕೀಯವಾಗಿ ಬಂದ ಹೊಸಬರ ವಿಚಾರ ಮಾತಾಡುವೆ. ಇಂತ ಅಪೂರ್ವ ಮಹಿಳೆ ಬಗ್ಗೆ ತಿಳ್‌ಕೊಂಬದು ವಳ್ಳದಲ್ಲಾ?

ಎಲ್ಲವೂ : ಹೌದು ಹೌದು ಮಹತ್ವದ ವಿಸಯಯಿದ್.

ಸರಳ : ಆದರೆ ಅವರ ವಿಸಯದ ಬಗ್ಗೆ ಸರಿಯಾಗಿ ಗೊತ್ತಿರೊವು ಬೇಕಲೆ?

ಟೀಚರ್ : ಅದ್‌ಕೇನ್ ನಾನೆ ನೀವುಗೆ ತಿಳ್ಸಿಕೊಟ್ಟನೆ. ನಂಗೂ ನಿಮ್ಮೊಟ್ಟಿಗೆ ಸೇರಿ ಮಾತಾಡಿಕೆ ಅವಕಾಸ ಆಗಿ ನಂಗೆ ಗೊತ್ತಿರುದರ್‌ನ ತಿಳ್ಸಿ ಕೊಡಿಕೆ ವಳ್ಳ ಸಂದರ್ಭ ಆದೆ.

(ಕತೆ ಸುರಾತ್)

ಟೀಚರ್ : ಭಾರತದ ಕೋಗಿಲೆ ತೇಳಿ ನೀವು ಸಣ್ಣ ಕ್ಲಾಸ್‌ಲಿ ಪಾಠ ಓದ್ಯೊಳರಿ ಅಲ್ಲಾ?

ಸರಳ : ಹೌದು, ಅದ್ ಸಣ್ಣ ಕ್ಲಾಸ್‌ಲಿ ಈಗೆಲ್ಲ ಮರ್ತ್ ಹೋಗುಟು.

ಸ್ವಸಹಾಯ ಹೆಣ್ಮಕ್ಕ ಕೆಮಿ ಕೊಟ್ಟ್ ಆಲ್ಸಿಕೆ ಕುದ್ಯೊ.

ಸರೋಜಿನಿ ದೇವಿನ ಅಪ್ಪ ಅಘೋರನಾಥ ಚಟ್ಟೋಪಾಧ್ಯಾಯ. ಅವ್ವ ವರದದೇವಿ ಸುಂದರಿ ಹುಟ್ಟಿದ್ದ್ 13.02.1879ರಂದ್ ಹೈದರಬಾದ್‌ಲಿ. ಇವು ಬಂಗಾಲಿಯಾಗಿದ್ಯೊ. ಅವರ ಹಿರಿಯರ್ ನಿಜಾಮರ

ರಾಜ್ಯ ಹೈದರಾಬಾದಿಗೆ ಬಂದ್ ನೆಲ್ಸಿದ್ದೊ. ಅಪ್ಪ ಅಘೋರನಾಥ ವಿಜ್ಞಾನಿಯಾದರೆ ಅವ್ವ ವರದದೇವಿ ಸುಂದರಿ ಕವಿಯತ್ರಿ. ಅಪ್ಪನ ಬುದ್ದಿವಂತಿಕೆ ಅವ್ವನ ಕಲ್ಪನಾಶಕ್ತಿ ತೇಲುವ ಭಾವ ಜೀವಿ ಇವೆರಡರ ಸಂಗಮದ ಕೊಡುಗೆ ಸರೋಜಿನಿ.

ಸರಳ : ಹಂಗಾದರೆ ಸರೋಜಿನಿ ಬಂಗಾಲಿ ಆಗಿತ್ತಲ್ಲಾ?

ಟೀಚರ್ : ಹೌದು! 18ನೇ ಶತಮಾನಲಿ ಪ್ರಥಮವಾಗಿ ಲಂಡನ್‌ಲಿ ಓದಿ ಬಂದ್ ಭಾರತದ ಉತ್ತರ ಪ್ರದೇಶಲಿ ರಾಜ್ಯಪಾಲೆ ಯಾಗಿ ಕರ್ತವ್ಯ ನಿರ್ವಹಿಸಿದ ಒಬ್ಬ ಮಹಾ ಬುದ್ಧಿವಂತೆ ಮಹಿಳೆ ತೇಳಿಕೆ ಹೆಣ್ಣ್‌ಕುಲಕೆ ಹೆಮ್ಮೆ ಆದೆ.

ಸರಳ : ಹೌದಾ ಆಗಳೆ ಅವುಳು ಅಸ್ಟ್ ಓದಿತ್ತಾ?

ಟೀಚರ್ : ಹೌದು, ಸರೋಜಿನಿಗೆ ಬಾಲ್ಯಂದ ವಿಧ್ಯಾಭ್ಯಾಸತೇಲ್ರೆ ಆಸಕ್ತಿ ಶ್ರದ್ದೆ ತುಂಬಾಯಿತ್ತ್. ಅವಳು ತನ್ನ ಹನ್ನೆರ್‌ಡನೆ ವಯ್‌ಸಿಗೆ ಹತ್ತನೆ ಕ್ಲಾಸ್ ಪಾಸಾತ್. ಅದರೊಟ್ಟಿಗೆ ಆಂಗ್ಲ ಸಾಹಿತ್ಯದ ಕಡೆ ವಯಸಿಗೂ ಮೀರಿ ಹದಿಮೂರ್‌ನೆ ವಯ್‌ಸಿಗೆ ಸರೋವರ ಕನ್ಯೆ ತೇಳುವ 1400 ಸಾಲ್‌ಗಳ ಒಂದು ಆಂಗ್ಲ ಕವನ ಮತ್ತೆ 2000 ಸಾಲ್‌ಗಳ ಒಂದು ಆಂಗ್ಲ ನಾಟಕನ ಬರ್‌ದ್ ಮುಗ್ಸಿತ್.

ಸರಳ : ಅಬ್ಬಾ! ಆಗನ ಕಾಲಲೆ ನಮ್ಮ ಹೆಣ್‌ಮಕ್ಕ ಎಸ್ಟ್ ಉಸಾರಿದ್ದೊ ಅಲ್ಲಾ?

ಟೀಚರ್ : ಅಸ್ಟ್ ಮಾತ್ರ ಅಲ್ಲ. ಸರೋಜಿನಿ ದೇವಿಗೆ ಹಾಡಿಕೆ ಇಂಪುನ ರಾಗಯಿತ್ತ್. ಅವಳ ಅವ್ವ ಬಂಗಾಳಿ ಪದಗಳ್‌ನ ಬರ್‌ದ್ ಮಕ್ಕಳೆದ್‌ರ್ ಹಾಡುವ ಪದ್ಧತಿ. ಅದರ್‌ಂದಾಗಿ ಅವ್ವನಂಗೆ ಅವ್‌ಳೂ ಹಾಡಿಕೆ ಪ್ರಯತ್ನ ಪಡ್ತಾಯಿತ್ತ್. ಅವ್ವನ ಆಗಾಗ ಹಾಡಿಕೆ ಪೀಡ್‌ಸ್ತಾಯಿತ್ತ್. ಈ ತರ ಅವಳ ಸಂಗೀತ ಜ್ಞಾನ ಸುರಾತ್. ತಾನೆ ಬರ್‌ದ ಕವನಗಳ್‌ನ ಹಾಡ್ತಾಯಿದ್ದದರ್‌ಂದ ಇವ್‌ಳಿಗೆ ಭಾರತದ ಕೋಗಿಲೆತೇಳಿ

ಹೆಸ್‌ರ್ ಬಾತ್.

ಸರಳ : ಕಂಡಿತ ಇಂದ್‌ನ ವಿಸಯ ಬಹಳ ಮಹತ್ವದಾಗುಟ್ಟು. ಕತೆ ಮುಂದುವರಿಸಿ.

ಟೀಚರ್ : ಮಾತ್ರ ಅಲ್ಲ. ಇಂಗ್ಲೀಷ್, ಪ್ರೆಂಚ್ ಬಾಷೆಗಳ್‌ನ ಕಲ್‌ತದ್ದರ್‌ಂದ 1895ರ್‌ಲಿ ಸರೋಜಿನಿ ಕೇಂಬ್ರಿಡ್ಜ್ ಸೇರಿಕೆ ಇಂಗ್ಲೆಂಡಿಗೆ ಹೋತು. ಅನಾರೋಗ್ಯದ ಕಾರಣ ಸೇರಿಕಾಗದೆ ಇಟೆಲಿ ಸ್ವಿಟ್ಜರ್‌ಲ್ಯಾಂಡ್ ದೇಶಗಳ್‌ನ ನೋಡಿ ಬಾತ್.

ಲಂಡನ್‌ಲಿ ಸರೋಜಿನಿ ಕಾಲೇಜ್ ಓದ್ತಾಯಿರ್‌ಕನ ಹೈದರಾಬಾದ್‌ನ ನಿಜಾಮರ್ ಬಹಳ ಕುಸಿಪಟ್ಟ್ ವಿಧ್ಯಾಭ್ಯಾಸದ ಕರ್ಚಿಗಾಗಿ ಹಣ ಕಳ್‌ಸ್ತಾಯಿದ್ದೊ. ವಿಧ್ಯಾಭ್ಯಾಸನ ನಡು ನಡುಲೆ ಆಂಗ್ಲ ಕವನ ಬರ್ದ್ ಪ್ರಕಟ ಪಡಿಸ್ತಾಯಿತ್ತ್ ಸರೋಜಿನಿ. ಇಂಗ್ಲೆಂಡ್‌ನ ಜನಕೆ ಇವಳ ಕವನ ಬಹಳ ಇಷ್ಟ ಆಗಿತ್ತ್. ಹಿಂಗೆ ಇರ್‌ಕನ "ಎಡ್‌ಮಂಡ್‌ಗಾಗಿ" ತೇಳುವ ದೊಡ್ಡ ಪಂಡಿತ ಇವಳ ಕವನಗಳ್‌ನ ಮೆಚ್ಚಿ ವಿಶಾಲ ದೇಶ ಭಾರತದ ಬಗ್ಗೆ ಕವಿತೆ ರಚಿಸೊಕುತೇಳಿ ಸಲಹೆ ನೀಡ್ತ್. ಅಂದ್‌ಂದ ಸರೋಜಿನಿ ತನ್ನ ದೇಶದ ಬಗ್ಗೆ ಕವನ ಬರೆಕೆ ಸುರಾತ್. ಹಿಂಗಾಗಿ ಅವ್‌ಳಿಗೆ ಭಾರತ ದೇಶದ ಮ್ಯಾಲೆ ಪ್ರೀತಿ ಹೆಚ್ಚಾತ್.

ಭಾರತಕ್ಕೆ ವಾಪಾಸ್ ಬಂದ ಮ್ಯಾಲೆ ಸರೋಜಿನಿ ಅವಳ ಮೊದುವೆ ಡಾ|| ಗೋವಿಂದ ನಾಯ್ಡು ಎಂಬುವರೊಟ್ಟಿಗೆ ಆತ್. ಇವುಕೆ ಪದ್ಮಜ, ಲೀಲಾಮಣಿ, ಜಯಸೂರ್ಯ ಮತ್ತೆ ರಣಧೀರತೇಳುವ ನಾಕ್ ಮಕ್ಕ ಆದೊ.

ಸರಳ : ಹೋ ಆಗಲೆ ಅಂತರ್ಜಾತಿ ಮೊದುವೆ ಇತ್ತ್‌ತಾತ್ ಅಲಾ ಟೀಚರ್.?

ಟೀಚರ್ : ಹೌದು ಅವೆಲ್ಲ ಆಗ ತುಂಬ ಓದಿದವು. ವಿಶಾಲ ಮನ್ಸ್

ಇದ್ದವು. ಅಲ್ಲದೆ ಅಷ್ಟ್ ಓದಿದ ಗೂಡೆಗೆ ಓದಿದ ಗಂಡ್ ಸಿಕ್ಕೊಕಲಾ?

ಹಿಂಗೆ ಸರೋಜಿನಿ ದೇವಿ ನಾಯ್ಡು ಭಾರತದ ಜನಜೀವನ ಪ್ರಕೃತಿ ಸೌಂದರ್ಯದ ಬಗ್ಗೆ ಬರೆಕಾತ್. ಕಾಲದ ಪಕ್ಷಿ, ಚಿನ್ನದ ಹೊಸಿಲು, ಮುರಿದ ರೆಕ್ಕೆ, ಭಾರತದ ನೆಯ್ಗೆ ಯವುರ ಇಂತ ಕವನಗಳ್‌ನ ಬರ್ದ್ ಇವೆಲ್ಲ ಜಗತ್‌ಪ್ರಸಿದ್ಧ ಆಗುಟ್ಟು.

1941ರ್‌ಲಿ ಇವು ಐ.ಇ.ಎಸ್ ಸಂಸ್ಥೆಯ ಅಧ್ಯಕ್ಷೆ ಆದೊ.

ಸರೋಜಿನಿದೇವಿ ನಾಯ್ಡು ಭಾರತದ ಪ್ರಬಾವಿ ಶಾಲಿ ಪ್ರಥಮ ಮಹಿಳೆ ಆಗಿದ್ದರೂ ಸನ ಕಾವ್ಯದಷ್ಟೆ ಸ್ವಾತಂತ್ರ ಹೋರಾಟ ಬುದ್ಧಿವಂತಿಕೆಯೊಟ್ಟಿಗೆ ದೇಶಭಕ್ತಿನೂ ಕೂಡಿ ಧೈರ ಬಾತ್. ಬಾಪೂಜಿಯವರೊಟ್ಟಿಗೆ ನಿಕಟ ಸಂಬಂಧ ಹೊಂದಿದ್ದ ಇವು ಅವರ ಶಿಷ್ಯೆಯಾಗಿ ಸ್ವಾತಂತ್ರ ಹೋರಾಟದ ಚಳುವಳಿಲಿ ಭಾಗವಹಿಸಿದೊ. ಸುಮಾರ್ ವರ್ಷ ಸೆರೆಮನೆ ವಾಸನೂ ಅನುಭವಿಸಿದೊ. ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷಣಿಯಾದ ಪ್ರಥಮ ಮಹಿಳೆ ಇವು.

ಭಾರತಕ್ಕೆ ಸ್ವಾತಂತ್ರ ಬಂದ ವ್ಯಾಲೆ ಉತ್ತರ ಪ್ರದೇಶದ ರಾಜ್ಯಪಾಲೆಯಾಗಿ ದಕ್ಷತೆಂದ ಆಳ್ದೊ. ಇಂತ "ಭಾರತದ ಕೋಗಿಲೆ" ಎಪ್ಪತ್ತು ವರ್ಷ ಬದ್‌ಕಿ 1949 ಮಾರ್ಚ್ 2 ರಂದ್ ಅಸ್ತಮಿಸಿದೊ. ಹಿಂಗೆ ಸರೋಜಿನಿದೇವಿ ನಾಯ್ಡು ಇಷ್ಟೆಲ್ಲಾ ಸಾಧನೆ ಮಾಡಿ ಭಾರತದ ಮಹಿಳೆಗಳಿಗೆ ಮೂಲಸ್ತ್ರೀಗುರು ಕಾರ್ಣಳಾಗಿ ನಕ್ಷತ್ರದಂಗೆ ಮಿನ್‌ಗ್‌ತಾ ಇರ್‌ದು ಈ ದೇಶದ ಹೆಮ್ಮೆನ ವಿಸಯಗಳ್‌ಲಿ ಒಂದು.

ಎಲ್ಲವು : ಕಂಡಿತ ಹೌದು. ಪ್ರಕೃತಿ ಗುಣದಂಗೆ ಭೂಮಿಲಿರುವ ಎಲ್ಲಾ ಜೀವಿಗಳಿಗೂ ಸ್ವತಂತ್ರವಾಗಿ ಬದ್‌ಕಿ ಬಾಳ್‌ವ ಆಸೆ, ಮನ್‌ಸ ತನ್ನ ಬುದ್ಧಿ ಶಕ್ತಿ ಉಪಯೋಗ್‌ಸಿ ತನ್ನ

ಮ್ಯಾಲೆ ಬ್ಯಾರೆಯವು ನಡ್ಸುವ ದಬ್ಬಾಳಿಕೆನ ತಡೆಯಕಾಗದೆ ಹೋರಾಟಕ್ಕೆ ಇಳಿಯೊದು ಸಹಜ. ಹಿಂಗೆ ಹೋರಾಟಕ್ಕೆ ಇಳ್‌ದೊವ, ಎಷ್ಟೊ ಜನ. ಕ್ರಾಂತಿ ಮಾರ್ಗ ಶಾಂತಿಲಿ ಆದರೂ ಕಠಿಣದ್ದ್ ಆಗಿರ್‌ದು. ಹಿಂಗೆ ಗಂಡ್ ಹೆಣ್ಣ್‌ಗ ಎಚ್ಚರಾಗಿ ಸ್ವಾತಂತ್ರ ಹೋರಾಟಕ್ಕೆ ಇಳ್‌ದವೆಸ್ಟೊ ಹಂಗೆ ಹೋರಾಟಕ್ಕೆ ಇಳ್ದ ಮಹಾ ಪುರುಷರ ಸ್ಥಾನಲಿ ನಿತ್ತ ಸರೋಜಿನಿದೇವಿ ನಾಯ್ಡು ಭಾರತದ ಕೋಗಿಲೆ ವಿಚಾರನ ನಾವು ಈ ಸಂದರ್ಭಲಿ ನೆನ್‌ಪು ಮಾಡ್ದು ಮುಕ್ಯ.

ಕತೆಕೇಳಿ ಸ್ವಸಹಾಯ ಸಂಘದ ಹೆಣ್‌ಮಕ್ಕ ಬೆರ್‌ಗಾಗಿ ಉಸುರು ಪಸ್‌ರ್‌ಯಿಲ್ಲದೆ ಕೇಳ್‌ತಾ ಕುದ್ದೊ.

ಟೀಚರಕ್ಕಾ ನೀವು ಇಂದ್ ನಾವ್‌ಗೆ ಬಾರಿ ಮಹತ್ವದ ವಿಸಯನ ತಿಳ್ಸಿದರಿ ಈ ಸಲದ ಬಹುಮಾನ ನಿಜಕ್ಕೂ ನೀವುಗೆತೇಳಿ. ನಾವು ನಿರ್ಧಾರ ಮಾಡ್ಯೊಳೊ. ಕಂಡಿತ ಆ ದಿನ ಬಂದ್ ನಾವು ಕೊಡುವ ಬಹುಮಾನ ತಕಂಡ್‌ಹೋಕು ತೇಳಿ ಕೇಳಿಕೊಂಡವೆ.

ಟೀಚರ್ : ಕಂಡಿತಾ ಬನ್ನೆ. ನೀವ್‌ಗೆಲ್ಲ ಕುಸಿ ಆದರೆ ನಂಗೆ ಅದೇ ಕುಸಿ. ಕಂಡಿತ ಆ ದಿನ ಬನ್ನೆ ತೇಳ್ತಾ ಕೈ ಮುಗ್ದ್ ಹೊರ್ಟತ್.

ಇದೇ ತರ ಇನ್ನು ಮುಂದೆ ಮಹತ್ವ ವ್ಯಕ್ತಿತ್ವ ಪಡ್ದವರ್‌ನ ಆಯ್‌ಕೆ ಮಾಡೊನತೇಳಿ ಎಲ್ಲವೂ ಕುಸಿಲಿ ಅಂದ್‌ನ ಮೀಟಿಂಗ್‌ನ ಮುಗ್ಸಿದೊ.

* * * * *

ಮಹಾರಾಣಿ ಕೆಂಪನಂಜಮ್ಮಣ್ಣಿ

(ಮೈಸೂರ್ ಒಡೆಯರ್ ವಂಶ)

ಮಕ್ಕ : ಏನವ್ವಾ ಇಸ್ಟ್ ಆಸಕ್ತಿಂದ ಓದ್ತಾವಳರಿ ಅದೆಂತ ಪುಸ್ತಕ?

ಅವ್ವ : ಅದೆಲ್ಲ ನಿಂಗೆ ಗೊತ್ತಾದುಲೆನೆ. ಸುಮ್ಮನೆ ಓದ್ತಾಯಿದ್ದೆ.

ಮಕ್ಕ : ಪರವಾಗಿಲ್ಲೆ ಅವ್ವ ಕತೆ ಹೇಳಿ. ರಜಲಿ ಬಂದ ಪಿಳ್ಳಿನ ಕಾಲೇಜ್ ಓದುವ ಸ್ನೇಹಿತೆಗ ಪೀಡ್ಸಿಕೆ ಸುರುಮಾಡ್ದೊ.

ಅವ್ವ : ಹೆಂಗೆ ಸುರುಮಾಡ್ದು ನೀವ್‌ಗೆ ಕತೆ, ನಾಟಕ, ರೂಪಕ, ಲಾವಣಿ ಯಾವತರ ಹೇಳೊಕು.?

ಮಕ್ಕ : ವೇದಿಕೆಲಿ ನಾಟಕ ಮಾಡುವ ಹಂಗಿರೊಕು ಅವ್ವಾ॥

ಅವ್ವ : ಹತ್ತ್ ನಿಮಿಷ ಕುದ್ದ್ ಕಣಿ, ವಳ್ಳ ಬೆಲ್ಲದ ಕರಿಕಾಪಿ ಮಾಡಿ ತನ್ನೆ. ತಿಂಬಕೆ ಏನಾರ್ ಬೇಕಾ?

ಮಕ್ಕ : ತಿಂಬಕೆ ಎಂತದು ಬ್ಯಾಡವ್ವಾ. ನಾವು ಪಿಕ್‌ನಿಕ್‌ತೇಳಿ ಬೆಟ್ಟಕ್ಕೆ ಹೋಗಿದ್ದೊ ಅಲಾ. ಬಾಕನ ದಾರಿಲಿ ವಡೆ ಮಸಾಲೆ ದ್ವಾಸೆ ಕಾಪಿ ಕುಡ್‌ದ್ ಬಂದೊ– ಆಗಲಿ ಈಗ ನೀವು ಕೊಡುವ ಕರಿಕಾಪಿನ ರುಚಿ ನೋಡೊನ.

ಅವ್ವ : ಕರಿ ಕಾಫಿ ಸೇರ್‌ದ್ಯಾ? ಇಲ್ಲಿ ಹಾಲ್‌ಗೀಲ್ ಸಿಕ್ಕುದುಲೆ ತೇಳ್ಕಂಡ್

ಮಣ್ಣ್‌ನ ಕಪ್ಪ್‌ಲಿ ಕಾಫಿ ತಾತ್.

ಮಕ್ಕ : ಇದೆಂತ ಗ್ಲಾಸ್ ಅವ್ವಾ? ಮಣ್ಣ್‌ತರ ಕಾಣ್ತಾವುಟ್ಟು?

ಅವ್ವ : ಇದೆಲ್ಲ ಹಳೆ ಕಾಲದ ಗ್ಲಾಸ್. ಆಗೆಲ್ಲ ಮನೆ ಮನೆ ಕುಂಬಾರಿಕೆಯವು ಬಾತಿದ್ದೊ. ಅಗ ನಮ್ಮ ಅತ್ತೆ ಹತ್ತ್ ಗಲಾಸ್ ತಕಂಡಿದ್ದೊ. ಆ ಗಲಾಸ್ ಅತ್ತೆ ಕ್ವಾಂಬೆರೆಲಿ ಕೊಡೀ ಅಡ್ಡ ಪಾರ್‌ಲಿಯಿತ್ತ್. ನಾನೂ ಯಾಗಾರ್ ಒಮ್ಮೊಮ್ಮೆ ಉಪಯೋಗ್‌ಸಿ ತೊಳ್ದ್ ಅಲ್ಲೆ ಮಡ್‌ಗಿ ಬುಟ್ಟನೆ.

ಮಕ್ಕ : ಹೌದಾ? ನೋಡಿ ಅವ್ವಾ ನಿಮ್ಮ ಹತ್ರ ಮಾತಾಡ್‌ಕನ ಇಸ್ಟ್ ವಿಸಯ ಸಿಕ್ತ್ ಇದೆಲ್ಲಾ ನಾವು ಕಂಡೇಯಿತ್ತ್‌ಲೆ.

ಅವ್ವ : ಸರಿ ಕುದ್ದ್‌ಕಣಿ ಮಕ್ಕಳೆ. ನಾನ್ ಕತೆ ಹೇಳಿಕೆ ಸುರು ಮಾಡ್‌ನೆ.

(ಕತೆ ಸುರಾತ್)

ಮಹಿಳೆ ಒಂದು ಜನಾಂಗದ ಸಂಸ್ಕೃತಿಗೆ ಬೆನ್ನೆಲುಬು ಇದ್ದಂಗೆ. ಸೌಂದರ್ಯ, ವ್ಯಕ್ತಿತ್ವ, ತಾಳ್ಮೆ, ಸಹನೆ, ಅವಳ ರಕ್ತಲೆ ಹರ್ದ್ ಬಂದುಟು. ಹೆಣ್ಣಿಗೆ ಉತ್ತಮ ಸ್ಥಾನಮಾನಕೊಟ್ಟ ಸಮಾಜ ಜನಾಂಗ, ಕುಟುಂಬ, ಸುಸಂಸ್ಕೃತಿ ತೇಳಿ ಕಂಡ್ ಬಂದುಟು. ತ್ಯಾಗ ಮೌನ ನಂಬಿಕೆ ಸತ್ಯ ಜ್ಞಾನದ ಸಾಕಾರ ಹೆಣ್ಣ್ ತೇಳ್ವೆ. ರಾಜಕೀಯ ಇತಿಹಾಸಲಿ ಮಹಿಳೆಗೆ ಆಕಸ್ಮಿಕವಾಗಿ ಸ್ಥಾನಮಾನ ಅಧಿಕಾರ ಕೈಗೆ ಬಂದ ಹಲವು ನಿದರ್ಶನ ಈ ನಾಡ್‌ಲೆ ಯಾಕೆ ದೇಶಲೆವುಟ್ಟು, ಅಂದ್!

ಮಕ್ಕ : ಯಾಕೆ ನಿಲ್ಸಿದರಿ? ಅಂದ್! ಎಂತವ್ವ ಕತೆ ಸುರು ಮಾಡಿ ಅವ್ವ.

ಅವ್ವ : ಮೈಸೂರು ಅರಮನೆ ತೇಳ್ದ್ರ ಎಲ್ಲವುಕು ಗೊತ್ತುಟಲಾ? ಅದರೊಳಗಿನ ಕತೆನ ತಿಳಿಯೊನ. ಮುಂದೆ ಇದೆಲ್ಲ ನೀವ್‌ಗೆ ಬೇಕಾದೆ.

ಮಕ್ಕ : ಅವ್ವಾ ಕತೆ ಮುಂದುವರ್‌ಸಿ

(ಮಕ್ಕ ಹಿಡ್‌ದ ಹಟನ ಬುಟ್ಟತ್‌ಲೆ. ಅವ್ವಂಗು ಕುಸಿ ಆತ್.)

ಅವ್ವ : ಮೈಸೂರು ಒಡೆಯರ್ ರಾಜವಂಶಲಿ ಮಹಾರಾಣಿ ಪಟ್ಟಕ್ಕೆ ಏರ್‌ದ ಚಾಮರಾಜ ಒಡೆಯರ್ ಧರ್ಮ ಪತ್ನಿ ಮಹಾರಾಣಿ ಕೆಂಪನಂಜಮ್ಮಣ್ಣಿ ಅವರ್‌ನ 27ನೇ ವರ್ಷಕ್ಕೆ ಬ್ರಿಟಿಷರ್ ಹತ್ತ್ ವರ್ಷ ರಾಜಪ್ರತಿನಿದಿಯಾಗಿ

ಆರಿಸಿದೊ. ಕಾರಣ ಪತಿ ವಿಯೋಗ. ರಾಜ ಪ್ರತಿನಿದಿಯಾಗಿ ಆಡಳ್‌ತ ನಡ್ಸುವಂಗೆ ಆತ್. ಕೃಷ್ಣರಾಜ ಒಡೆಯರ್ ಇನ್ನು ಸಣ್ಣಂವ ಅದ್ದರ್‌ಂದ ಮೈಸೂರು ದೇಶದ ಒಡೆತನನ ಬ್ರಿಟಿಷರ್ ರಾಣಿಗೆ ಒಪ್ಪಿಸಿದೊ.

ಕರ್ನಾಟಕದ ಇತಿಹಾಸಲಿ ವಿಜಯನಗರ ಸಾಮ್ರಾಜ್ಯ ಅಳ್ದ್ ಹೋದ ಮ್ಯಾಲೆ ಭಾರತೀಯ ಸಂಸ್ಕೃತಿ ದೇಶ ಭಾಷೆಗಳ್‌ನ ಉದ್ದರಿಸಿಕೆ ಮೆರ್‌ದ ಅರ್‌ಸ್ ಮನೆತನ ಮೈಸೂರು ಒಡೆಯರ್‌ದ್. ಅಂತಹ ಪವಿತ್ರವಾದ ಒಡೆಯರ ಆಳ್ವಿಕೆ ವಿಜಯನಗರದ ಧ್ಯೇಯ ಉದ್ದೇಶಗಳ್‌ನ ಆಧರ್‌ಸಿ ನಾಡ್‌ನ ಕಲೆ, ಭಾಷೆ, ಸಾಹಿತ್ಯಕ್ಕೆ ಒತ್ತು ಕೊಟ್ಟ್ ಪೋಷಿಸಿದ ಹಿರಿಮೆ ಮೈಸೂರು ಒಡೆಯರ್ ಮನೆತನದ್ದ್!

ಮಕ್ಕ : ಹೌದಾ! ಇದರ್‌ನೆಲ್ಲಾ ನಾವು ಕೇಳೆಯಿತ್ತ್‌ಲೆ. ಬರೀ ಮೈಸೂರು ಅರಮನೆ ಮಾತ್ರ ಗೊತ್ತಿತ್ತ್. ಮುಂದೆ ಹೇಳಿ.

ಅವ್ವ : ಒಡೆಯರ್ ವಂಶದವು ಸುಮಾರ್ 500 ವರ್ಷ ಕನ್ನಡ ನಾಡ್‌ನ ಆಳ್‌ದವು. ಆ ಕಾಲಲಿ ಬ್ರಿಟಿಷರ್ ಭಾರತಲಿ ಅವರ ಪ್ರಬಾವನ ತೋರ್ಸಿ ಆಡಳಿತನ ಅವರ ಕೈಲಿ ಇಸಿಕಂಡಿದ್ದೊ. ಬ್ರಿಟಿಷರಂತಹ ಸಾಮ್ರಾಜ್ಯಶಾಹಿ ವಸಾಹತು ರಾಜ್ಯಗಳೊಟ್ಟಿಗೆ ಪ್ರತ್ಯಕ್ಷ ಪರೋಕ್ಷವಾಗಿ ಸಂಬಂದ ಬೆಸ್‌ದ್ ಬಾಳಕಾಗಿತ್ತ್.

1895ರ್‌ಲಿ ಮಹಾರಾಜ ಚಾಮರಾಜ ಒಡೆಯರ್ ನಿಧನರಾದ ಸಂದರ್ಭ ಅವರ ಪತ್ನಿ ಮಹಾರಾಣಿ ಕೆಂಪನಂಜಮ್ಮಣ್ಣಿಯವು ರಾಜ್ಯದ ಆಡಳ್ತನ ನಿರ್ವಹಿಸುದು ಅನಿವಾರ್ಯ ಆತ್. ಒಳ್ಳೆಯ ವಿದ್ಯೆನ ಗುರುಗಳ್‌ಂದ ಕಲ್ತ್ ಆಡಳ್ತ ನಡ್ಸುವ ಸಾಮರ್ಥ್ಯನ ಹೊಂದಿದ ಇವು ರಾಜ ಪ್ರತಿನಿದಿ ಮಹಾರಾಣಿ ಕೆಂಪನಂಜಮ್ಮಣ್ಣಿ ಒಡೆಯರ್ ತನ್‌ಗೆ ವಯ್‌ಸಿದ ಜವಾಬ್ದಾರಿನ ಉತ್ತಮರೀತಿಲಿ ನಿರ್ವಹಿಸಿ ಮೈಸೂರು ಸಂಸ್ಥಾನಕ್ಕೆ ಬೇಕಾದ ಮುನ್ನುಡಿ ಬರ್‌ದೊ.

ಮಕ್ಕ : ಗೃಹಿಣಿಯಾಗಿ ಬಾಳುವ ಹೆಣ್ಮಕ್ಕ ಈತರ ಜವಾಬ್ದಾರಿ ಕೆಲ್ಸ ಮಾಡ್‌ದ ಮಹಿಳೆ ಇವುತೇಳ್ರೆ ಆಶ್ಚರ್ಯ ಹೆಮ್ಮೆ ಆದೆ ಅಲ್ಲಾ ಅವ್ವ?

ಅವ್ವ : ಹೌದು. ಹಿಂಗೆ ಹೆಣ್ಣ್‌ನ ಆತ್ಮಶಕ್ತಿ, ದೃಢತೆ ಬೌದ್ಧಿಕ ಸಾಮರ್ಥ್ಯ ಆಯ್ಕೆ ನಿರ್ಣಯ ವಿವಾಹ ಕೌಟುಂಬಿಕ ಮೌಲ್ಯಗಳ ನಡುಲಿ ರಾಜ ಸತ್ತೆಯ ಆಡಳ್‌ತದ ಮೂಲಕ ರಾಜಮನೆತನದ ಮಹಾರಾಣಿ ಮಹಿಳೆಯ ಕರ್ತವ್ಯದ ಕಾಣಿಕೆನ ಇತಿಹಾಸಲಿ ದಾಖಲಿಸಿಕೆ ಸಾಹಿತ್ಯನ

ಉತ್ತಮ ಕೊಡುಗೆಯಾಗಿ ಕೊಟ್ಟವು ಕೆಂಪನಂಜಮ್ಮಣ್ಣಿ.

ಪತಿಯ ಅಕಾಲಿಕ ಮರಣಂದ ಬ್ರಿಟಿಷರ ರಾಜಪ್ರತಿನಿಧಿಯಾಗಿ ನೇಮಕಗೊಂಡ್ ಆಡಳ್‌ತದ ಮಹಾತ್ಸಾಧನೆ, ರಾಜ್ಯಾಭಿವೃದ್ಧಿ, ಸಾಮಾಜಿಕ ಧಾರ್ಮಿಕ; ಸಂಸ್ಕೃತಿ, ಮಾತೃವಾತ್ಸಲ್ಯ, ನಾಡಪ್ರೇಮ, ನೇರನುಡಿ, ಕ್ರಿಯಾಶೀಲತೆ, ಆದರ್ಶ ವ್ಯಕ್ತಿತ್ವ, ಆಧುನಿಕ ಕಾಲಕ್ಕೆ ಬದ್‌ಕ್‌ನ ಅಳವಡಿಸಿಕಂಡ್ ದಿಟ್ಟತನಂದ ಆಡಳ್ತ ನಡ್‌ಸಿದ್‌ವು ಮೈಸೂರು ಮಹಾರಾಣಿ ಕೆಂಪನಂಜಮ್ಮಣ್ಣಿ. ಸ್ತ್ರೀ ಪರ ಚಿಂತನೆ ಇದರ್‌ನೆಲ್ಲ ಮೈಸೂರು ಕನ್ನಡ ಭಾಷೆಲೆ ನಿರ್ವಹಿಸಿದವು.

ಬ್ರಿಟಿಷ್ ಸರ್ಕಾರ 1898ರ್‌ಲಿ ವಹಿಸಿದ ಜವಾಬ್ದಾರಿನ ದಕ್ಷತೆಂದ ಆಳಿ ತಮ್ಮ ಆಳ್ವಿಕೆ ಕಾಲಲಿ ಮೈಸೂರು ರಾಜ್ಯನ ಆಧುನಿಕತೆ ದಾರಿಕಡೆಗೆ ಕೊಂಡೊಯ್ದೊ. ತನ್ನ ಮಕ್ಕಳೊಟ್ಟಿಗೆ ಬೇರೆ ಮಕ್ಕಳಿಗೆ ಭೇದಭಾವಯಿಲ್ಲದೆ ಅರಮನೆಲಿ ಗುರುಗಳಿಗೆ ಆಶ್ರಯ ಕೊಟ್ಟ್ ವಿದ್ಯೆ ಕಲ್ಸಿದೊ. ಹಿಂಗೆ ಅವರ ಕಾಲಲಿ ಸುರುಗೆ 50 ಹೆಣ್ಮಕ್ಕ ಎಸ್.ಎಸ್.ಎಲ್.ಸಿ. ಪಾಸಾದೊ.

ಮಕ್ಕ : ಓ.... ಹೌದಾ! ಅಬ್ಬಾ!..

ಅವ್ವ : ಇವರ ಸಮಯಲಿ 1902ರ್‌ಲಿ ಏಷ್ಯಾಖಂಡಲಿ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದನಾ ಘಟಕ ಶಿವನ ಸಮುದ್ರಲಿ ವಿದ್ಯುಚ್ಛಕ್ತಿ ಉತ್ಪಾದನೆ ಏರ್ಪಾಡಾತ್. 1905ರ್‌ಲಿ ಬೆಂಗಳೂರಿಗೂ ಕೋಲಾರದ ಚಿನ್ನದ ಗಣಿಗೂ ಜಲ ವಿದ್ಯುತ್ತ್ ಕೇಂದ್ರಂದ ವಿದ್ಯುತ್ ಸರಬರಾಜು ಕಾರ್ಯ ಸುರಾಗಿ. ಅರಮನೆ ಸೇರ್‌ದಂಗೆ 97ಸಾವಿರ ವಿದ್ಯುತ್ ದೀಪಗ ಬೆಳ್ಗಿಕೆ ಸುರಾತ್.

ಮಕ್ಕ : ಹೌದಾ? ಅಬ್ಬಬ್ಬೊ !!

ಅವ್ವಾ : ಬ್ರಿಟಿಷರ ಕಾಲ ಪೂರ್ವಲಿ ಮಹಾರಾಣಿ ಕೆಂಪನಂಜಮ್ಮಣ್ಣಿ ಮೈಸೂರು ಮಹಾರಾಣಿಯಾಗಿ ರಾಜಪ್ರತಿನಿಧಿಯಾಗಿ ಬ್ರಿಟಿಷರ್ ಆರ್‌ಸಾಕಕನ ಇನ್ನೂ 27 ವರ್ಷಕ್ಕೆ ವಿಧವೆಯಾಗಿದ್ದರೂ ಪತಿ ವಿಯೋಗದ ಸಂಕಷ್ಟಲು ದಿವಾನ್ ಶೇಷಾದ್ರಿ ತೇಳೊವ್‌ರ ಮುಂದಾಳ್‌ತನಲಿ ಉನ್ನತ ಸಮಯ ಪ್ರಜ್ಞೆ ಹೊಂದಿದ ಕೆಂಪನಂಜಮ್ಮಣ್ಣಿ ತನ್‌ಗೆ ವಯ್‌ಸಿದ ಜವಾಬ್ದಾರಿನ ಅಚ್ಚ್‌ಕಟ್ಟಾಗಿ ನಿರ್ವಹಿಸಿದ್ ನೋಡಿ ಮೈಸೂರ್‌ನ ಜನ ದಂಗ್ ಬಡ್ದ್ ಗೌರವಿಸಿದೊ.

ಮಕ್ಕ : ಇಂತಹ ಕತೆನ ಕಂಡಿತ ತಿಳಿಯೊಕು ಅವ್ವ.

ಅವ್ವ : ಬ್ರಿಟಿಷರ್ ರಾಜಪ್ರತಿನಿಧಿಯಾಗಿ ಆರ್ಸ್‌ಕಾಕನ ಪತಿ ವಿಯೋಗದ ಸಂಕಷ್ಟಲು ದಿವಾನ್ ಶೇಷಾದ್ರಿ ಇವರ ಮುಂದಾಳತ್ವಲಿ ಉನ್ನತ ಸಮಯ ಪ್ರಜ್ಞೆ ಹೊಂದಿದ್ದ ಕೆಂಪನಂಜಮ್ಮಣ್ಣಿ ತನ್‌ಗೆ ವಯಿಸಿದ ಜವಾಬ್ದಾರಿನ ಅಚ್ಚ್‌ಕಟ್ಟಾಗಿ ನಿರ್ವಹಿಸಿದ್ ನೋಡಿ ಮೈಸೂರ್‌ನ ಜನ ದಂಗ್ ಬಡ್‌ದ್ ಗೌರವಿಸಿದೊ.

ಮಕ್ಕ : ಹೌದು ಹಿನ್ನೆಲೆ ಬಗ್ಗೆ ಹೇಳಿ ಅವ್ವಾ.

ಅವ್ವ : ಮೈಸೂರು ಒಡೆಯರ್ ವಂಶದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ದತ್ತ್‌ಪುತ್ರ ಮಹಾರಾಜ ಚಾಮರಾಜೇಂದ್ರ ಅವ್ರ್‌ಕೆ ಸುಗುಣೆವಂತೆ ವಧುನ ಹುಡ್‌ಕ್‌ತಾಯಿದ್ದ ಸಂದರ್ಭಲಿ ಅವರ ಸಂಬಂದಿ ಕಪಿಲಾನದಿ ತೀರದ ನರಸೇ ಅರಸ್‌ನವರ ಮನೆಲಿ ಯದುಕುಲಕ್ಕೆ ಯೋಗ್ಯಳಾದ ಕನ್ಯಾರತ್ನವುಟ್ಟು. ಈ ಕನ್ಯೆ ಮಹಾರಾಣಿ ಪದವಿಗೆ ತಕ್ಕ ವಿದ್ಯೆ ಬುದ್ಧಿ ಸುನೀತಿಗಳ್‌ಂದ ಶೋಭಿತಳಾಗಿವುಟ್ಟುತೇಳಿ ತಿಳ್‌ದ್ 1878ರ್‌ಲಿ ಆಕೆನ ಚಾಮ ರಾಜೇಂದ್ರರಿಗೆ ಮದುವೆ ಮಾಡ್ಡೊ.

ಕೆಂಪನಂಜಮ್ಮಣ್ಣಿ ತೇಳುವ ಕನ್ಯೆನ ಇವರ ಮೊದುವೆ ಮೆರವಣಿಗೆ ಆನೆ ಮೇಲೆ ಕುದ್ದ್ ಚಿನ್ನದ ಪಲ್ಲಕ್ಕಿಲಿ ಮೈಸೂರು ಅರಮನೆ ಬೀದಿಲಿ ಮೆರವಣಿಗೆ ವೈಬವಂದ ನಡ್ತ್. ಆ ವರ್ಷ ಬಿಸ್‌ಲ್ ಹೆಚ್ಚಾಗಿ ಕುಡಿಯುವ ನೀರಿಗೆ ಬರಗಾಲ ಬಂದಿತ್ತ್. ಇವರ ಮೊದುವೆ ಕಳ್ದಂಗೆ ಮೈಸೂರಿಗೆ ಬಾರಿ ಮಳೆ ಬಂದ್ ಮಹಾರಾಣಿನ ಕಾಲ್‌ಗುಣಂದ ಶುಭ ಆತ್‌ತೇಳಿ ಜನ ಕೊಂಡಾಡ್ಡೊ.

ಕೆಂಪನಂಜಮ್ಮಣ್ಣಿ ಜನನ 1866 ಅವ್‌ಳಿಗೆ 12 ವರ್ಷಕ್ಕೆ ಮದುವೆ. 27ನೇ ವರ್ಷಕ್ಕೆ ಪತಿ ವಿಯೋಗ. ಹಿರಿಮಗ ಕೃಷ್ಣರಾಜ ಒಡೆಯರ್ ಇನ್ನೂ ಸಣ್ಣಂವ ಆದ್ದರ್‌ಂದ ಮೈಸೂರು ಸಂಸ್ಥಾನದ ಒಡೆತನನ ಬ್ರಿಟಿಷರ್ ರಾಣಿಗೆ ಒಪ್ಪಿಸಿದೊ. ಈ ರೀತಿ ಕೆಂಪನಂಜಮ್ಮಣ್ಣಿಗೆ ಬಂದ ಅವಕಾಶಲಿ ಮಾಡ್‌ದಂತ ಮಹಾಕಾರ್ಯ ತೇಳಿ ವಿದ್ಯುತ್ ಉತ್ಪಾದನೆ ಚಿತ್ರದುರ್ಗದ ಮಾರಿ ಕಣಿವೆ ಸೇತುವೆ, ವಾಣಿ ವಿಲಾಸ ಸಾಗರ ನಿರ್ಮಾಣ ಮೈಸೂರ್‌ನ ಜನಕೆ ಬೆಳಕ್ ಜನತೆಯ ಆರೋಗಕ್ಕಾಗಿ ಆಸ್ಪತ್ರೆ, ವಿದ್ಯಾಭ್ಯಾಸಕ್ಕಾಗಿ ಶಾಲಾಕಾಲೇಜ್, ಕಲೆ, ಸಾಹಿತ್ಯ, ಲೇಡೀಸ್ ಕ್ಲಬ್ ಸ್ಥಾಪನೆ 1902ರ್‌ಲಿ ಸರ್ವಧರ್ಮದ ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ಮಹಾರಾಣಿ ಕಾಲೇಜ್ ಸ್ಥಾಪನೆ ಹಿಂದೂ

ವಿಧವೆಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡ್ತ್.

ಪ್ರಾಚೀನ ಇತಿಹಾಸಗಳ್‌ನ ಒಳಗೊಂಡಂಗೆ ಕನ್ನಡ ನಾಡ್‌ನ ಸಾಹಿತ್ಯ, ಸಂಸ್ಕೃತಿ, ಲಲಿತ ಕಲೆ, ಸಂಸ್ಕೃತ, ಕನ್ನಡ ರಂಗಭೂಮಿ ನಾಟಕಗಳ ಅಭಿವೃದ್ಧಿ ಪಡ್‌ಸಿ ಬಡಮಕ್ಕಳಿಗೆ ಇಂಡಸ್ಟ್ರಿಯರ್ ಸ್ಕೂಲ್, ಅರಸ್ ಬೋರ್ಡಿಂಗ್ ಸ್ಕೂಲ್, ಬ್ರಾಹ್ಮಣರಿಗೆ ಅಗ್ರಹಾರ ಮನೆದಾನ ಹಿಂಗೆ ಸಾಕಸ್ಟ್ ಕೆಲಸನ ತನ್ನ 8 ವರ್ಷದ ಆಡಳಿತಲಿ ಮಾಡ್‌ದರ್‌ಂದ ಮೈಸೂರು ರಾಜ್ಯ ಮಾದರಿ ಸಾಂಸ್ಕೃತಿಕ ನಗರತೇಳಿ ದೇಶವಿದೇಶಲಿ ಹೆಸ್‌ರ್ ಪಡ್ತ್..

ವಿದೇಶದ ಪತ್ರಿಕೆಯೊಂದು ಮೈಸೂರ್ ರಿಜೆಂಟ್ ಮಹಾರಾಣಿ ಕೆಂಪನಂಜಮ್ಮಣ್ಣಿಯವ್‌ರ್‌ನ ವಿಕ್ಟೋರಿಯಾ ಮಹಾರಾಣಿಗೆ ಹೋಲ್‌ಸಿ ಪತ್ರಿಕೆಲಿ ಬರ್‍ದೊ. ಇವರ ವಿಷಯ ತಿಳ್‌ದ ವಿಕ್ಟೋರಿಯಾ ಮಹಾರಾಣಿ "**ಕ್ರೌನ್ ಆಪ್ ಇಂಡಿಯಾ**" ಪ್ರಶಸ್ತಿನ ಸ್ವತಃ ಅವರ ಪ್ರತಿನಿಧಿಗಳಾದ ರೆಸಿರೆಂಟ್ ಅವು ಮೈಸೂರಿಗೆ ಬಂದ್ ಒಡ್ಡೋಲಗಲಿ ಮಹಾರಾಜರ ಮೂಲಕ ಕೊಡಿಸಿದೊ. ಆಗ 21 ಕುಶಾಲು ತೋಪುಗಳ್‌ನ ಹಾರ್‌ಸಿದೊ.

ಅಲ್ಲದೆ ಬಾಲ್ಯವಿವಾಹ ರದ್ದು, ಸ್ತ್ರೀಮತದಾನದ ಹಕ್ಕ್‌ನ ಕೊಡ್ಸಿದ ಮಹಾರಾಣಿ ಕೆಂಪನಂಜಮ್ಮಣ್ಣಿ ಒಡೆಯರ್ ವಂಶದ ಆಳ್ವಿಕೆಲಿ ಮಹತ್ತರ ಪಾತ್ರವಹಿಸಿ 67ವರ್ಷ ತುಂಬು ಜೀವನ ನಡೆಸಿ ಮೈಸೂರ್‌ನ ಮಹಾರಾಣಿ ವಾಣಿ ವಿಲಾಸ ಸನ್ನಿದಾನದ ಕೆಂಪನಂಜಮ್ಮಣ್ಣಿ 1934ನೆ ಜುಲೈ ತಿಂಗಳ್‌ಲಿ ಮರಣಹೊಂದಿ ಮೈಸೂರ್‌ನ ಭಾಗ್ಯದೇವತೆಯಾಗಿ, ಸಂತಾನ ಲಕ್ಷ್ಮಿಯಾಗಿ ಸಾಧಿಸಿದ ಜನ ಕಲ್ಯಾಣ ಮಹಾತ್ ಸಾಧನೆಗಳ್‌ಂದ ಎಲ್ಲರ ಮನ್ಸ್‌ಲಿ ಉಳಿವಂಗಾತ್.

ಚಾಮರಾಜ ಒಡೆಯರ್ ಮತ್ತು ಕೆಂಪನಂಜಮ್ಮಣಿಯವುಕೆ 6 ಜನ ಮಕ್ಕ. 1. ಜಯಲಕ್ಷಮ್ಮಣ್ಣಿ 2. ಕೃಷ್ಣಾಜಮ್ಮಣ್ಣಿ 3. ಚೆಲುವಾಜಮ್ಮಣ್ಣಿ 4. ನಾಲ್ವಡಿ ಕೃಷ್ಣರಾಜ ಒಡೆಯರ್. 5. ದೇವರಾಜ ಒಡೆಯರ್ 6. ಕಂಠೀರವ ನರಸಿಂಹ ಒಡೆಯರ್ ತೇಳ್ವ ಮಕ್ಕ ಹುಟ್ಟಿ ಅವರೆಲ್ಲರ ಹೆಸ್‌ರ್‌ಲಿ ಆಸ್ಪತ್ರೆ, ರಸ್ತೆ, ವಿಶ್ವವಿದ್ಯಾನಿಲಯ ಹಿಂಗೆ ಎಲ್ಲಾ ಕಡೆ ಅವರ ಹೆಸ್‌ರ್ ಇಂದಿಗೂ ಉಟ್ಟು.

ಮಕ್ಕ : ಅವ್ವಾ ಇನ್ನೆಷ್ಟ್ ಉದ್ದ ಉಟ್ಟು ಅವ್ವಾ ಕತೆ?

ಅವ್ವ : ಇನ್ನೂ ಕತೆ ಉಟ್ಟು, ಅದರ್ನ ಇನ್ನೊಂದ್ ಸಾರಿ ಹೇಳ್‌ನೆ ಈಗ... ಮುಗ್ಗೊನ.

ಇತಿಹಾಸದ ಉದ್ದಕ್ಕೂ ಹೆಣ್ಣ್ ಕುಟುಂಬ ಸಮಾಜ ತಾಯ್ತನ ಪತಿವ್ರತೆಗಳ ನೆಲೆಲಿ ವರ್ಣಿಸಿಕಂಡೆ ಹೊರ ಪ್ರಪಂಚಕೆ ಅಪರಿಚಿತಳಾಗಿತ್. ಕೀಳರಿಮೆ, ಸಂಕೋಚ, ಅಬಲೆ, ಅಲ್ಪ ತೃಪ್ತಿ ಮುಗ್ದೆ, ಭಾವನಾಶೀಲೆ, ಮಾಯೆ ಎಂಬ ಗ್ಯಾನಲೇ.. ಸಾಗಿ ಬಂದ ಹೆಣ್ಣ್‌ನ ಇನ್ನೊಂದು ಮೊಕ ಕನ್ನಡ ನಾಡ್‌ನ ವಿವಿದ ಹೆಣ್ಣ್ ಮಕ್ಕಳ ಚಿಂತನೆಗೆ ಎಚ್ಚರಿಸುವ ಹಂಗೆ ಎಲೆಮರೆ ಕಾಯಿನಂಗೆ ಮುಚ್ಚಿಟ್ಟ ರತ್ನ ಕೆಂಪನಂಜಮ್ಮಣ್ಣಿಯವು. ಅವರ ಜೀವನ ಚರಿತ್ರೆ ಮನೆಮನೆಲು ತಿಳಿಯೊಕುತೇಳಿ ಸುಲೋಚನ ಶಾಸ್ತ್ರಿತೇಳ್‌ವ ಲೇಖಕಿ ಪುಸ್ತಕ ಬರ್ದ ಕತೆನ ನಾನ್ ಓದ್ತಾಯಿದ್ದೆ ನೋಡಿ,

ಮಕ್ಕ : ಅಬ್ಬಾ ಎಸ್ಟ್ ವಳ್ಳ ಪುಸ್ತಕ ಓದ್ತಾವಳರಿ ಅವ್ವಾ?

ಅವ್ವ : ಅಯ್ಯೋ ನಾನೆಲ್ಲಿ ಓದ್ತಾವಳೆ ತಾತ ಲೈಬ್ರೆರಿಂದ ತಂದದರ್‌ನ ನಾನ್ ನೋಡಿ ಓದಿದ್ ನಂಗೂ ಈಚೆಗೆ ಕಣ್ಣು ಕಾಂಬೊದುಲೆ ಎಲ್ಲಾ ಎರ್‌ಡೆರ್‌ಡ್ ಕಂಡದೆ.

ಮಕ್ಕ : ಅವ್ವಾ ವಳ್ಳ ಕತೆ ಹೇಳ್‌ದರಿ. ಮುಂದೆನ ಕಾಲೇಜ್ ಡೇ ದಿನ ವೇದಿಕೆ ಮ್ಯಾಲೆ ಇದರ ನಾಟಕನ ಮಾಡುವೆ ಅವ್ವಾ ತೇಳೀ ಕಾಲ್‌ಮುಟ್ಟಿ ನಮಸ್ಕಾರ ಮಾಡಿ ಬಾಯ್ ಅವ್ವಾ ತೇಳ್‌ಕಂಡ್ ಹೋದ ಗೂಡೆಗಳ್‌ನ ನೋಡಿ "ನಾನ್ ಓದಿದ್ ಸಾರ್ಥಕ ಆತ್"ತ ಹೇಳ್‌ಕಂಡ್ ಕೈ ಆಡ್ಸಿತ್ ಅವ್ವ

* * * *



ಮಹಾರಾಣಿ ಕೆಂಪನಂಜಮ್ಮಣ್ಣಿ

ಗೂಡೆಗಳೆ ಸಿಕ್ಕುದುಲೆ

ಹೈದ : ಬಾನೆ ಬಾನೆಗೂಡೆ ಎಲ್ಲಿ ಹೋಗ್ತೊಳ?
ನೀನ್ ಸಿಕ್ಕಿಯತೇಳಿ ಇಲ್ಲಿ ನಿತ್ತೊಳೆ
ತಿರ್‌ಗಿ ನೋಡದೆ ಹೋದಿಯಲ್ಲ ಏ ಗೂಡೆ?
ಕಾಲೇಜಿಗೆ ಹೋಗಿ ನಿಂಗೆ ಎಸ್ಟ್ ಜಂಬ ಬಾತ್‌ನೆ?..........

ಗೂಡೆ : ಅಯ್ಯೋ ಏ ಹೈದ? ಯಾಕೆ ನನ್ನ ಹಿಂದೆ ಬಿದ್ದೋಳ?

(ಮಾತ್‌ಲಿ) : ಅಂತೇಳ್‌ವ ಕಾಲೇಜ್ ಮಕ್ಕಳ ಹಾಡ್‌ನಂಗೆ ಒಂದು ವಿಸಯ ಗ್ಯಾನತ್ ನಂಗೆ.

ದಿವ್ಯ : ಎಂತ ಗ್ಯಾನತ್ ಹೇಳ್ ಬ್ಯಾಗ.

ಜಾನು : ಮೊನ್ನೆ ಹಬ್ಬಕ್ಕೆ ಊರ್‌ಗೆ ಹೋಗಿದ್ದೆ ನೋಡು ಅಲ್ಲಿ ನಮ್ಮ ಸ್ವಾದರ ಮಾಂವನ ಮಂಜಂಗೆ ಹೆಣ್ಣ್ ಹುಡ್‌ಕಿ ಸಾಕಾತ್‌ತೇಳಿ ಬ್ಯಾಜಾರ ಮಾಡ್‌ತಿದ್ದೊ?

ದಿವ್ಯ : ಈಗೆಲ್ಲ ಹಂಗೆ ಪಿಯು.ಸಿ. ಓದುದೆ ತಡ ಹೊರ್‌ಟೊ ಬೆಂಗಳೂರ್‌ಗೆ. ಅಲ್ಲರೆ ಬ್ಯಾರೆ ಕಡೆ ಕೆಲ್‌ಸಕ್ಕೆ ಸೇರೊಕು ತೇಳಿ ಹೊರಗೆ ದಾಟುವೆ. ಇನ್ನ್ ಹೈದಂಗ ಅಪ್ಪವ್ವನ ಆಸ್ತಿನ ಬುಡಿಕೂ ಆಗದೆ ಹೊರಗೆ ದಾಟಿಕೂ ಆಗದೆ ಓದಿದವು ಎಸ್ಟ್ ಜನ ಹಳ್ಳಿಲಿ ಸಿಕ್ಕುದುಲೆ? ಈಗಂತೂ ನಗರಗಳಿಗೆ ಮಕ್ಕ ವಲಸೆ ಹೋದಂಗೆ ಹೋಗ್ತಾವಳೊ.!

ಜಾನು : ಹಂಗೆ ನಮ್ಮ ಮಾಂವನ ಮಂಜನು ಆಚೆ ಬಯ್ಲ್ ರಾಮಂಯ್ಯಣ್ಣನ ಮಗ್‌ಳೂ ಒಟ್ಟಿಗೆ ಇಸ್ಕೂಲಿಗೆ ಹೋಗ್ತಾಯಿದ್ದೊ. ಬಾರಿ ವರ್ಷ ಕಳ್‌ದ ಮ್ಯಾಲೆ ಕಂಡ ಅವರ ಮಾತ್‌ಕತೆನ ಇಲ್ಲಿ ಕೇಳೊನ.

ದಿವ್ಯ : ಸರಿ ಅದ್ ಎಂತದ್‌ತ ಕೇಳೊನ ಈಗ.

ಮೊದುವೆ ಶಾಸ್ತ್ರ ನೋಡಿಕೆ ಇಷ್ಟಯಿಲ್ಲೆ ತೇಳ್‌ವ ಭಾವನೆಲಿ ಸೌಮ್ಯ ಹೊರಗೆ ಬಂದ್ ಫೋನ್‌ಲಿ ಮಾತಾಡ್ತಾಯಿತ್ತ್. ಸತೀಶ ಅವುಳ್‌ನ ದೂರಂದ ನೋಡಿ ಮಾತಾಡ್ಸಿಕೆತೇಳಿ ಬಾತ್.

ಸೌಮ್ಯ : ಹೋ.... ಸತೀಶ ಮೊದುವೆಗೆ ಬಂದದಾ? ನಿಂಗೆ ಮೊದುವೆವುಟ್ಟು ಹೆಣ್ಣ್ ಹುಡ್‌ಕ್‌ತಾವಳೊತ ಮನೆಲಿ ಹೇಳ್ತಾಯಿದ್ದೊ.

ಸತೀಶ : ನಿಂಗೆ ಹೇಳೊಕುತಾದರೆ ಹಳ್ಳಿಲಿ ಕೆಲ್‌ಸ ಮಾಡೊವಕೆಲ್ಲ ಗೂಡೆಗ ಸಿಕ್ಕುದುಲೆ. ಚಾಕ್‌ರಿಲಿ ಇರೊವೆ ಬೇಕುತೇಳಿ ಅಪ್ಪವ್ವ ಎಚ್ಚರಿಕೆ ವಯ್‌ಸಿ ಗಂಡ್ ಹುಡ್‌ಕುವೆ. (ಜೋರು ನೆಗಾಡುವೆ) ನೆಗೆಸದ್ದ್ ಎತ್ತಂದ ಬಾತ್‌ತೇಳಿ ಜನ ತಿರ್‌ಗಿ ನೋಡ್ದೊ ಮೊದುವೆ ಮನೆಲಿ ಇವರಿಬ್ಬರ ಹಳೆ ಕ್ಲಾಸ್‌ಮೇಟ್‌ಗ ಬಾರಿ ವರ್ಸ ಕಳ್ದ್ ಇವರಿಬ್ಬರ್‌ನ ಕಂಡ್ ಮಾತಾಡಿಕಂಡೊ

ರಘು : ಏನ್ ಇಸ್ಟ್ ಜೋರು ನೆಗಾಡುವೆ. ಹೇಳ್‌ದಂಗೆ ಇವಿಬ್ಬರೂ ಇನ್ನೂ ಯಾಕೆ ಮೊದುವೆ ಆತ್‌ಲೆ? ಇವುಕಿಬ್ಬರಿಗೂ ಇಸ್ಕೂಲಿಗೆ ಹೋಕನ ತಮಾಸಿ ಮಾಡ್ತಾಯಿದ್ದದರ್‌ನ ಗ್ಯಾನ ಮಾಡ್‌ಕಂಡ್ ರಘು ಹೇಳ್ತ್ ಚೋಮುಣಿನೊಟ್ಟಿಗೆ.

ಚೋಮುಣಿ : ಇವರ ಜೋಡಿ ಮಾತ್ರ ಸೆರಿಯಾಗುಟ್ಟು. ಇವಿಬ್ಬರೂ ಯಾಕೆ ಮೊದುವೆ ಆಕಾಗದ್ ತೇಳ್ನಿ. ಈ ವಿಸಯ ನಂಗೆ ಮುಂದೆ ಯಾಕೆ ಹೊಳ್‌ತ್‌ಲೆ ತೇಳಿ ತಲೆ ತಟ್ಟಿಕಂಡತ್. ಅವರೊಟ್ಟಿಗೆ ಸೊಲ್ಪ ಮಾತಾಡೊನ ತೇಳ್‌ಕಂಡ್ ಕುರ್ಚಿ ಎಳ್‌ದ್‌ತಂದ್ ಇವರ ಹತ್ರ ಬಂದ್ ಕುದ್ದೊ.

ಸೌಮ್ಯ : ಹೋ! ಎಲ್ಲವು ಬಂದೊಳರಿ ಕಾಣದೆ ಎಸ್ಟ್ ವರ್ಸ ಆತ್.

: ನಾವು ಆಗ ಹೈಸ್ಕೂಲ್‌ಗೆ ಹೋಕನ ಎಸ್ಟ್ ತಮಾಸಿ ಮಾಡ್ತಾ ಇದ್ದೊಲಾ! ಆಗ ಮಕ್ಕ ಎಂತಂತೊ ಮಾತಾಡ್ದು ಬುದ್ದಿಯಿತ್ತ್‌ಲೆ. ಪಿ.ಯು.ಸಿ. ಆದ ಮ್ಯಾಲೆ ಓದು ಜೀವನದ ಬಗ್ಗೆ ಗೊತ್ತಾಕೆ ಸುರಾದೆ. (ಸೌಮ್ಯನೊಟ್ಟಿಗೆ)

ಸತೀಶ : ಹೌದು ಆಸ್ತಿ ಪಾಸ್ತಿ ನೋಡಿಕು ಜನಯಿಲ್ಲೆ ಅಪ್ಪವ್ವಂಗೆ ಕೆಲ್ಸನೂ ಮಾಡಿಕೆ ಆದುಲೆ. ಕೆಲ್‌ಸಕ್ಕೆ ಜನನೂ ಸಿಕ್ಕುದುಲೆ. ನಾನೂ ನಿನ್ನಂಗೆ ಹೊರಗೆ ಹೋಗಿದ್ದರೆ ನಿನ್ನಾಂಗೆ ಕೆಲ್‌ಸಲಿ ಇರ್ತಿದ್ದೆ. ಈಗ ಒಂದು ಕಡೆನೂ ಒಪ್ಪುದುಲೆ. ಗೂಡೆಗಂತೂ ಕೆಲ್ಸ ಸಣ್ಣದಾದ್ರೂ ಪರ್‍ವಾಗಿಲ್ಲೆ ತೇಳ್ವೆ, ನಮ್ಮ ಮಕ್ಕ ನಮ್ಮಂಗೆ ಕೆಲ್‌ಸ ಮಾಡಿಕಾಗದ್ ತೇಳ್ದು ಈಗ ಜನರ ಉದ್ದೇಸ ಆಗುಟ್ಟು. ನಿನ್ನಂಗೆ ದೊಡ್ಡ ಕೆಲ್‌ಸ ಆದ್ರೆ ಪರ್‍ವಾಗಿಲ್ಲೆ.

ರಘು : ನನ್ನ ನೋಡು, ನನ್ನ ಹೆಣ್ಣ್ ಓದಿ ಡಿಗ್ರಿ ಮುಗ್‌ಸಿಟ್ಟು. ಮನೆ ಕೆಲ್‌ಸನೂ ಮಾಡ್‌ದೆ. ತ್ವಾಟ ತೊಡಿಗೆನೂ ನೋಡ್ಕಂಡದೆ. ಮೊದುವೆಗೆ ಮುಂದೆ ಕೆಲ್ಸ್‌ಲಿಯಿತ್ತ್. ಈಗ ಇದೇ ವಳ್ಳದ್ ತೇಳ್ತಾವುಟ್ಟು.

ಚೋಮುಣಿ : (ಮೆಲ್ಲಂಗೆ ರಘುನೊಟ್ಟಿಗೆ) ಸೌಮ್ಯ ಓದಿ ಇಂಜಿನಿಯರ್ ಆಗಿ ಕೈಲಿ ಲಕ್ಷ ಸಂಬಳ! ಇಂವ ಈ ಆಸ್ತಿಪಾಸ್ತಿಲಿ ದುಡಿಯೊಂವ! ನಿಂಗೆನಾರ್ ಸೊಯೆವುಟ್ಟಾ ಇಲ್ಲೆ ಗ್ಯಾನ ಮಾಡ್!

ರಘು : ಅದೂ ಸೆರಿ ಬುಡ್ ಹಿಂಗೆ ಎಲ್ಲಿ ಹೋದರೂ ಗೂಡೆಗೆ ಹೈದ ಹೈದಂಗೆ ಗೂಡೆಗ ವಳೊನಾ ತೇಳಿ ಕೇಳೊವೆ ಜ್ಯಾಸ್ತಿ. ಈ ಹೆಣ್ಣ್‌ಗಂಡ್ ಮಾಡಿಕೆ ಹೋದೂ ಬ್ಯಾಡ ಅವರ ಕೈಂದ ಹೇಳ್ಸಿ ಕಂಬದೂ ಬ್ಯಾಡ (ದೃಷ್ಟಿ ಬ್ಯಾರೆ ಕಡೆಹೋಕು).

ಸತೀಶ : ನೀನ್ ಸಿಟಿ ಸೇರಿ ಬಾರಿ ಬದ್‌ಲಾಗೊಳ. ನಿಂಗೆ ಇಸ್ಟ್ ಜಂಬತೇಳ್ರೆ ನಂಗೆ ನಂಬಿಕೆ ಆದುಲೆ. ನಂಗೂ ಈಗ ಬೇಕಸ್ಟ್ ಕೆಲ್ಸವುಟ್ಟು. ರಜಮುಗ್ಸಿ ಹೋಕೆ ಮುಂದೆ ಒಮ್ಮೆ ಮನೆ ಕಡೆ ಬಂದ್ ಹೋಗು ಆತ? ನಂಗೆ ಡೀಸೆಲ್ ತಕಂಡೋಕು. ಕಾಫಿ ತ್ವಾಟಕೆ ನೀರ್ ಹಾರ್‌ಸ್ತವಳೆ. (ಅವನ ಮಾತ್ ಇವ್‌ಳ ತಲೆಗೆ ಹೊಕ್ಕಿದಂಗಿಲ್ಲೆ ಏನೋ ಗ್ಯಾನಲಿ ಇತ್ತ್ ಒಮ್ಮೆಗೆ)

ಸೌಮ್ಯ : ಸ್ವೊಲ್ಪ ಹೊತ್ತು ಇರ್. ನಿಂಗೆ ಗ್ಯಾನಾದೆನಾ?

ಸತೀಶ : ಎಂತ ಗ್ಯಾನದೆ? ಹಳೆ ಕತೆನೆಲ್ಲ ಗ್ಯಾನ ಮಾಡ್ರೆ ನಂಗೆ ನೆಗೆ

ಬಂದದೆ. ಎಷ್ಟ್ ಮಾತಾಡ್ರು ಪ್ರಯೋಜನಯಿಲ್ಲೆ. ಇನ್ನ್ ನನ್ನಂತವರ್‌ನ್ನೆಲ್ಲ ಯಾರ್ ಮೊದುವೆ ಆಕೆ ಮುಂದೆ ಬಂದವೆ. ಯಾರ್ ನನ್ನ ಅರ್‌ತ್‌ಕಂಡ್ ನಡ್ಕಂಬವು ಸಿಕ್ಕರೆ ಆದು. (ಅವಂಗಾ ಮೂವತ್ತೈದ್ ಆಕಾತ್. ತಲೆ ಬಿಸಿಪಾಪ)

ಸೌಮ್ಯ : ಈಗೆಲ್ಲ ಅವರವರ ಅಂತಸ್ಥಿಗೆ ತಕ್ಕಂಗೆ ಮೊದುವೆ ಆದು. ಓದಿಗೆ ಸೆರಿಯಾಗಿ ಜನರೊಟ್ಟಿಗೆ ಬೆರೈಕು.

ಸತೀಶ : ನೀ ಹಿಂಗೆ ಹೇಳ್‌ಕನ ಗ್ಯಾನ ಬಾತ್ ನಂಗೆ. ಅದೊಂದು ಕೀಟಲೆ ಹಾಡ್‌ನ ಹಾಡ್‌ದ್ ನೀನ್. ಅದೇ ಮಳೆ ಹಾಡ್ ನೀನ್ ಕ್ಯಾತರೆ ಮಣ್ಣ್‌ಲಿ ಜಾರಿ ಬಿದ್ದದ್.

ಸೌಮ್ಯ : ಗ್ಯಾನವುಟ್ಟು ಮಳೆಬಾಕನ ನೆನಿಯೊಕು ಏ ಗೂಡೆ

ಇದ್ ಎಲ್ಲವ್‌ಕು ಗ್ಯಾನಯಿರೊಕು॥

ವರ್ಸಯಿಡಿ ಮಳೆ ಸೊರ್‌ದರೆ

ಅದರ್‌ಲಿ ನೆನಿಯೊದೇನ್ ವಿಶೇಷ ತೇಳಿ ನೀ ಹೇಳ್ದ್ ಗ್ಯಾನ ಮಾಡಿ ಜೋರಾಗಿ ನೆಗಾಡಿ ಕಂಡ್ ಅವರ ಹೈಸ್ಕೂಲ್ ಜೀವನದ ಬಗ್ಗೆ ಮಾತಾಡಿಕಂಡೊ. ಬಾಯ್ ತೇಳಿ ಕೈಯಾಡ್ಸಿದೊ ಇಬ್ಬೊರು.

ಸತೀಶ : (ಮನ್ಸ್‌ಲಿ) ನೀನ್ ಇಷ್ಟೆಲ್ಲಾ ಹೇಳ್ದ ಲಕ್ಷ ದುಡಿತಾ ವಳೆತ ಬ್ಯಾಡಪ್ಪ ನಿಮ್ಮಂತ ಗೂಡೆಗಳ (ಎಂತಗೂಡೆ ವಯಸ್ಸ್ 30ದಾಟಿತ್) ಸಾವಾಸನೆ ಬ್ಯಾಡ. ನಿನ್ನ ಪ್ಯಾಂಟೊ ಟೀಸರ್ಟ್ ಆ ಹೀಲ್ಡ್ ಚಪ್ಪಲ್ ಹಸರ್ ಕನ್ನಡಿ ಕಾಂಕ್‌ರ್‌ಸಿ ಉಗ್ತ್. ಇವ್‌ಳಿಗೆ ಮೊದುವೆಗೆ ಬಾಕನ ಒಂದು ಸೀರೆನಾದ್ರು ಲಕ್ಷಣ ಆಗಿ ಉಟ್ಟ್‌ಕಂಡ್ ಬಾಕೆ ಬೊತ್ತಾಗಿತ್ತಾ? ಹ್ಞ್ ಕೈಲಿ ಪೋನು ಬ್ಯಾರೆ ಬುಟ್ಟತ್ತ್‌ಲೆ ಸದ್ಯ ನನ್ನ ಕಣ್ಣ್ ತೆರ್‌ದಂಗಾತ್.

ನಿರೂ : ಸೌಮ್ಯಂಗೆ ರಜಯಿಲ್ಲೆ ಹೆಂಗಾರ್ ಪುರ್‌ಸೊತ್ತ್ ಮಾಡಿ ಒಂದು ದಿನ ಸತೀಶ ಅಷ್ಟ್ ಕರ್ತ್‌ತೇಳಿ ಹೊರ್‌ಟತ್ ದೊಡ್ಡ ಗೇಟ್ ತೆರ್‌ಕಂಡಿತ್ತ್. ಅವನ ಹೆಸ್‌ರ್ ನೋಡಿ ಜೇಮುನ ಒಳಗೆ

ತಕೊಂಡೋಗಿ ಅಂಗಳಲಿ ನಿಲ್ಸಿತ್ ದೂರಂದ ಕಂಡದೆ ಸತೀಶನ ಕೆಲ್‌ಸ ನಿಜಕ್ಕೂ ಇದ್ ಕೀಟ್‌ಲೆ ಮಾಡ್ತಾಯಿದ್ದ ಸತೀಶನಾ ತಾತ್, 8–10 ಜನ ಕೆಲ್‌ಸ ಮಾಡ್ತಾವಳೊ. ಒಂದು ಬರಿಲಿ ಲಾರಿಗೆ ಲೋಡ್ ಮಾಡಿಕೆ ಕಾಫಿ ಮೂಟೆ ತುಂಬಿಸಿ ಮಡ್‌ಗ್ಯೊಳೊ ಮತ್ತೊಂದು ಕಡೆ ಹೆಣ್ಮಕ್ಕ ವಳ್ಳೆ ಮೆಣ್ಸ್ ರಾಶಿ ಹಾಕ್ತಾವಳೊ ಈ ರಾಶಿಗಳ ಕಂಡ್ ಸೌಮ್ಯನ ತಲೆ ತಿರ್‌ಗಿತ್. ಆಳ್‌ಗಳಿಗೆ ಒಮ್ಮೊಮ್ಮೆ ಕೈಬಾಸೆಲೆ ಹೇಳ್ದು ಹಂಗೆ ಹೋಗ್ತಾ ನೋಡ್ರೆ ಶುಂಠಿ ರಾಶಿನುವುಟ್ಟು. ಮನೆನೂ ಬೆಂಗ್ಳೂರ್ ಸಿಟಿಲಿಯಿರುವಂಗುಟ್ಟು ಅಂತ ಬೆಲೆ ಬಾಳ್‌ವ ಕಾರ್. ಜೀಪ್, ಟ್ರಾಕ್ಟರ್ ಟಿಲ್ಲರ್ ಇನ್ನ್ ಮುಂದೆ ಹೋತು ನೆಲಒರ್ಸಿಕೆ ಮಿಷನ್. ಕಳೆ ಕೀಳಿಕೆ ಮಿಷನ್ ನಾಯಿಗಳೊ ಜಾತಿ ನಾಯಿಗ್ನ ಮನ್‌ಸನ ನುಂಗುವಂಗೊಳೊ. ನಾಯಿ ಬೊಗ್‌ಳ್‌ದ್ ನೋಡಿ ಕೆಲ್‌ಸದವು ಇವಳ್‌ನ ನೋಡ್ದೊ. ಕೆಲ್ಸದವುಕೆ ಹತ್ರನೆ ಲೈನ್‌ಮನೆಗೆ ಕರೆಂಟ್ ನೀರಿಗೆ ಮೋಟಾರ್ ಎಸ್ಟ್ ಸೌಲಭ್ಯವುಟ್ಟು ಹಳ್ಳಿಲಿ ನಿಟ್ಟುಸಿರ್ ಬುಟ್ಟತ್.

ನಾವೂ ಹೊತಾರೆ ಹೊತ್ತು ಗೊತ್ತಿಲ್ಲದೆ ಏಳ್ದು ಡ್ಯೂಟಿಗೆ ಆ ರಷ್‌ಲಿ ಹೋದು ರಸ್ತೆಗೆ ಇಳ್‌ದ ಮ್ಯಾಲೆ ಜೀವನ ಉಳ್ಸಿ ಕಣಕು. ಏನೇನೊ ಸಮಸ್ಯೆಗ ನಾನ್ ಆಗ ಇಂಜಿನಿಯರ್ ಓದ್ತಾವಳೆ ತೇಳ್‌ವ ಹಾಂಕಾರಲಿ ಯಾರ್ ಏನ್‌ಹೇಳ್ರು ತಲೆಗೆ ಹಾಕಣ್‌ತಯಿತ್ತ್‌ಲೆ. ಪಿ.ಯು.ಸಿ. ಓದಿದ ಸತೀಶ ಪ್ರೈವೇಟ್ ಒದ್ತಾವುಟ್ಟು ತೇಳ್‌ಕನ ಮನ್ಸ್‌ಗೆ ಹಚ್ಚಿಕಂಡತ್‌ಲೆ. ಈಗ ಇಂವ ಆಗನ ಸತೀಶ ತೇಳ್ರೆ ನಂಬಿಕೆ ಆಗ್ತಾಯಿಲ್ಲೆ ಸತೀಶ ಎಂ.ಎ. ತೇಳುವ ಬೋರ್ಡು ಗೇಟ್‌ಲಿವುಟ್ಟು ಹಿಂಗೆ ಒಂದರ ಮ್ಯಾಲೆ ಅಲೆ ಹೊಡ್‌ದಂಗೆ ಗ್ಯಾನಾಕೆ ಸುರಾಕನ ಆಶ್ಚರ್ಯ ಆಗಿ ಒಂದು ನಿರ್ಧಾರಕ್ಕೆ ಬಾತ್. ಸರಿ ಯಾರ್ ಏನ್ ಬೇಕಾರು ಹೇಳ್ಲಿ ನಿರ್ಧಾರ ನನ್ನದೇ ತೇಳಿ ತಿರ್‌ಗ್‌ಕನ ಸತೀಶ ಎದ್‌ರ್ ನೆಗಾಡಿಕಂಡ್ ಸಾರಿ ತೇಳಿಕೆ ನಿತ್ತಿತ್.

ಸತೀಶ : ಸೌಮ್ಯ ಆಗಲೆ ಬಂದ ಅಲ್ಲಾ? ಜೀಪುಂದ ಇಳಿಯೊದು ಕಂಡೆ ಕೆಲ್‌ಸದವರ್‌ನ ಒಮ್ಮೆಗೆ ಬುಟ್ಟ್ ಬಾಕೆ ಆದುಲೆ

ಅಂತೂ ಬಂದದ್ ಕುಸಿ ಆತ್. ನೀನ್ ಮನೆಗೆ ಬಂದರೆ ಎಲ್ಲಾ ಗೊತ್ತಾದೆ ಬೆಂಗ್ಳೂರ್ ಸಿಟಿ ಹೆಂಗೆ ಹಳ್ಳಿ ಹೆಂಗೆತ ಗೊತ್ತಾದೆತ ನಾನ್ ನಿನ್ನ ಬಾಕೆ ಹೇಳ್ದ್ ನಿಂಗೆ ಕುಡಿಯಕೆ ಬಚ್ಚಂಕಾಯಿ ಜ್ಯೂಸ್ ತನ್ನೆತ ಒಳಗೆ ಹೋತು. ಸ್ವತಃ ಅಂವನೆ ಜ್ಯೂಸ್ ಮಾಡಿ ಐಸ್ ಹಾಕಿತಂದದ್ ನೋಡಿ ಅವ್ಳಿಗೆ ಕುಸಿನು ಆಶ್ಚರ್ಯನೂ ಆತ್. ಇಷ್ಟೊಂದಿದ್ದರೂ ಒಂದಿಸ್ಟ್ ಗರ್ವ ಇಲ್ಲೆಪ್ಪ.

ತ್ವಾಟ ತೋರ್ಸಿಕೆ ಸೌಮ್ಯನ ಕರ್‌ಕಂಡ್ ಹೋತು ಹೇಳಿಕೆ ಸುರು ಮಾಡ್ತ್ ನಾನ್ ಪಿ.ಯು.ಸಿ. ಓದಿ ಮನೆಲೆ ಇದ್ದೆಲಾ ಅಪ್ಪಂಗು ಕೆಲ್ಸ ಮಾಡಿಕೆ ಕಷ್ಟ ಆತ್. ಆಗ ಆಸ್ತಿನೆಲ್ಲ ಇದ್ದೊಬ್ಬ ಮಂಜ ನೀನೆ ನೋಡಿಕ ತ್ತೇಳಿ ಎಲ್ಲ ನಂಗೇ ವಹಿಸಿತ್. ಅಪ್ಪ ಮಾಡ್ದ್ ಸುಮಾರ್ ಇತ್ತ್. ಆದರೆ ಇಸ್ಟ್ ಅಭಿವೃದ್ಧಿ ಆಗಿತ್ತ್‌ಲೆ. ಗಿಡಗ ಸಣ್ಣದಿತ್ತ್. ಈಗ ನಾನ್ ಜವಾಬ್ದಾರಿ ತಕಂಡ ಮ್ಯಾಲೆ ನನ್ನ ಇಷ್ಟದ ಪ್ರಕಾರ ಒಂದೊಂದೆ ಮಾಡಿಕೆ ಹೋದೆ ಈಗ ಬಾಳೆಲಿ ವಳ್ಳ ಫಸಲ್, ಮೆಣ್ಸಲಿ ಫಸಲ್, ಅಪ್ಪ ಮಾಡ್ದ ಕಾಫಿ ತ್ವಾಟಲಿ ಪಸ್‌ಲ್‌ಗೆ ಒಳ್ಳ ಬೆಲೆನೂ ಬಾತ್. ಬಾಳೆ ಗೊನೆಗ, ಮಾವ್‌ನ ಮಿಡಿ ಕಿತ್ತುಳಿ ನಿಂಬುಳಿ ಸಪೋಟ ಇದರ್ನೆಲ್ಲ ಕಣ್ಣ್ ಬುಟ್ಟ್ ನೋಡ್ತ್ ಸೌಮ್ಯ.

ಇನ್ನ್ ಗದ್ದೆಲಿ ಕೆರೆ ತೋಂಡಿಸಿಟ್ಟು ಅದರ್ಲಿ ಮೀನ್‌ಗ ನೋಡ್‌ದಷ್ಟ್ ನೋಡೊಕು ತೇಳ್‌ವಂಗಿತ್ತ್. ತೆಗ್‌ದ ಮಣ್ಣ್ ಮ್ಯಾಲೆ ಏರಿನ ಸಮ ತಟ್ಟ್ ಮಾಡಿ ಕಾಫಿ ಯಾಲಕ್ಕಿ ನರ್ಸರಿ ಹೂನ ಗಿಡ ನರ್ಸರಿ ಮಾರಾಟಕ್ಕೆ ವ್ಯವಸ್ಥೆ ಇಷ್ಟೆಲ್ಲ ಇದ್ದರೂ ಹಳ್ಳಿಲಿ ಕೆಲ್ಸ ಮಾಡಿಕೆ ಗೂಡೆಗ ಒಪ್ಪುದುಲೆ. ನಾನಾದರೆ ಓದಿ ಇಂಜಿನಿಯರ್ ಸಂಪಾದನೆನುವುಟ್ಟು ಆದರೆ ಸಣ್ಣ ಸಣ್ಣ ಕೆಲ್‌ಸಕ್ಕಾಗಿ ಸಿಟಿಗೆ ಹೋಗಿ ದುಡಿಯೊದು ನೋಡಿ ಸೌಮ್ಯಂಗೆ ಗೂಡೆಗಳ ಬಗ್ಗೆನೆ ಬೇಜಾರಾತ್. ಕೆಲು ಕಷ್ಟದ ವಿಚಾರಗಳ್‌ನ ಮನೆಲು ಹೇಳಿಕಣಿಕಾಗದಸ್ಟ್ ಪರಿಸ್ಥಿತಿ ಇದ್ದದೆ ಇಂತ ಹಳ್ಳಿ ಹೈದಗಳ್‌ನ ಮೊದುವೆ ಮಾಡಿಕಂಡರೆ ರಾಣಿನಂಗೆ

ಹಂಗಿಲ್ಲದೆ ಬದ್‌ಕಕ್.

ಒಟ್ಟಿಗೆ ಸೌಮ್ಯಳನ ನಿರ್ಧಾರ ಗಟ್ಟಿ ಆತ್. ಮುಂದೆನ ರಜಲಿ ಬಾಕೆ ಮುಟ್ಟ ಇಂವನ ಮೊದುವೆ ಆಗದರೆ ನಾನೆ ಇಂವನ ಯಾಕೆ ಕೇಳಿಕಾಗದ್? ನಂಗೂ ಮೂವತ್ತು ದಾಟಿತ್ ಅಂವ ನಂಗೆ ಸೊಲ್ಪ ದೊಡ್ಡಂವ.

ನಾನ್ ಇಂಜಿನಿಯರ್ ಆದರೇನಾಕು? ಇಲ್ಲೆ ಹತ್ರ ಕೆಲ್‌ಸ ಮಾಡ್ದು ಇಲ್ಲರೆ ಸೊಂತ ಉದ್ಯೋಗ ಮಾಡ್ದು. ಮನೆ ಹತ್ರ ಇದ್ದಂಗು ಆತ್. ಈಗೆಲ್ಲ ಹೆಣ್ಮಕ್ಕಳಿಗೆ ಗೌರವ ಜ್ಯಾಸ್ತಿ ಬ್ಯಾಂಕ್ ಸಾಲ ಸರ್ಕಾರದ ಹಣ ಎಲ್ಲಾ ಸಿಕ್ಕಿರೆ ನನ್ನ ಕೈ ಕೆಳ್‌ಗೆ 10 ಜನ ಕೆಲ್‌ಸ ಮಾಡಕಲಾ? ಇಲ್ಲಿ ಓದಿದ ಹೈದಂಗ ಎಸ್ಟ್‌ವಳೊ? ಯಾರ್‍ನಾರ್‍ನೊ ಮೊದುವೆ ಮಾಡ್‌ಕಂಡ್ರೆ ಇತ್ತನದೆಲ್ಲ ಮರ್‍ತ್ ಹೋದೆ.

ನಾನೆ ಈಗ ಬೊಳಿ ಬುಡಿಕೆ ಮುಂದೆ ಓಡ್ನೆ ರಾತ್ರೆ ಎಷ್ಟೊತ್ತಿಗೊ ಏನೊ ಬಾದು! ಆ ಪಿ.ಜಿ. ಅಡ್‌ಗೆ ಊಟ ಈ ಹಳ್ಳಿಲಿ ಯಾವ ಚಿಂತೆಯಿಲ್ಲೆ. ಹಳ್ಳಿನ ನೋಡಿಕೆ ಪ್ರವಾಸಿಗರ್ ನಮ್ಮ ಊರಿಗೆ ಬಂದವೆ. ಹಂಗಾರೆ ಇಲ್ಲೇನ್ ವಿಶೇಷವುಟ್ಟು? ಲಕ್ಷ ಸಂಪಾದನೆ ಅಪ್ಪವ್ವನ ದೃಷ್ಟಿಲಿ ಮಕ್ಕ ದೊಡ್ಡ ಕೆಲ್‌ಸಲಿ ವಳೊತ ಜಂಬ ಬ್ಯಾರೆ ಮಕ್ಕಳ ಪಾಡ್ ಇವ್‌ಕೇನ್ ಗೊತ್ತು ಎಲ್ಲಿನೋಡ್ರು ಹಣ ಹಣ ಹಣ!

'ಈಗ ನನ್ನ ನಿರ್ಧಾರನೆ ಸರಿ ಜನ ನೆಗಾಡುವೊ ರಾಮಣ್ಣ ನ ಮಗ್‌ಳ್ ಅಸ್ಟ್ ಓದಿ ವಾಪಾಸ್ ಊರಿಗೆ ಬಾತ್ ಗಡ. ಆಗ ನನ್ನನ ಇಸ್ಟ್ ಓದ್ಸಿದ ಅಪ್ಪವ್ವಂಗು ಬ್ಯಾಜಾರ ಆದೆ. ಮರ್ಯಾದಿ ಹೋತುತ ಬಯ್‌ಕಂಡವೆ ಮೊಕ ಬಂಗ ಆದು!

ಆದರೆ ಇಂದ್‌ನ ನಮ್ಮೂರ್‌ನ ಸತೀಶನ ನೋಡ್ರೆ ಕಂಡಿತಾ ಯಾರೂ ಒಪ್ಪಂದಿರಿಕೆ ಸಾಧ್ಯಯಿಲ್ಲೆ. ನಂಗೂ ಸೆರಿಯಾದವು ಸಿಕ್ಕೊಕುತ್ತಾದರೆ ಬೆಂಗ್ಳೂರಿಗೆ ಹೋಕು ನಂಗೂ ಗಂಡ್

ನೋಡಿ ನೋಡಿ ಸಾಕಾಗುಟ್ಟು ನಾನ್ ಒಪ್ಪಿದೆ ತೇಳ್ರೆ ಯಾರೂ ಏನೂ ಹೇಳುವಂಗಿಲ್ಲೆ!

ಯಾರ್ ಏನಾರ್ ಹೇಳಿ ಕಣಲಿ ನನ್ನದಂತೂ ಇದೇ ನಿರ್ಧಾರ ಮುಂದೆ ಮಾತೇಯಿಲ್ಲೆ.

ಸೌಮ್ಯ : ಸತೀಶ ನಾನ್ ಬನ್ನೆ ಆತಾ? ಇನ್ನೊಮ್ಮೆ ಬ್ಯಾಗ ಬಾಕುಟ್ಟು. ಆಗ ಮಾತಾಡ್ನೊ ತೇಳಿ!! ಅಪ್ಪನ ಜೀಪುನ ಡ್ರೈವ್ ಮಾಡಿಕಂಡ್ ಇಲ್ಲಿಗೆ ಮುಟ್ಟ ಬಂದ್ ಮಾತಾಡ್ಸಿ ಹೋದ ಸೌಮ್ಯಂಗೆ ಕೈಯ್ಯಾಡ್‌ಸ್‌ಕನ ಮನ್ನೊಳಗೆ ಏನೋ ಕುಸಿ ಆತ್. ಇಂದ್ ಸಾದಾ ಡ್ರೆಸ್‌ಲಿ ಎಸ್ಟ್ ಲಾಯ್ಕ ಕಂಡದೆ. ಗ್ಯಾನವಾಡಿಕಂಡೇ ಸ್ವಲ್ಪ ದೂರ ಹೋಕನ ಮುಟ್ಟ ಕೈಯಾಡ್ಸ್‌ತ್ತಾ ನೋಡ್ತಾಯಿತ್.

ಅಪ್ಪನ ಜೀಪುನ ಡ್ರೈವ್ ಮಾಡಿಕಂಡ್ ಇಂಜಿನಿಯರ್ ಗೂಡೆ ಮಾತಾಡ್‌ಸಿಕೆ ಬಂದ್ ಅರ್ಧಗಂಟೆಯಿದ್ದ್ ಹೋದ ಸೌಮ್ಯನ ಬಗ್ಗೆ ಅಭಿಮಾನ ಬಾತ್. ಜೀಪುನ ಹೆಂಗೆ ಓಡ್‌ಸ್‌ತಾವುಟ್ಟು ತೇಳಿ ಕೈ ಆಡ್‌ಸಿದಕ್ಕೆ ತಾನೂ ಸ್ವಲ್ಪ ಹೊತ್ತು ಹೋದ ದಾರಿನೆ ನೋಡ್ತಾಯಿತ್. ಇಂವ ಹಿಂಗೆ ನೋಡ್ತಾಯಿದ್ದದರ್‌ನ ನೋಡಿ ಕೆಲ್‌ಸದವು ತಮಾಸಿ ಮಾಡ್ದೊ ಏನ್ ಸತೀಶಣ್ಣ ಗೂಡೆ ಹೋದ ವ್ಯಾಲೆ ದಾರಿನೆ ನಿತ್ ನೋಡ್ತಾ ವಳರಿಯಲಾ?

ಸತೀಶ : ಅಲ್ಲಾ ಎಂತ ಸ್ಪೀಡ್ ಜೀಪು ಬುಟ್ಟ್ ಕಂಡ್ ಹೋತು ಅದ್ಕೆ ನೋಡ್ತಾಯಿದ್ದೆ. ನಂಗೆ ಸಿಕ್ಕುವ ಗೂಡೆ ಹಿಂಗೆ ಜೀಪು ಓಡ್ಸಿರೆ ನಂಗೆಸ್ಟ್ ವಳ್ಳದಿತ್ತಲ್ಲ? ಅದ್ಕೆ ನೋಡ್ತಾಯಿದ್ದೆ. ಅದೂ ಆ ಹೊಸ ಮಹೇಂದ್ರ ಜೀಪುನ?!!

ಹೌದು ಹೌದು ಎಲ್ಲವು ನೆಗಾಡುವೆ.

ಸರಿ ಸರಿ... ನಿಮ್ಮ ನಿಮ್ಮ ಕೆಲ್‌ಸ ನೋಡಿ ಮೂಟೆಗಳಿಗೆಲ್ಲ ಟಾರ್ಪಾಲ್ ಹಾಕಿ ಮುಚ್ಚಿ ಮಡ್‌ಗಿ ಮಳೆ ಬರುವಂಗುಟ್ಟು.

ಚೆಲ್ಲಾಟ

ನಿಲ್ಲ್ ನಿಲ್ಲ್‌ಯಾ ಏ....ಹೈದ......
ನಿನ್ನ ನಿಜನಾಮ ಏನ್ ಹೇಳ್‌ಯಾ!?
ಹೂನ ಮಾಲೆ ಯಾಕೆ
ಮಂತ್ರಿ ಪಟ್ಟ ಬೇಕೆ?
ಬಂದ ಕಾರ್ಯ ಹೇಳ್ ಏ....ಹೈದ॥?

ನಿಲ್ಲ್ ನಿಲ್ಲ್‌ನೆ ಏ.....ಗೂಡೆ...
ಮನ್ಸ್ ಬಿಚ್ಚಿ ಮಾತಾಡ್ ಬಾ ಗೂಡೆ
ಮನ್ಸ್‌ಲಿ ಏನುಟ್ಟು ಹೇಳ್ ನೀನೆ॥
ಗಿಣ್‌ಕ್ ಗಿಣ್‌ಕ್ ಕಾಲ್‌ಗೆಜ್ಜೆ
ವಯ್ಯಾರದ ಮಿಣ್‌ಕಿ ಗೂಡೆ
ಬಂದ ಕಾರ್ಯ ಹೇಳ್‌ನೆ ಗೂಡೆ॥

ನಿಲ್ಲ್ ನಿಲ್ಲ್‌ಯ ಏ.... ಹೈದ.....?
ನಿನ್ನ ನಿಜ ನಾಮಾ ಹೇಳ್ ಯಾ
ಬಂದ ಕಾರ್ಯ ಹೇಳ್ ಏ ಹೈದ॥

ಕೈಲಾಗದವನೆ ಜಗ್ಗದಂವನೆ
ನಾಗನ ಕಲ್ಲ್ ಸುತ್ತಿದವನೆ
ಕೋಗಿಲೆ ಹಂಗೆ ಕಾಂಬೊವನೆ.....ಏ....ಹೈದ॥?

ಕೊಟ್ಟು ತಕ್ಕಂಡ್ ನಾನ್ ಬನ್ನೆ
ಕತ್ತಿ ಹಿಡ್ಕಂಡ್ ತ್ವಾಟಕೆ ಬಾ
ಎದ್‌ರ್ ಬದ್‌ರ್ ನಿತ್ತ್ ಮಾತಾಡೊನ ॥

ಕೊಟ್ಟುಲಿ ಮಣ್ಣ್ ಎಳ್‌ದಂಗೆ
ಕರಕರ ಕತ್ತಿ ಕೂಡ್ಸಿದಂಗೆ
ಸೋತ್ ಸುಣ್ಣ ಆದವರಂಗೆ॥

ವಯ್ಯಾರದ ಮಿಣ್‌ಕಿ ಗೂಡೆ
ಬಂದ ಕಾರ್ಯ ಹೇಳ್ ನೀ ಒಮ್ಮೆ॥
ಕರಿ ಚುಕ್ಕೆನ ಚೆಕ್ಕ್‌ಸೀರೆ
ಹೊತ್ಕೊಂಡೊಳ ಮೊಸರು ಮಡ್ಕೆ
ಕೈಲಿ ಚೊಂಬು ತುಪ್ಪಕೆ॥
ಯಾಲಕ್ಕಿ ಮಾಲೆ ಹಣ್ಣಾದಂಗೆ
ಗೊನೆ ಬಾಗಿ ತೂಗಿದಂಗೆ
ವಯ್ಯಾರದ ಮಿಣ್‌ಕಿ ಗೂಡೆ
ಬಂದ ಕಾರ್ಯ ಹೇಳ್ ಏ....ಗೂಡೆ।

ಕೈಲಿವುಟ್ಟು ಮೊಬೈಲ್ ಫೋನ್
ನಾಕ್ ಸಲ ಮಾತಾಡಿಯ ನೀನ್ ॥
ಹೇಳಿಯ ಮಿಣ್‌ಕಿ ನಂಗೆ ನೀನ್
ಬಂದ ಕಾರ್ಯ ಹೇಳ್ ಏ ಹೈದ॥

ವಯ್ಯಾರದ ಮಿಣ್‌ಕಿ ಗೂಡೆ
ಬಂದ ಕಾರ್ಯ ಹೇಳ್ ಏ....ಗೂಡೆ॥

ನಿಲ್ಲ್ ನಿಲ್ಲ್‌ಯಾ ಏ....ಹೈದ......
ನಿನ್ನ ನಿಜನಾಮ ಏನ್ ಹೇಳ್‌ಯಾ!?

* * * * *



ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ

ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವು ಅವಂದೂರು ಗ್ರಾಮದ ಪಟ್ಟಡ ಮುತ್ತಣ್ಣ ಮತ್ತೆ ನೀಲಮ್ಮ ದಂಪತಿಗಳ ಮಗ್‌ಳು. ಇವು ಪಾಲೂರ್‌ನ ಬೈತಡ್ಕ ಬೆಳ್ಯಪ್ಪನವರ್‌ನ ಮದುವೆ ಆದೊ. ಪತಿ ಬೆಳ್ಯಪ್ಪ ವಾಯುಪಡೆ ಮತ್ತೆ ಜೀವವಿಮಾ ಕಂಪೆನಿಲಿ ಚಾಕ್‌ರಿ ಮಾಡಿ ನಿವೃತ್ತಿ ಹೊಂದಿದ ಇವು ಈಗ ಕೃಷಿಲಿ ತೊಡಗಿಸಿ ಕೊಂಡೊಳೊ. ಗೃಹಿಣಿಯಾದ ಇವು ಇಬ್ಬೊರು ಗಂಡ್‌ಮಕ್ಕ ಹಂಗೆ ಪಿಳ್ಳಿಕಳೊಟ್ಟಿಗೆ ಮಡಿಕೇರಿ ನಗರಲಿ ನೆಲೆನಿತ್ತೊಳೊ.

ಶ್ರೀಮತಿ ಜಾನಕಿ ಬೆಳ್ಯಪ್ಪನವು ಸಾಹಿತಿ, ಜನಪದ ಕಲಾವಿದೆಯಾಗಿ ಕಳೆದ 18 ವರ್ಷ ಗಳ್‌ಂದ ಸಾಹಿತ್ಯ ಸೇವೆ ಮಾಡ್ತಾವಳೊ. ಅಳಿತಾ ಇರುವ ಸಾಹಿತ್ಯ ಕಲೆಗಳ್‌ನ ಸಂಗ್ರಹಿಸುದು ಇವರ ಹವ್ಯಾಸ. ಜಿಲ್ಲೆ ಮತ್ತೆ ರಾಜ್ಯಂದ ರಾಜ್ಯ ಪ್ರಶಸ್ತಿ, ಗೌರಮ್ಮ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಅಲ್ಲದೆ ಹಲವಷ್ಟು ಪ್ರಶಸ್ತಿಗಳ್‌ನ ಇವರ ಸೆರ್‌ಗ್‌ಲಿ ಇಸಿಕಂಡ್ ಅರೆಭಾಷೆ ಬೆಳವಗಣಿಗೆಗೆ ಪ್ರಯತ್ನಿಸ್‌ತೊಳೊ. ಈಗಾಗಲೇ ಇವು 'ಹಸೆಮಣೆ', 'ಅಕ್ಷಯ' ಮತ್ತೆ 'ಬೇರ್‌ಲಿ ಚಿಗ್‌ರ್' ತೇಳುವ ಮೂರ್ ಕೃತಿಗಳ್‌ನ ಹೊರ ಹೊಮ್ಮಿ ಸೊಳೊ. 'ಬೆಳ್ಳಿ ಚುಕ್ಕೆಗ'ಂತೇಳುವ ಅರೆಭಾಷೆ ನಾಟಕ ಸಂಕಲನ ಇವು ಬರ್ದ ಮೂರನೇ ಕೃತಿ.

ಇವರ ವಿಳಾಸ :

ಬೈತಡ್ಕ ಜಾನಕಿ ಬೆಳ್ಯಪ್ಪ

ರೇಸ್‌ಕೋರ್ಸ್ ರಸ್ತೆ, ಮಡಿಕೇರಿ

Ptd @ Sri Krishna Printers, Madikri. Mob : 94481 35592